ಸೋಮವಾರ, ನವೆಂಬರ್ 13, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 314 | ಪುಟ 12
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಶಿಕ್ಷಣ**
ಆಟಿಸಂ ಲಕ್ಷಣ ಹೊಂದಿರುವ ಮಕ್ಕಳಿಗೆ ಬೇಕಿರುವುದು ತುಂಬು ಪ್ರೀತಿ. ಕಲಿಕೆಯ ಜತೆಗೆ ಪ್ರೀತಿಯ ಹೊಳೆಯನ್ನು ಹರಿಸಿದರೆ ಈ ಮಕ್ಕಳು ಸ್ವಾವಲಂಬಿಯಾಗುವತ್ತ ದಿಟ್ಟ ಹೆಜ್ಜೆ ಇಡಲಿದ್ದಾರೆ.





| ಸೆನ್ಸೆಕ್ಸ್ | ನಿಫ್ಟಿ |
|---|---|
| 65,259 ▲ | 19,525 ▲ |

ಕೆಪಿಎಸ್‌ಸಿ ಜಟಾಪಟಿ: ಅಂತಿಮ ಆಯ್ಕೆ ಪಟ್ಟಿ, ನೇಮಕಾತಿಯ ಹೊಸ ಅಧಿಸೂಚನೆಗೆ ಕಂಟಕ

# ನೇಮಕಾತಿಗೆ ಅಡ್ಡಿಯಾದ ಸಂಘರ್ಷ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ, ಸದಸ್ಯರು ಹಾಗೂ ಕಾರ್ಯದರ್ಶಿ ನಡುವೆ ಮತ್ತೆ ತಲೆದೋರಿರುವ 'ಸಂಘರ್ಷ', ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ), ಸಹಾಯಕ ಎಂಜಿನಿಯರ್ (ಎಇ) ಸೇರಿ 1,000ಕ್ಕೂ ಹೆಚ್ಚು ವಿವಿಧ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆಗೆ ಕಂಟಕವಾಗಿ ಪರಿಣಮಿಸಿದೆ. ಅಲ್ಲದೆ, 2 ಸಾವಿರಕ್ಕೂ ಹೆಚ್ಚು ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಪ್ರಕಟಣೆಗೂ ಅಡ್ಡಿಯಾಗಿದೆ.

ಈ ಜಟಾಪಟಿಗೆ ಸಂಬಂಧಿಸಿದ ದೂರು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರ ಅಂಗಳಕ್ಕೆ ತಲುಪಿದೆ. ಕಾರ್ಯದರ್ಶಿ ಕೆ.ಎಸ್. ಲತಾ ಕುಮಾರಿ ತಮ್ಮ ವರ್ತನೆಯನ್ನು ಸರಿ-ಪಡಿಸಿಕೊಳ್ಳುವಂತೆ ಸೂಚಿಸಬೇಕು ಎಂದು ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮತ್ತು ಸದಸ್ಯರು ಮನವಿ ಮಾಡಿದ್ದಾರೆ.

ಆ ಬೆನ್ನಲ್ಲೆ ಅಧ್ಯಕ್ಷರಿಗೆ ಪತ್ರ ಬರೆದಿರುವ ಲತಾ ಕುಮಾರಿ, 'ಕಾರ್ಯದರ್ಶಿಯ ಹೇಳಿಕೆ ಅಥವಾ ಅಭಿಪ್ರಾಯಗಳು ಆಯೋಗದ ನಿರ್ಣಯಗಳಿಗೆ ಪೂರಕವಾಗಿ ಇಲ್ಲದೇ ಇದ್ದರೆ ಅದಕ್ಕೆ ಸಂಬಂಧಿಸಿದ ನಡಾವಳಿ ಗಳಲ್ಲಿನ ಕಾರ್ಯದರ್ಶಿಯ ಅಭಿಪ್ರಾಯಗಳನ್ನು ತೆಗೆದುಹಾಕುವಂತೆ ಒತ್ತಡ ಹೇರುವುದನ್ನೂ ಮತ್ತು ಅಂತಹ ನಿರ್ಣಯಗಳಿಗೆ ಸಹಿ ಹಾಕುವಂತೆ ಒತ್ತಡ ತರುವುದನ್ನೂ ಗಂಭಿರವಾಗಿ ಪರಿಗಣಿಸಬೇಕಾಗಿದೆ' ಎಂದಿದ್ದಾರೆ.

ಈ ಮಧ್ಯೆ, ಆಯೋಗದ ಹೆಚ್ಚಿನ ಸದಸ್ಯರು ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಮತ್ತು ಅಧಿಸೂಚನೆ ಹೊರಡಿಸುವುದರ ಪರವಾಗಿದ್ದಾರೆ ಎಂದೂ ಗೊತ್ತಾಗಿದೆ.

**ಏನಿದು ಜಟಾಪಟಿ?:** 'ಇದೇ 7ರಂದು ನಿಗದಿಯಾಗಿದ್ದ ಆಯೋಗದ ಸಭೆಗೆ ಕಾರ್ಯದರ್ಶಿ ಹಾಜರಾಗಿಲ್ಲ. ಅಂದು ಬೆಳಿಗ್ಗೆ 11 ಗಂಟೆಯಿಂದ 1 ಗಂಟೆಯವರೆಗೂ (ಸುಮಾರು 2 ಗಂಟೆ) ಎಲ್ಲ ಸದಸ್ಯರು ಕಾಯುತ್ತಿದ್ದರೂ ಸಭೆ ಆರಂಭ ಆಗಿಲ್ಲ. ಈ ಕಾರ್ಯವೈಖರಿ, ಸಂವಿಧಾನದ ಅಡಿಯಲ್ಲಿ ಸ್ಥಾಪಿತಗೊಂಡಿರುವ ಆಯೋಗಕ್ಕೆ ಮತ್ತು ಆಯೋಗದ ಸದಸ್ಯರ ಗೌರವಕ್ಕೆ ಧಕ್ಕೆ ತರುವಂತದ್ದಾಗಿದೆ. ಇದು ಕಾರ್ಯದರ್ಶಿಯ ನಿರ್ಲಕ್ಷ್ಯ ಧೋರಣೆ. ಸಭೆಯನ್ನು ರದ್ದುಪಡಿಸಬೇಕು' ಎಂದು ಸಭೆಗೆ ಬಂದಿದ್ದ ಸದಸ್ಯರು ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರಿಗೆ ಟಿಪ್ಪಣಿ ನೀಡಿದ್ದರು.

11ನೇ ಪುಟ ನೋಡಿ

## ಪರೀಕ್ಷೆಯನ್ನೇ ಮುಂದೂಡಲು ಮುಂದಾಗಿದ್ದ ಆಯೋಗ!

ಆಯೋಗದ ಅನುಮೋದನೆ ಪಡೆಯದೆ ಲೆಕ್ಕ ಸಹಾಯಕರು ಮತ್ತು ಸಹಕಾರ ಸಂಘಗಳ ನಿರೀಕ್ಷಕರ ಹುದ್ದೆಗಳಿಗೆ ನ. 4 ಮತ್ತು 5ರಂದು ನಿಗದಿಪಡಿಸಿದ್ದ ಪರೀಕ್ಷೆಯನ್ನು ಮುಂದೂಡುವಂತೆ ನ. 2ರಂದು ನಡೆದ ಸಭೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರು ನಿರ್ಣಯಿಸಿದ್ದರು. ಈ ಬಗ್ಗೆ ಕಾರ್ಯದರ್ಶಿಗೆ ಟಿಪ್ಪಣಿ ಮೂಲಕ ನಿರ್ದೇಶನ ನೀಡಲಾಗಿತ್ತು.

ಆದರೆ, ಕೊನೆ ಕ್ಷಣದಲ್ಲಿ ಪರೀಕ್ಷೆ ಮುಂದೂಡಲು ಕಾರ್ಯದರ್ಶಿ ನಿರಾಕರಿಸಿದ್ದರು. ಈ ಬಗ್ಗೆ ಅಧ್ಯಕ್ಷರಿಗೆ ಟಿಪ್ಪಣಿ ನೀಡಿದ್ದ ಕಾರ್ಯದರ್ಶಿ, 'ಪರೀಕ್ಷೆ ಮುಂದೂಡುವ ನಿರ್ಣಯ ಒಪ್ಪಲು ಅಸಾಧ್ಯವಾಗಿತ್ತು. ಏಕಮುಖವಾಗಿ ತೆಗೆದುಕೊಂಡ ನಿರ್ಣಯವು ಆಯೋಗದ ಮೇಲೆ ಇದ್ದ ನಂಬಿಕೆಗೆ ಬಲವಾದ ಪೆಟ್ಟು ನೀಡುವಂತಿತ್ತು. ಈ ವಿಷಯವನ್ನು ಮುಖ್ಯ ಕಾರ್ಯದರ್ಶಿಯ ಗಮನಕ್ಕೆ ತರಲಾಗಿದ್ದು, ವೇಳಾಪಟ್ಟಿಗೆ ಘಟನೋತ್ತರ ಅನುಮೋದನೆ ಪಡೆಯಲಾಗುವುದು ಎಂದು ತಿಳಿಸಿದ ಬಳಿಕವೂ ಪುಟಗಟ್ಟಲೆ ಟಿಪ್ಪಣಿ ಬರೆದಿರುವುದು ನೋವುಂಟು ಮಾಡಿದೆ' ಎಂದಿದ್ದರು.

> **ನಿಯಮದ ಪ್ರಕಾರವೇ ಕೆಲಸ ಮಾಡಿದ್ದೇನೆ. ಸಾಂವಿಧಾನಿಕ ಸಂಸ್ಥೆಯಾಗಿರುವ ಕೆಪಿಎಸ್‌ಸಿಯನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗಲು ಅವಕಾಶ ನೀಡುವುದಿಲ್ಲ.**
> **ಕೆ.ಎಸ್. ಲತಾಕುಮಾರಿ**
> ಕಾರ್ಯದರ್ಶಿ, ಕೆಪಿಎಸ್‌ಸಿ

> **ನ. 4, 5ರಂದು ನಿಗದಿಪಡಿಸಿದ್ದ ಪರೀಕ್ಷೆ ಮುಂದೂಡುವಂತೆ ಆಯೋಗ ಸೂಚಿಸಿಲ್ಲ. ನಿಯಮಗಳ ಪ್ರಕಾರ ಪರೀಕ್ಷೆ ನಡೆಸಲು ಕಾರ್ಯದರ್ಶಿಗೆ ಸೂಚನೆ ನೀಡಲಾಗಿತ್ತು**
> **ಶಿವಶಂಕರಪ್ಪ ಎಸ್. ಸಾಹುಕಾರ್**
> ಅಧ್ಯಕ್ಷ, ಕೆಪಿಎಸ್‌ಸಿ

| ಆಯ್ಕೆ ಪಟ್ಟಿ ಪ್ರಕಟಣೆಗೆ ಬಾಕಿ | |
|---|---|
| ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | |
| ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) | 25 |
| ಸಹಾಯಕ ಎಂಜಿನಿಯರ್ (ಎಇ) | 288 |
| ಕಿರಿಯ ಎಂಜಿನಿಯರ್ (ಎಇ) | 136 |
| ಒಟ್ಟು | 449 |
| ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ | |
| ನಗರ ಯೋಜಕರು (ಎಇ) | 23 |
| ಕಿರಿಯ ಎಂಜಿನಿಯರ್ (ಜೆಇ) | 60 |
| ಒಟ್ಟು | 83 |
| ಪೌರಾಡಳಿತ ನಿರ್ದೇಶನಾಲಯ | |
| ಕಿರಿಯ ಎಂಜಿನಿಯರ್ | 89 |
| ಇತರ ವಿವಿಧ ಹುದ್ದೆಗಳು | 321 |
| ಜಲ ಸಂಪನ್ಮೂಲ ಇಲಾಖೆ | |
| ಕಿರಿಯ ಎಂಜಿನಿಯರ್ (ಜೆಇ) | 169 |

# ಭಾರತ ಅಜೇಯ ಓಟ




**ಬೆಂಗಳೂರು:** ಶ್ರೇಯಸ್ ಅಯ್ಯರ್ ಮತ್ತು ಕೆ.ಎಲ್.ರಾಹುಲ್ ಅವರ ಭರ್ಜರಿ ಶತಕಗಳ ನೆರವಿನಿಂದ ಭಾರತ ತಂಡ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು 160 ರನ್‌ಗಳಿಂದ ಮಣಿಸಿತು. ರೋಹಿತ್ ಶರ್ಮಾ ಬಳಗ ಎಲ್ಲ 9 ಪಂದ್ಯಗಳನ್ನು ಗೆದ್ದು ಸೆಮಿಫೈನಲ್ ಪ್ರವೇಶಿಸಿದೆ.

**ಸ್ಕೋರ್**

| ಭಾರತ | ನೆದರ್ಲೆಂಡ್ಸ್ |
|---|---|
| 4ಕ್ಕೆ 410 (50 ಓವರ್) | 250 (47.5 ಓವರ್) |

**ಫಲಿತಾಂಶ: ಭಾರತಕ್ಕೆ 160 ರನ್ ಜಯ**

**ಶ್ರೇಯಸ್ ಅಯ್ಯರ್**
ಅಜೇಯ 128
ಎಸೆತ: 94
ಬೌಂಡರಿ: 10
ಸಿಕ್ಸರ್: 5

**ಕೆ.ಎಲ್.ರಾಹುಲ್**
102
ಎಸೆತ: 64
ಬೌಂಡರಿ: 11
ಸಿಕ್ಸರ್: 4

- ಕೆ.ಎಲ್.ರಾಹುಲ್ ಏಕದಿನ ವಿಶ್ವಕಪ್‌ನಲ್ಲಿ ಭಾರತದ ಪರ ವೇಗದ ಶತಕ (62 ಎಸೆತ) ಸಾಧನೆ ಮಾಡಿದರು. ರೋಹಿತ್ (63 ಎ.) ಹೆಸರಿನಲ್ಲಿದ್ದ ದಾಖಲೆ ಮುರಿದರು
- ಏಕದಿನ ಪಂದ್ಯವೊಂದರಲ್ಲಿ ಭಾರತದ ಅಗ್ರಕ್ರಮಾಂಕದ ಐವರು ಬ್ಯಾಟರ್‌ಗಳು 50ಕ್ಕಿಂತ ಅಧಿಕ ರನ್‌ಗಳಿಸಿದ್ದು ಇದೇ ಮೊದಲು

ವಿವರ ಪುಟ 11




# ಇಸ್ರೇಲ್ ನಡೆಗೆ ಖಂಡನೆ: ವಿಶ್ವಸಂಸ್ಥೆ ನಿರ್ಣಯವನ್ನು ಬೆಂಬಲಿಸಿದ ಭಾರತ

**ವಿಶ್ವಸಂಸ್ಥೆ (ಪಿಟಿಐ):** ಪ್ಯಾಲೆಸ್ಟೀನ್‌ನ ಆಕ್ರಮಿತ ಪ್ರದೇಶಗಳಲ್ಲಿ ಇಸ್ರೇಲ್‌ನ ವಸಾಹತು ಚಟುವಟಿಕೆ ಖಂಡಿಸಿ ವಿಶ್ವಸಂಸ್ಥೆಯು, ಸಾಮಾನ್ಯ ಸಭೆಯಲ್ಲಿ ಮಂಡಿಸಿದ ನಿರ್ಣಯದ ಪರ ಭಾರತ ಸೇರಿದಂತೆ 145 ರಾಷ್ಟ್ರಗಳು ಮತ ಚಲಾಯಿಸಿವೆ.

'ಪೂರ್ವ ಜೆರುಸಲೇಂ ಹಾಗೂ ಸಿರಿಯಾದ ಗೋಲನ್ ಸೇರಿದಂತೆ ಪ್ಯಾಲೆಸ್ಟೀನ್‌ನ ಆಕ್ರಮಿತ ಪ್ರದೇಶದಲ್ಲಿ ಇಸ್ರೇಲ್ ವಸಾಹತು ಚಟುವಟಿಕೆ' ಶೀರ್ಷಿಕೆಯಡಿ ಕರಡು ನಿರ್ಣಯ ಸಿದ್ಧ-ಪಡಿಸಲಾಗಿತ್ತು. ವಿಶ್ವಸಂಸ್ಥೆಯ ವಿಶೇಷ ರಾಜಕೀಯ ಹಾಗೂ ವಸಾಹತು ವಿಮೋಚನಾ ಸಮಿತಿಯು ಇದಕ್ಕೆ ಅನುಮೋದನೆ ನೀಡಿತ್ತು.

ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ಮಂಡನೆಯಾದ ಈ ನಿರ್ಣಯದ ವಿರುದ್ಧ ಏಳು ದೇಶಗಳು ಮತ ಚಲಾಯಿಸಿವೆ. 18 ದೇಶಗಳು ಮತದಾನದಿಂದ ದೂರ ಉಳಿದಿವೆ.

ಅಮೆರಿಕ, ಕೆನಡಾ, ಹಂಗರಿ, ಇಸ್ರೇಲ್, ಮಾರ್ಷಲ್ ದ್ವೀಪಗಳು, ಫೆಡರೇಟೆಡ್ ಸ್ಟೇಟ್ಸ್ ಆಫ್ ಮೈಕ್ರೋನೇಷಿಯಾ ಹಾಗೂ ನೌರು ನಿರ್ಣಯದ ವಿರುದ್ಧ ಮತ ಚಲಾಯಿಸಿದ ರಾಷ್ಟ್ರಗಳಾಗಿವೆ.

ಚೀನಾ, ಫ್ರಾನ್ಸ್, ಜಪಾನ್, ಮಲೇಷ್ಯಾ, ಮಾಲ್ದೀವ್ಸ್, ರಷ್ಯಾ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬ್ರಿಟನ್, ಬಾಂಗ್ಲಾದೇಶ, ಭೂತಾನ್ ನಿರ್ಣಯ ಬೆಂಬಲಿಸಿರುವ ಪ್ರಮುಖ ದೇಶಗಳಾಗಿವೆ.

ಆಕ್ರಮಿತ ಪ್ರದೇಶದಲ್ಲಿ ಇಸ್ರೇಲ್ ತನ್ನ ವಸಾಹತು ಚಟುವಟಿಕೆ ಆರಂಭಿಸಿರುವುದನ್ನು ಸಭೆಯಲ್ಲಿ ತೀವ್ರವಾಗಿ ಖಂಡಿಸಲಾಯಿತು. ಭೂಮಿ ಮುಟ್ಟುಗೋಲು ಹಾಕಿಕೊಂಡು ಜನರ ಜೀವನೋಪಾಯಕ್ಕೆ ಅಡ್ಡಿಯುಂಟು ಮಾಡುವುದು, ಬಲವಂತವಾಗಿ ಜನರ ಸ್ಥಳಾಂತರ ಹಾಗೂ ಭೂಪ್ರದೇಶದ ಅತಿಕ್ರಮಣ ಮಾಡುವುದಕ್ಕೆ ಖಂಡನೆ ವ್ಯಕ್ತವಾಯಿತು.

ಇದು ಇಸ್ರೇಲ್‌ನ ಅಕ್ರಮ ನಡೆಯಾಗಿದೆ. ಅಲ್ಲದೇ, ಆ ಪ್ರದೇಶದಲ್ಲಿ ಶಾಂತಿ ಭಂಗ ಉಂಟು ಮಾಡುವ ಜತೆಗೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಅಡ್ಡಿಯಾಗಲಿದೆ ಎಂದು ನಿರ್ಣಯದಲ್ಲಿ ಹೇಳಲಾಗಿದೆ. ಕೂಡಲೇ, ಈ ಎಲ್ಲಾ ಚಟುವಟಿಕೆಗಳಿಂದ ಇಸ್ರೇಲ್ ದೂರ ಸರಿಯಬೇಕು ಎಂದು ಒತ್ತಾಯಿಸಲಾಗಿದೆ.

**ಮುಖ್ಯಾಂಶಗಳು**
- ಪ್ಯಾಲೆಸ್ಟೀನ್‌ನ ಆಕ್ರಮಿತ ಪ್ರದೇಶದಲ್ಲಿ ಇಸ್ರೇಲ್‌ನಿಂದ ವಸಾಹತು ಚಟುವಟಿಕೆ
- ವಿಶ್ವಸಂಸ್ಥೆ ನಿರ್ಣಯಕ್ಕೆ ಅಮೆರಿಕ ಸೇರಿ ಏಳು ದೇಶಗಳ ವಿರೋಧ
- ನಿರ್ಣಯದಿಂದ ದೂರ ಉಳಿದ 18 ರಾಷ್ಟ್ರಗಳು

9ನೇ ಪುಟ ನೋಡಿ

# ಒಂದೇ ಕುಟುಂಬದ ನಾಲ್ವರ ಹತ್ಯೆ

ಪ್ರಜಾವಾಣಿ ವಾರ್ತೆ

**ಉಡುಪಿ:** ತಾಲ್ಲೂಕಿನ ಹಂಪನಕಟ್ಟೆ ಸಮೀಪದ ನೇಜಾರಿನ ತೃಪ್ತಿ ಲೇಔಟ್‌ನಲ್ಲಿ ಭಾನುವಾರ ಒಂದೇ ಕುಟುಂಬದ ನಾಲ್ವರನ್ನು ಇರಿದು ಕೊಲೆ ಮಾಡಲಾಗಿದೆ.

ಹಸೀನಾ (48) ಅವರ ಮಕ್ಕಳಾದ ಅಫ್ನಾನ್ (23), ಅಯ್ನಾಜ್ (20) ಹಾಗೂ ಅಸೀಮ್ (12) ಕೊಲೆಯಾದವರು. ಚೂರಿ ಇರಿತಕ್ಕೊಳಗಾಗಿ ಗಂಭೀರವಾಗಿ ಗಾಯಗೊಂಡಿರುವ ಹಾಜಿರಾ (70) ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಳಿಗ್ಗೆ 8.30ರ ಸುಮಾರಿಗೆ ಸಮೀಪದ ಸಂತೆಕಟ್ಟೆಯಿಂದ ಆಟೊದಲ್ಲಿ ಬಂದಿಳಿದ ಕೊಲೆಗಾರ ಮನೆಗೆ ನುಗ್ಗಿ ನಾಲ್ವರು ಮಹಿಳೆಯರಿಗೆ ಚೂರಿಯಿಂದ ಇರಿದಿದ್ದಾನೆ. ಆಕ್ರಂದನ ಕೇಳಿ ಪಕ್ಕದ ಮನೆಯವರು ಹೊರಗೆ ಬಂದಾಗ ಸ್ಥಳದಿಂದ ಪರಾರಿಯಾಗಿದ್ದಾನೆ.


ಅಫ್ನಾನ್


ಅಯ್ನಾಜ್


ಅಸೀಮ್

'ಕೊಲೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಚಿನ್ನಾಭರಣ ಸೇರಿದಂತೆ ಮನೆಯಲ್ಲಿದ್ದ ಎಲ್ಲಾ ವಸ್ತುಗಳು ಹಾಗೆಯೇ ಇವೆ. ವೈಯಕ್ತಿಕ ದ್ವೇಷ ಕೊಲೆಗೆ ಕಾರಣ ಇರಬಹುದು ಎಂದು ಶಂಕಿಸಲಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದ್ದು ಎಲ್ಲ ಆಯಾಮಗಳಲ್ಲೂ ತನಿಖೆ ನಡೆಯುತ್ತಿದೆ. ಆರೋಪಿಯ ಪತ್ತೆಗೆ 5 ತಂಡಗಳನ್ನು ರಚಿಸಲಾಗಿದೆ' ಎಂದು ಎಸ್‌ಪಿ ಕೆ. ಅರುಣ್ ತಿಳಿಸಿದ್ದಾರೆ.

8ನೇ ಪುಟ ನೋಡಿ

## 54 ಸಾವಿರ ಬೋಗಿಗಳಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಪ್ರಯಾಣಿಕರ ಸುರಕ್ಷತೆಗಾಗಿ ಭಾರತೀಯ ರೈಲ್ವೆಯು 54 ಸಾವಿರಕ್ಕೂ ಹೆಚ್ಚು ಬೋಗಿಗಳಲ್ಲಿ ಮತ್ತು 5 ಸಾವಿರ ಎಲೆಕ್ಟ್ರಿಕ್ ಲೋಕೊಮೋಟಿವ್‌ಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಲಿದೆ.

ರಾಜಧಾನಿ ಮತ್ತು ವಂದೇ ಭಾರತ್ ರೈಲುಗಳ ಬೋಗಿಗಳು ಸೇರಿದಂತೆ ಸದ್ಯ 7 ಸಾವಿರ ಬೋಗಿಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳು ಹಾಗೂ ಉಪನಗರ ರೈಲುಗಳಿಗೂ ಇದನ್ನು ವಿಸ್ತರಿಸಲಾಗುವುದು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಒಟ್ಟು 82 ಸಾವಿರ ಬೋಗಿಗಳಿಗೆ ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಸುವ ಗುರಿ ಹೊಂದಲಾಗಿದೆ. ಅಂದಾಜು ₹2,200 ಕೋಟಿ ವೆಚ್ಚದ ಈ ಯೋಜನೆಯನ್ನು ರೈಲ್ವೆ ಮಾಹಿತಿ ವ್ಯವಸ್ಥೆಯ ಕೇಂದ್ರವು (ಸಿಆರ್‌ಐಎಸ್) ಜಾರಿಗೊಳಿಸುತ್ತಿದೆ ಎಂದು ವಿವರಿಸಿದ್ದಾರೆ.

**ಒಳ ಪುಟಗಳು**





**ಚಿನಕುರಳಿ**
ಪ್ರಕಾಶ್ ಶೆಟ್ಟಿ



## ರಾಷ್ಟ್ರೀಯ ಕಲಾ ಶಿಬಿರ ಸಂಪನ್ನ

ಬೆಂಗಳೂರು: ಸಿಎಂಆರ್ ವಿಶ್ವವಿದ್ಯಾಲಯದ ವಾಸ್ತುಶಿಲ್ಪ ವಿಭಾಗ ಆಯೋಜಿಸಿದ್ದ 'ಬ್ರಷಸ್ ಆ್ಯಂಡ್ ಬಿಹೈಂಡ್' 10 ದಿನದ ವಾಸ್ತುಶಿಲ್ಪ ರಾಷ್ಟ್ರೀಯ ಕಲಾ ಶಿಬಿರ ಇತ್ತೀಚೆಗೆ ಸಂಪನ್ನವಾಯಿತು.



## ತಾರಾನಾಥ್‌ಗೆ 'ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ'

ಬೆಂಗಳೂರು: ಕನ್ನಡ ಗೆಳೆಯರ ಬಳಗವು ಸಂಶೋಧಕ ಎಂ.ಚಿದಾನಂದಮೂರ್ತಿ ಸ್ಮರಣಾರ್ಥ ನೀಡುವ 'ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ'ಗೆ ವಿದ್ವಾಂಸ ಎನ್.ಎಸ್. ತಾರಾನಾಥ್ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 5 ಸಾವಿರ ನಗದು ಒಳಗೊಂಡಿದೆ.



ತಾರಾನಾಥ್

ಎನ್.ಎಸ್. ತಾರಾನಾಥ್ ಅವರು ವ್ಯಾಕರಣ, ಛಂದಸ್ಸು, ಶಾಸನ, ತೌಲಿನಿಕ ಸಾಹಿತ್ಯ ಕ್ಷೇತ್ರದಲ್ಲಿ ಮೌಲೀಕ ಕೆಲಸ ಮಾಡಿದ್ದು, ಮೈಸೂರು ವಿ.ವಿ ಯ ನಿವೃತ್ತ ಪ್ರಾಧ್ಯಾಪಕರಾಗಿದ್ದಾರೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಡಿ.12ರಂದು ಕನ್ನಡ ಭವನದ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ, ಪುಸ್ತಕ ಬಹುಮಾನ–ಕನ್ನಡ ಚಿಂತನೆ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹೇಳಿದ್ದಾರೆ.

### ಬ್ಯಾಂಕ್ ಖಾತೆಯಲ್ಲಿ ಕೇವಲ ₹40 ಕೋಟಿ

# ಬಿಡಿಎಗೆ ಹಣಕಾಸು ಕೊರತೆ

• ನವೀನ್ ಮಿನೇಜಸ್

ಮುಖ್ಯಾಂಶಗಳು
- ಫ್ಲ್ಯಾಟ್ ನಿರ್ಮಾಣಕ್ಕೆ ಅನುದಾನವಿಲ್ಲ
- ಹಲವು ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲ ಕೊರತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಹಣಕಾಸಿನ ಕೊರತೆ ಎದುರಾಗಿದ್ದು, ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ತೊಡಕಾಗುವ ಸಾಧ್ಯತೆಯಿದೆ.

ಬಿಡಿಎ ಮುಂದೆ ಹಲವು ಯೋಜನೆಗಳಿದ್ದರೂ ಬ್ಯಾಂಕ್ ಖಾತೆಯಲ್ಲಿ ₹40 ಕೋಟಿಯಷ್ಟೇ ಹಣ ಇದೆ. ಸದ್ಯ ಪ್ರಗತಿಯಲ್ಲಿರುವ ಬಡಾವಣೆಗಳ ನಿರ್ಮಾಣ, ಮೇಲ್ಸೇತುವೆ ಹಾಗೂ ಫ್ಲ್ಯಾಟ್‌ಗಳ ನಿರ್ಮಾಣಕ್ಕೆ ಅನುದಾನದ ಕೊರತೆ ಉಂಟಾಗಿದೆ.

ಪ್ರಮುಖ ವಸತಿ ಯೋಜನೆಗಳಾದ ನಾಡಪ್ರಭು ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆ ಹಾಗೂ ಹೆಬ್ಬಾಳ ಮೇಲ್ಸೇತುವೆ ಲೂಪ್ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸಲು ಬಿಡಿಎಗೆ ಸಾಧ್ಯವಾಗುತ್ತಿಲ್ಲ.

ಶಿವರಾಮ ಕಾರಂತ ಬಡಾವಣೆಯಲ್ಲಿ 30 ಸಾವಿರ ನಿವೇಶನ ಹಂಚಿಕೆ, 2,500ಕ್ಕೂ ಹೆಚ್ಚು ಫ್ಲ್ಯಾಟ್‌ಗಳ ಮಾರಾಟ ಹಾಗೂ ಮೂಲ ನಿವೇಶನಗಳ ಹರಾಜಿನಿಂದ ₹ 3 ಸಾವಿರ ಕೋಟಿ ಆದಾಯ ನಿರೀಕ್ಷಿಸಲಾಗಿತ್ತು. ಆದರೆ, ನಿರೀಕ್ಷಿತ ಸಂಪನ್ಮೂಲ ಕ್ರೋಢೀಕರಣವಾಗಿಲ್ಲ ಎನ್ನುತ್ತವೆ ಮೂಲಗಳು.

ಬಿಡಿಎ ಹಲವು ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಬನಶಂಕರಿ 6ನೇ ಹಂತ, ಅಂಜನಾಪುರ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸಲು ₹400 ಕೋಟಿ, ಶಿವರಾಮ ಕಾರಂತ ಬಡಾವಣೆಯ ಕಾಮಗಾರಿಗೆ ಅಂದಾಜು ₹ 2 ಸಾವಿರ ಕೋಟಿ, ಕೆಂಪೇಗೌಡ ಬಡಾವಣೆ ಕಾಮಗಾರಿಗೆ ಅನುದಾನ ಅಗತ್ಯವಿದೆ.

ಪ್ರಗತಿಯಲ್ಲಿರುವ ಕಾಮಗಾರಿಗಳ ಬಿಲ್‌ಗಳನ್ನು ಪಾವತಿಸಿದ ನಂತರ ಬಿಡಿಎಗೆ ಆರ್ಥಿಕ ತೊಂದರೆ ಆರಂಭವಾಯಿತು ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಸರ್ಕಾರದ ಬದಲಾವಣೆ ಆಗಿದ್ದರಿಂದ ಬಿಡಿಎ ತ್ವರಿತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಇದು ಸಹ ಆರ್ಥಿಕ ಸಂಪನ್ಮೂಲ ಕ್ರೋಢೀಕರಣಕ್ಕೆ ಹಿನ್ನಡೆ ಆಗಿರಬಹುದು ಎಂದು ಹೇಳಲಾಗುತ್ತಿದೆ.

ಸುಪ್ರೀಂ ಕೋರ್ಟ್ ನೇಮಿಸಿರುವ ಎ.ವಿ.ಚಂದ್ರಶೇಖರ್ ಸಮಿತಿ, ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಹಾಗೂ ಅರ್ಜಿದಾರರಿಗೆ ನಿವೇಶನ ಮಂಜೂರು ಮಾಡುವಂತೆ ಅನುಮತಿ ನೀಡಿದೆ. ಆ ಕೆಲಸವೂ ಇನ್ನಷ್ಟೇ ನಡೆಯಬೇಕಿದೆ.

ಬಿಡಿಎ ಫ್ಲ್ಯಾಟ್‌ಗಳ ಮಾರಾಟವು ಹಲವು ತಿಂಗಳಿಂದ ನಡೆದಿಲ್ಲ. ಆರು ತಿಂಗಳ ಬಳಿಕ 123 ನಿವೇಶನಗಳ ಹರಾಜು ಹಾಕಲು ಸೂಚನೆ ಸಿಕ್ಕಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

'ಆದಾಯ ಕ್ರೋಢೀಕರಣಕ್ಕೆ ಹಲವು ರೀತಿಯಲ್ಲೂ ಕ್ರಮ ಕೈಗೊಳ್ಳಲಾಗುತ್ತಿದೆ. ಕಾನೂನು ತೊಡಕಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಿ ಬಡಾವಣೆ ಅಭಿವೃದ್ಧಿಪಡಿಸಲಾಗುವುದು' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಬಿಡಿಎ ಆಯುಕ್ತ ಎನ್. ಜಯರಾಮ್ ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

'ನಿವೇಶನದಾರರು ಮನೆ ನಿರ್ಮಿಸಿದ್ದರೂ ಯುಜಿಡಿ ಸಂಪರ್ಕ ಸಾಧ್ಯವಾಗಿಲ್ಲ. ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕವೂ ಸಿಕ್ಕಿಲ್ಲ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಫೋರಂನ ಸೂರ್ಯ ಕಿರಣ್ ದೂರಿದ್ದಾರೆ.

## ಮೂರು ಪರೀಕ್ಷೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಮೇಲುಸ್ತುವಾರಿಯನ್ನು ಜಿಲ್ಲಾ ಪಂಚಾಯಿತಿಗೆ ವಹಿಸುವ, ವಾರ್ಷಿಕ ಮೂರು ಪರೀಕ್ಷೆ ನಡೆಸುವ ಆದೇಶಗಳನ್ನು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಬೋಧಕೇತರ ನೌಕರರ ಸಂಘಟನೆಗಳು ವಿರೋಧಿಸಿವೆ.

ಬುಧವಾರ ನಡೆದ ಸಭೆಯಲ್ಲಿ ಸರ್ಕಾರದ ಇಂತಹ ಆದೇಶಗಳನ್ನು ವಿರೋಧಿಸುವ ನಿರ್ಣಯ ಕೈಗೊಳ್ಳಲಾಯಿತು. ಪ್ರಾಂಶುಪಾಲರ ಸಂಘದ ಅಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರು ಮಂಡಿಸಿದ ನಿರ್ಣಯಗಳಿಗೆ ಎಲ್ಲ ಪದಾಧಿಕಾರಿಗಳು ಒಮ್ಮತದ ಅನುಮೋದನೆ ನೀಡಿದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನ.23ರಂದು ಆಯಾ ಜಿಲ್ಲಾ ಹಂತದಲ್ಲಿ ಕಪ್ಪುಪಟ್ಟಿ ಧರಿಸಿ, ಮೆರವಣಿಗೆ ನಡೆಸಲಾಗುವುದು. ಡಿ.1ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್, ಗೌರವಾಧ್ಯಕ್ಷ ತಿಮ್ಮಯ್ಯಪುರ್ಲೆ, ಮೂರು ಸಂಘಟನೆಗಳ ಮುಖಂಡರಾದ ರಾಜಗೋಪಾಲ್, ನಾಗಣ್ಣ, ಪ್ರವೀಣ್ ಮಹಿಷಿ, ಉಪನ್ಯಾಸಕರ ಸಂಘದ ಜಯಣ್ಣ, ಎಸ್.ಆರ್.ವೆಂಕಟೇಶ್, ಬೋಧಕೇತರ ಸಂಘಟನೆಯ ಅಧ್ಯಕ್ಷರಾದ ನಂದೀಶ್ ಕುಮಾರ್, ಮಧುಸೂದನ್ ಇದ್ದರು.



### ನಗರದಲ್ಲಿ ಇಂದು

**ಎಚ್.ಎಸ್.ವೇಣುಗೋಪಾಲ ಅವರ 'ಮಾತನಾಡುವ ಮರ ಪಿಸುನುಡಿಯ ಕಾಂಡ' ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ:** ಕ್ಯುರೇಟಿಂಗ್: ಗಿರಿಧರ್ ಖಾಸನೀಸ, ಸ್ಥಳ: ಕರ್ನಾಟಕ ಚಿತ್ರಕಲಾ ಪ್ರದರ್ಶನ, ಕುಮಾರಕೃಪಾ ರಸ್ತೆ, ಸಂಜೆ 5ರಿಂದ

**ಕನ್ನಡ ಹವ್ಯಾಸಿ ನಾಟಕೋತ್ಸವ:** 'ತಾರಕ್ಕ ಬಿಂದಿಗೆ' ನಾಟಕ ಪ್ರದರ್ಶನ: ಪ್ರಸ್ತುತಿ: ಐಶ್ವರ್ಯ ಕಲಾನಿಕೇತನ, ನಾಟಕಕಾರ: ಎನ್. ನಾಗರಾಜ್ ರಾವ್, ನಿರ್ದೇಶನ: ರಾಜೇಶ ಕಶ್ಯಪ್, 'ಚಾಮಣ್ಣನ ಚಿರೋಟಿ' ನಾಟಕ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in


## 'ಕಷ್ಟದ ಸ್ಥಿತಿಗೆ ಸಿಲುಕಿಸುವ ವಿಮರ್ಶೆ'

### 'ನುಡಿಗೋಲು' ಕೃತಿ ಬಿಡುಗಡೆಯಲ್ಲಿ ಬಂಜಗೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಮರ್ಶೆಯ ಮಾತುಗಳು ಲೇಖಕರನ್ನು ಕಷ್ಟದ ಸ್ಥಿತಿಗೆ ಸಿಲುಕಿಸುತ್ತವೆ' ಎಂದು ಸಾಹಿತಿ ಬಂಜಗೆರೆ ಜಯಪ್ರಕಾಶ್ ಹೇಳಿದರು.

ಜಾಣಗೆರೆ ಪತ್ರಿಕೆ ಪ್ರಕಾಶನ ಶನಿವಾರ ಹಮ್ಮಿಕೊಂಡಿದ್ದ ಜಾಣಗೆರೆ ವೆಂಕಟರಾಮಯ್ಯ ಅವರ 'ನುಡಿಗೋಲು' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.



ಶೇಷಾದ್ರಿಪುರಂ ಕಾಲೇಜು ಸಭಾಂಗಣದಲ್ಲಿ ಶನಿವಾರ ಜಾಣಗೆರೆ ವೆಂಕಟರಾಮಯ್ಯ ಅವರ 'ನುಡಿಗೋಲು' ಕೃತಿಯನ್ನು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಬಿಡುಗಡೆ ಮಾಡಿದರು –ಪ್ರಜಾವಾಣಿ ಚಿತ್ರ

'ನಾಡಿಗೆ ಅಸಾಮಾನ್ಯ ಕೊಡುಗೆ ಕೊಟ್ಟ ಸಾಮಾನ್ಯರ ಸಾಧನೆಯನ್ನೂ ನುಡಿಗೋಲಲ್ಲಿ ಹಿಡಿದಿಟ್ಟಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ' ಎಂದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಮಾತನಾಡಿದರು.

ಲೇಖಕ ಜಾಣಗೆರೆ ವೆಂಕಟರಾಮಯ್ಯ ಪ್ರಾಸ್ತಾವಿಕ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಕೆ.ಚಂದ್ರಶೇಖರ್, ಕೆ.ಷರೀಫಾ ಅವರನ್ನು ಸನ್ಮಾನಿಸಲಾಯಿತು. ಹಂಪಿ ವಿ.ವಿ ವಿಶ್ರಾಂತ ಕುಲಪತಿ ಹಿ.ಚಿ. ಬೋರಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು.

**ಪುಸ್ತಕ ಪರಿಚಯ**
ಪುಸ್ತಕ: ನುಡಿಗೋಲು
ಲೇಖಕ: ಜಾಣಗೆರೆ ವೆಂಕಟರಾಮಯ್ಯ
ಪ್ರಕಾಶನ: ಜಾಣಗೆರೆ ಪತ್ರಿಕೆ ಪ್ರಕಾಶನ
ಪುಟಗಳು: 278
ಬೆಲೆ: ₹250

### ನಿಧನ ವಾರ್ತೆ

## ಡೈಸಿ ಶ್ಯಾಮಲಾ



ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ, ಬಿ.ಟಿ.ಎಂ ಬಡಾವಣೆಯ ತಾವರೆಕೆರೆ ನಿವಾಸಿ ಡೈಸಿ ಶ್ಯಾಮಲಾ (56) ಅವರು ಶನಿವಾರ ನಿಧನರಾದರು.

ಮೃತರಿಗೆ ಪತಿ, ಪತ್ರಿಕಾ ಛಾಯಾಗ್ರಾಹಕ ಡಿ.ಆಲ್ಫ್ರಡ್ ಟೆನಿಸನ್ ಹಾಗೂ ಪುತ್ರಿ ಇದ್ದಾರೆ. ಹೊಸೂರು ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರದಲ್ಲಿ ದೀಪಾವಳಿ ಹಬ್ಬದ ಸಂಭ್ರಮ • ಪ್ರಮುಖ ದೇವಸ್ಥಾನಗಳಲ್ಲಿ ವಿಶೇಷ ಪೂಜೆ

# ಪಟಾಕಿ ಸದ್ದು: ವಿದ್ಯುತ್ ದೀಪಾಲಂಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಾದ್ಯಂತ ದೀಪಾವಳಿ ಹಬ್ಬದ ಸಂಭ್ರಮ ಮನೆ ಮಾಡಿದೆ. ಪ್ರಮುಖ ದೇವಸ್ಥಾನಗಳಲ್ಲಿ ವಿವಿಧ ಪೂಜೆಗಳು ನೆರವೇರಿದವು. ದೇವಸ್ಥಾನಗಳಿಗೂ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ದರ್ಶನಕ್ಕೆ ಅಪಾರ ಸಂಖ್ಯೆಯ ಭಕ್ತರು ಬಂದಿದ್ದರು.

ಶನಿವಾರ ರಾತ್ರಿಯಿಂದಲೇ ಅಂಗಡಿಗಳು, ಚಿನ್ನಾಭರಣ ಮಳಿಗೆಗಳು, ಅಪಾರ್ಟ್‌ಮೆಂಟ್‌ಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಅಪಾರ್ಟ್‌ಮೆಂಟ್ ಪ್ರವೇಶದ್ವಾರ, ಕಾಂಪೌಂಡ್ ಮೇಲೆ ಬಣ್ಣ ಬಣ್ಣದ ವಿದ್ಯುತ್ ದೀಪಗಳು ಹಬ್ಬದ ಸಂಭ್ರಮ ಹೆಚ್ಚಿಸಿದವು. ಮನೆ ಎದುರು ಆಕರ್ಷಕ ರಂಗೋಲಿ ಬಿಡಿಸಲಾಗಿದ್ದು, ಬಣ್ಣಬಣ್ಣದ ಆಕಾಶ ಬುಟ್ಟಿಗಳು ಕಂಗೊಳಿಸಿದವು.



ನಗರದಲ್ಲಿ ಮಹಿಳೆಯರು ಭಾನುವಾರ ಸುರ್ ಸುರ್ ಬತ್ತಿ ಹಚ್ಚಿ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಮಂಗಳವಾರ ಬಲಿಪಾಡ್ಯಮಿ ಹಬ್ಬದ ಹಿನ್ನೆಲೆಯಲ್ಲಿ ಭಾನುವಾರ ಖರೀದಿ ಜೋರಾಗಿತ್ತು. ಕೆ.ಆರ್.ಮಾರುಕಟ್ಟೆಯಲ್ಲಿ ಹೂವು, ಹಣ್ಣು ಖರೀದಿಸಲು ಅಪಾರ ಸಂಖ್ಯೆಯಲ್ಲಿ ಗ್ರಾಹಕರು ಬಂದಿದ್ದರು. ಇದರಿಂದ ಬೆಳಿಗ್ಗೆ 6 ರಿಂದ 11ರ ತನಕ ದಟ್ಟಣೆ ಕಂಡುಬಂತು. ಚಿಕ್ಕಪೇಟೆಯಲ್ಲಿ ಹೊಸಬಟ್ಟೆ ಖರೀದಿಸಲು ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಬಂದಿದ್ದರು. ಮಲ್ಲೇಶ್ವರ, ವಿಜಯನಗರ, ಕೆಂಗೇರಿ ಉಪ ನಗರ, ಬಸವನಗುಡಿ, ಬನಶಂಕರಿ ಸೇರಿದಂತೆ ಹಲವು ಮಾರುಕಟ್ಟೆಗಳಲ್ಲಿ ಹಬ್ಬದ ಸಾಮಗ್ರಿ ಖರೀದಿಗೆ ಜನರು ಮುಗಿಬಿದ್ದಿದ್ದರು.

**ನಿಯಮ ಉಲ್ಲಂಘನೆ:** ರಾತ್ರಿ 8 ರಿಂದ 10ರ ಒಳಗೆ ಪಟಾಕಿ ಸಿಡಿಸಲು ಅವಕಾಶ ಕಲ್ಪಿಸಲಾಗಿದೆ. ಹಸಿರು ಪಟಾಕಿಯನ್ನೇ ಬಳಸುವಂತೆ ಸೂಚನೆ ನೀಡಲಾಗಿದೆ. ಆದರೆ, ಕೆಲವು ಬಡಾವಣೆಗಳಲ್ಲಿ ಸಂಜೆ ಆಗುತ್ತಿದ್ದಂತೆಯೇ ಪಟಾಕಿ ಸದ್ದು ಮಾಡಿದ್ದವು.

**ದಟ್ಟಣೆ ಕಡಿಮೆ:** ನಗರದಲ್ಲಿ ನೆಲೆಸಿದ್ದ ವಿವಿಧ ಜಿಲ್ಲೆಗಳ ಜನರು ಹಬ್ಬಕ್ಕೆ ಊರಿಗೆ ತೆರಳಿದ್ದು, ಪ್ರಮುಖ ರಸ್ತೆಗಳಲ್ಲಿ ಅಷ್ಟಾಗಿ ದಟ್ಟಣೆ ಇರಲಿಲ್ಲ. ಭಾನುವಾರ ಬೆಳಿಗ್ಗೆಯೂ ಕೆಲವರು ಕೆಂಪೇಗೌಡ ಬಸ್ ನಿಲ್ದಾಣ, ಸಂಗೊಳ್ಳಿ ರಾಯಣ್ಣ ಹಾಗೂ ಯಶವಂತಪುರ ರೈಲು ನಿಲ್ದಾಣದ ಮೂಲಕ ಊರಿಗೆ ತೆರಳಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತ ಹಾಗೂ ನೆದರ್‌ಲೆಂಡ್ ತಂಡಗಳ ನಡುವೆ ವಿಶ್ವಕಪ್ ಟೂರ್ನಿಯ ಲೀಗ್ ಪಂದ್ಯ ಭಾನುವಾರ ನಡೆಯಿತು. ಪಂದ್ಯ ವೀಕ್ಷಣೆಗೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಬಂದಿದ್ದರು. ಹೀಗಾಗಿ, ಕ್ರೀಡಾಂಗಣದ ಸುತ್ತಮುತ್ತ ಮಾತ್ರ ದಟ್ಟಣೆ ಕಂಡುಬಂತು.

# ಪಟಾಕಿ ಅವಘಡ: ಹಲವರಿಗೆ ಗಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನರಕ ಚತುರ್ದಶಿ ದಿನವಾದ ಭಾನುವಾರ ನಗರದ ವಿವಿಧೆಡೆ ಪಟಾಕಿ ಅವಘಡಗಳು ಸಂಭವಿಸಿದ್ದು, ನಾರಾಯಣ ನೇತ್ರಾಲಯದಲ್ಲಿ 16 ಪ್ರಕರಣಗಳು ವರದಿಯಾಗಿವೆ.

ಈ ಪ್ರಕರಣಗಳಲ್ಲಿ ಆರು ಮಂದಿಗೆ ಗಂಭೀರ ಗಾಯವಾಗಿದೆ. 10 ಮಂದಿಗೆ ಪಟಾಕಿ ಕಿಡಿಯಿಂದ ಸಣ್ಣ ಪುಟ್ಟ ಗಾಯಗಳಾಗಿವೆ. ಇವರಲ್ಲಿ ಶೇ 90ರಷ್ಟು ಮಂದಿ ಪಟಾಕಿ ಹಚ್ಚದಿದ್ದರೂ, ವೀಕ್ಷಿಸುವ ವೇಳೆ ಗಾಯಗೊಂಡಿದ್ದಾರೆ.

‘ಗಂಭೀರವಾಗಿ ಗಾಯಗೊಂಡಿರುವ ಆರು ಪ್ರಕರಣಗಳಲ್ಲಿ ಮೂರು ಮಂದಿ 19 ರಿಂದ 22 ವರ್ಷದೊಳಗಿನವರು. ಇಬ್ಬರು ಹತ್ತು ವರ್ಷದದ ಮಕ್ಕಳಾಗಿದ್ದು, ಒಬ್ಬರು 50 ವರ್ಷದವರಾಗಿದ್ದಾರೆ. ಇಬ್ಬರಿಗೆ ಕಣ್ಣಿನ ಒಳಗಡೆ ರಕ್ತಸ್ರಾವ ಆಗಿದೆ. ಮಕ್ಕಳ ಕಣ್ಣಿನಲ್ಲಿ ಸೇರಿದ್ದ ರಾಸಾಯನಿಕ ಕಣಗಳನ್ನು ತೆಗೆದು, ಸ್ವಚ್ಛಗೊಳಿಸಲಾಗಿದೆ’ ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ರೋಹಿತ್ ಶೆಟ್ಟಿ ತಿಳಿಸಿದರು.

> **ಪಟಾಕಿ ಸಿಡಿಸುವುದನ್ನು ವೀಕ್ಷಿಸುವವರೂ ಮುನ್ನೆಚ್ಚರಿಕೆ ವಹಿಸಬೇಕು. ಸಣ್ಣ ಜಾಗಗಳಲ್ಲಿ ಪಟಾಕಿ ಸಿಡಿಸಬಾರದು. ಹಸಿರು ಪಟಾಕಿಯೂ ಅವಘಡಕ್ಕೆ ಕಾರಣವಾಗಬಹುದು**
> **ಡಾ. ರೋಹಿತ್ ಶೆಟ್ಟಿ**
> ಅಧ್ಯಕ್ಷ , ನಾರಾಯಣ ನೇತ್ರಾಲಯ

‘ಪಾದಚಾರಿಗಳು, ಅಂಗಡಿಗಳಲ್ಲಿ ಕೆಲಸ ಮಾಡುತ್ತಿರುವವರೂ ಗಾಯಗೊಂಡಿದ್ದಾರೆ. ಇತ್ತೀಚಿಗೆ ಪಟಾಕಿ ಹೊಡೆಯುವವರು ಮುನ್ನೆಚ್ಚರಿಕೆ ವಹಿಸುತ್ತಿದ್ದಾರೆ. ಆದರೆ, ದೂರ ನಿಂತು ಅದನ್ನು ವೀಕ್ಷಿಸುವವರು ಗಾಯಗೊಳ್ಳುತ್ತಿದ್ದಾರೆ. ಕಣ್ಣು ಸೂಕ್ಷ್ಮವಾಗಿದ್ದರಿಂದ ಸಣ್ಣ ಕಿಡಿಯೂ ದೊಡ್ಡ ಹಾನಿ ಮಾಡುತ್ತದೆ. ಪಟಾಕಿ ಅವಘಡಕ್ಕೆ ಒಳಗಾದವರಿಗೆ ಚಿಕಿತ್ಸೆ ನೀಡಲು ಆರು ವೈದ್ಯರು ಹಾಗೂ 18ರಿಂದ 20 ವೈದ್ಯಕೀಯ ಸಿಬ್ಬಂದಿ ನಿಯೋಜಿಸಲಾಗಿದೆ’ ಎಂದು ಹೇಳಿದರು.

ದೀಪಾವಳಿ ಸಂದರ್ಭದಲ್ಲಿ ಪಟಾಕಿ ಅವಘಡಗಳು ಸಂಭವಿಸಿದ್ದಲ್ಲಿ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ನಗರದ ಕಣ್ಣಿನ ಆಸ್ಪತ್ರೆಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದವು. ಹಬ್ಬದ ದಿನಗಳಲ್ಲಿ 24x7 ಸೇವೆ ನೀಡುತ್ತಿವೆ.

### ಸಹಾಯವಾಣಿ ಸಂಖ್ಯೆಗಳು

- ಮಿಂಟೊ ಆಸ್ಪತ್ರೆ – 9481740137 ಅಥವಾ 08026707176
- ನಾರಾಯಣ ನೇತ್ರಾಲಯ (ರಾಜಾಜಿನಗರ) ಶಾಖೆ- 080 66121641/1643 ಅಥವಾ 9902546046
- ಎನ್‌ಎಚ್ ಹೆಲ್ತ್ ಸಿಟಿ ಬೊಮ್ಮಸಂದ್ರ: 080 66660655 ಅಥವಾ 9902821128

## ಮೆಟ್ರೊ ರೈಲಿನಲ್ಲಿ ಮಹಿಳೆ ಪರ್ಸ್ ಕಳವು: ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೆಟ್ರೊ ರೈಲಿನಲ್ಲಿ ಮಹಿಳಾ ಪ್ರಯಾಣಿಕರೊಬ್ಬರ ಪರ್ಸ್ ಕಳ್ಳತನವಾಗಿದ್ದು, ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹಲಸೂರು ಬಳಿಯ ಕೇಂಬ್ರಿಜ್ ಲೇಔಟ್ ನಿವಾಸಿ, 51 ವರ್ಷದ ಮಹಿಳೆ ದೂರು ನೀಡಿದ್ದಾರೆ. ಮೆಟ್ರೊ ರೈಲಿನಲ್ಲಿ ಕೃತ್ಯ ನಡೆದಿರುವ ಕಾರಣ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆ, ನ.10ರಂದು ಹಲಸೂರಿನಿಂದ ಕೆಂಗೇರಿಗೆ ಹೊರಟಿದ್ದರು. ಮೆಜೆಸ್ಟಿಕ್ ನಿಲ್ದಾಣದಲ್ಲಿ ಜನಸಂದಣಿ ಹೆಚ್ಚಿತ್ತು. ಜನಸಂದಣಿ ನಡುವೆಯೇ ದೂರುದಾರ ಮಹಿಳೆ ಬ್ಯಾಗ್ ಪರಿಶೀಲಿಸಿದ್ದು, ಜಿಪ್ ತೆರೆದಿರುವುದು ಕಂಡಿತ್ತು. ಬ್ಯಾಗ್‌ನಲ್ಲಿ ಪರ್ಸ್ ಇರಲಿಲ್ಲ.’

‘ಗಾಬರಿಗೊಂಡ ಮಹಿಳೆ, ವಿಜಯನಗರ ಮೆಟ್ರೊ ನಿಲ್ದಾಣದಲ್ಲಿ ಇಳಿದಿದ್ದರು. ನಂತರ, ನಿಲ್ದಾಣದ ಸಿಬ್ಬಂದಿಗೆ ವಿಷಯ ತಿಳಿಸಿದ್ದರು. ಇದಾದ ನಂತರವೇ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘₹ 10,000 ನಗದು, ಚಾಲನಾ ಪರವಾನಗಿ ಪತ್ರ, ಆಧಾರ್, ಮತದಾರರ ಗುರುತಿನ ಚೀಟಿ, ಇತರೆ ದಾಖಲೆಗಳಿದ್ದವು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

# ₹21.16 ಕೋಟಿ ದುರ್ಬಳಕೆ

ಕಾಫಿ ಮಂಡಳಿ ನೌಕರರ ಗೃಹ ನಿರ್ಮಾಣ ಸಂಘದ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಡಾವಣೆ ನಿರ್ಮಾಣ ಯೋಜನೆಯಲ್ಲಿ ₹ 21.16 ಕೋಟಿ ದುರ್ಬಳಕೆ ಆರೋಪದಡಿ ಕಾಫಿ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಹಾಲಿ, ಮಾಜಿ ನಿರ್ದೇಶಕರು ಸೇರಿದಂತೆ 17 ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಸಹಕಾರ ಸಂಘಗಳ ಬೆಂಗಳೂರು ನಗರ ಜಿಲ್ಲೆ ಉಪ ನಿಬಂಧಕರ ಕಚೇರಿಯ (4ನೇ ವಲಯ) ಸಹಕಾರ ಅಭಿವೃದ್ಧಿ ಅಧಿಕಾರಿ ಎನ್. ಚಂದ್ರಶೇಖರ್ ಅವರು ಹಣ ದುರ್ಬಳಕೆ ಬಗ್ಗೆ ದೂರು ನೀಡಿದ್ದಾರೆ’ ಎಂದು ವಿಧಾನಸೌಧ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಹಾಲಿ ಹಾಗೂ ಮಾಜಿ ನಿರ್ದೇಶಕರಾದ ಸಿ.ಚನ್ನೇಗೌಡ, ರಜನಿ ಶೇಖರ್, ಬಿ.ಎಂ.ರಾಜಣ್ಣ, ಎಚ್.ವಿ.ವಿನೋದ್, ಅರವಿಂದ್ ವೈದ್ಯ, ಜಿ.ರವಿಕುಮಾರ್, ಕೆ.ರಾಜಮ್ಮ, ಎಚ್.ಬಿ.ಸುರೇಂದ್ರಸ್ವಾಮಿ, ಪಿ.ಎಸ್.ಪ್ರೇಮಕುಮಾರಿ, ಎಚ್.ರವಿಚಂದ್ರನ್, ಡಿ.ಆರ್ಮುಗಂ, ಬಿ.ಬಿ.ಮಾಚಮ್ಮ, ಕೆ.ಸುಭಾಷ್, ಟಿ.ವಿ.ನೀಲಕಂಠನ್, ಕಾರ್ಯದರ್ಶಿ ಎನ್.ಜಯರಾಮ್ ಹಾಗೂ ಭೂ ಅಭಿವೃದ್ಧಿದಾರರಾದ ಬಿ.ಎಸ್. ಹೇಮಂತ್‌ಕುಮಾರ್, ಆರ್. ಸುರೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ತಿಳಿಸಿವೆ.

‘ನಗರದ ಮೀಸಗಾನಹಳ್ಳಿ ಹಾಗೂ ಬೈನಹಳ್ಳಿ ಬಳಿ ಬಡಾವಣೆ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿತ್ತು. 2007ರಿಂದ 2022ನೇ ಸಾಲಿನವರೆಗೆ ಭೂ ಅಭಿವೃದ್ಧಿಗೆ ಹೆಚ್ಚುವರಿಯಾಗಿ ₹ 21.16 ಕೋಟಿ ಪಾವತಿಸಲಾಗಿತ್ತು. ಈ ಮೂಲಕ ಸಂಘದ ಹಣವನ್ನು ಆರೋಪಿಗಳು ದುರ್ಬಳಕೆ ಮಾಡಿರುವುದು ಆಂತರಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಹೇಳಿವೆ.

‘ಹಣ ದುರುಪಯೋಗಕ್ಕೆ ಸಂಬಂಧಪಟ್ಟಂತೆ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ, ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

## ಅಪರಾಧ ಸುದ್ದಿ

### ಮಹಡಿಯಿಂದ ಬಿದ್ದು ಸಾವು, ಆತ್ಮಹತ್ಯೆ ಶಂಕೆ

**ಬೆಂಗಳೂರು:** ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಕಟ್ಟಡವೊಂದರ 4ನೇ ಮಹಡಿಯಿಂದ ಬಿದ್ದು ಮದನ್ (25) ಅವರು ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಶಿವಮೊಗ್ಗದ ಮದನ್, ಕೇಂದ್ರ ಸರ್ಕಾರದ ಇಲಾಖೆಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಕಾರು ಚಾಲಕರಾಗಿದ್ದರು. ಈ ಹಿಂದೆ, ರಾಜ್ಯ ಅರಣ್ಯ ಇಲಾಖೆಯಲ್ಲೂ ಕೆಲ ವರ್ಷ ಚಾಲಕರಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಲಗೆವಡೇರಹಳ್ಳಿಯಲ್ಲಿರುವ ಕಟ್ಟಡದ ಕೊಠಡಿಯಲ್ಲಿ ಸ್ನೇಹಿತರ ಜೊತೆ ಮದನ್ ವಾಸವಿದ್ದರು. ಶನಿವಾರ ರಾತ್ರಿ ಕಟ್ಟಡದ 4ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆತ್ಮಹತ್ಯೆಗೆ ಕಾರಣ ಸದ್ಯಕ್ಕೆ ಗೊತ್ತಾಗಿಲ್ಲ. ಸ್ನೇಹಿತನ ಮೊಬೈಲ್ ನಂಬರ್ ಬರೆದಿರುವ ಚೀಟಿ ಮದನ್ ಬಳಿ ಸಿಕ್ಕಿದೆ. ಅದನ್ನು ಆಧರಿಸಿ ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿವೆ.

### ಪತ್ನಿ ಬಗ್ಗೆ ಮಾತನಾಡಿದ್ದಕ್ಕೆ ಕೊಲೆ

**ಬೆಂಗಳೂರು:** ಕೆಂಗೇರಿ ಉಪನಗರ ಗಾಂಧಿನಗರದ ನಿವಾಸಿ ಜಿ.ರಾಜ್‌ಕುಮಾರ್ (34) ಅವರನ್ನು ನ. 6ರಂದು ಚಾಕುವಿನಿಂದ ಇರಿದು ಕೊಂದಿದ್ದು, ಕೊಲೆ ಆರೋಪದಡಿ ಸ್ನೇಹಿತ ಆರ್.ಮಾದೇಶ್ (36) ಅವರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೃತ್ಯದ ನಂತರ ಆರೋಪಿ ಮಾದೇಶ್ ಪರಾರಿಯಾಗಿದ್ದ. ಇಬ್ಬರು ಸ್ನೇಹಿತರಾಗಿದ್ದು, ಒಂದೇ ಪ್ರದೇಶದಲ್ಲಿ ವಾಸವಿದ್ದರು. ಒಟ್ಟಿಗೆ ಸುತ್ತಾಡುತ್ತಿದ್ದರು. ಕ್ಷುಲ್ಲಕ ಕಾರಣಕ್ಕಾಗಿ ಇಬ್ಬರ ನಡುವೆ ಹಲವು ಬಾರಿ ಗಲಾಟೆ ಆಗಿತ್ತು. ವೈಷಮ್ಯವು ಬೆಳೆದಿತ್ತು’ ಎಂದು ತಿಳಿಸಿದರು.

‘ಮದ್ಯದ ಪಾರ್ಟಿಗಾಗಿ ಇಬ್ಬರೂ ನ. 6ರಂದು ರಾತ್ರಿ ಒಟ್ಟಿಗೆ ಸೇರಿದ್ದರು. ಮಾದೇಶ್‌ನ ಪತ್ನಿ ಹಾಗೂ ಮಗಳ ಬಗ್ಗೆ ರಾಜ್‌ಕುಮಾರ್ ಕೆಟ್ಟದಾಗಿ ಮಾತನಾಡಿದ್ದ. ಸಿಟ್ಟಾಗಿದ್ದ ಮಾದೇಶ್, ರಾಜ್‌ಕುಮಾರ್ ಹೊಟ್ಟೆಗೆ ಚಾಕುವಿನಿಂದ ಇರಿದು ಕೊಂದಿದ್ದ’ ಎಂದು ಹೇಳಿದರು.

## ಬೈಕ್‌ನಲ್ಲಿ ಬಂದು ಚಿನ್ನದ ಸರ ಕಳ್ಳತನ

**ಬೆಂಗಳೂರು:** ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ನ. 9ರಂದು ಮಹಿಳೆಯೊಬ್ಬರನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ಯಲಾಗಿದ್ದು, ಎಫ್‌ಐಆರ್ ದಾಖಲಾಗಿದೆ.

‘ಸ್ಥಳೀಯ ನಿವಾಸಿ 30 ವರ್ಷದ ಮಹಿಳೆ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ಆರೋಪಿ ಮಹಿಳೆ ಧರಿಸಿದ್ದ 70 ಗ್ರಾಂ ತೂಕದ ಚಿನ್ನದ ಸರ ಎಳೆದಿದ್ದು, ಸರ ತುಂಡಾಗಿತ್ತು. 48 ಗ್ರಾಂ ತೂಕದ ಅರ್ಧ ಸರದ ಸಮೇತ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮಹಿಳೆ ಉಲ್ಲಾಳ ಮುಖ್ಯರಸ್ತೆಯ ಅಯ್ಯಪ್ಪ ಸ್ವಾಮಿ ದೇವಸ್ಥಾನ ಬಳಿ ನಡೆದುಕೊಂಡು ಹೊರಟಿದ್ದಾಗ ಕೃತ್ಯ ನಡೆದಿದೆ.

# ಫೋಟೊಶೂಟ್ ವಿಚಾರಕ್ಕೆ ಜಗಳ: ಕೊಲೆ

ಪ್ರಜಾವಾಣಿ ವಾರ್ತೆ



ಸೂರ್ಯ

**ದೊಡ್ಡಬಳ್ಳಾಪುರ:** ಫೋಟೊಶೂಟ್ ವಿಚಾರವಾಗಿ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ದೊಡ್ಡಬಳ್ಳಾಪುರ ಕಛೇರಿಪಾಳ್ಯ ನಿವಾಸಿ ಸೂರ್ಯ (19) ಕೊಲೆಯಾದ ಯುವಕ. ರಾಮೇಶ್ವರ ಸಮೀಪದ ಡಾಬಾದಲ್ಲಿ ಭಾನುವಾರ ಈ ಘಟನೆ ನಡೆದಿದೆ.

ಡಾಬಾ ಬಳಿ ಅಲಂಕೃತ ಸೀನರಿ ಬಳಿ ಸೂರ್ಯ ಜತೆ ತೆರಳಿದ್ದ ಮೂರು ಮಂದಿ ಯುವಕರು ಫೋಟೊಶೂಟ್ ಮಾಡುತ್ತಿದ್ದರು. ಆಗ ಕುಂಟನಹಳ್ಳಿ ಗ್ರಾಮದ ಯುವಕರ ತಂಡ ತಮ್ಮ ಫೋಟೊ ತೆಗೆಯಲು ಹೇಳಿದ್ದಾರೆ. ಆಗ ಜಗಳವಾಗಿದ್ದು, ಕೈಮಿಲಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಯುವಕ ಸೂರ್ಯನ ಎದೆಗೆ ಹರಿತವಾದ ಕೀ ಚೈನ್‌ನಿಂದ ಎದುರಾಳಿ ತಂಡ ಚುಚ್ಚಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೊಡ್ಡಬೆಳವಂಗಲ ಠಾಣೆಯಲ್ಲಿ ದೂರು ದಾಖಲಾಗಿದೆ.

### ಬಸ್ ಟೈರ್ ಸ್ಫೋಟ: ಪ್ರಯಾಣಿಕರಿಗೆ ಗಾಯ

**ಮಾಗಡಿ:** ತಾಲ್ಲೂಕಿನ ಚಿಕ್ಕತೊರೆಪಾಳ್ಯದ ಸೇತುವೆ ಬಳಿ ಭಾನುವಾರ ರಾತ್ರಿ 8 ಗಂಟೆ ಸುಮಾರಿಗೆ ಕೆಎಸ್‌ಆರ್‌ಟಿಸಿ ಬಸ್ ಟೈರ್ ಸ್ಫೋಟಗೊಂಡು ರಸ್ತೆ ಪಕ್ಕದ ಜಮೀನಿಗೆ ಬಸ್ ಉರುಳಿ ಬಿದ್ದಿದೆ. 15 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಮಾಡಬಾಳ್ ಗ್ರಾಮದ ಶಾಂತಮ್ಮ (32), ಕೆ.ಜಿ.ಕೊಪ್ಪಲು ಗೌರಮ್ಮ (55), ಜಗದೀಶ್ (30), ಬೆಂಗಳೂರಿನ ಸುಂಕದಕಟ್ಟೆ, ಬ್ಯಾಡರಹಳ್ಳಿ ನಿವಾಸಿಗಳಾದ ತೇಜಸ್ (20), ಪದ್ಮ (41), ಚಿಕ್ಕಮ್ಮ (60), ಲಕ್ಷ್ಮಿ(46), ಹರ್ಷಿತ (26), ಚಿಕ್ಕಚನ್ನಯ್ಯ (42), ಸರಸ್ವತಿ (35), ವಸಂತ (37), ಚಂದ್ರನಾಯ್ಕ್, (33), ಶಾಂತಮ್ಮ (30) ಹಾಗೂ ಚಾಲಕ ಸೈಯದ್ ಉಸ್ತಾಬ್ ನದಾಪ್ (42) ಘಟನೆಯಲ್ಲಿ ಗಾಯಗೊಂಡವರು. 61 ಮಂದಿ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದರು. ಗಾಯಾಳುಗಳನ್ನು ಮಾಗಡಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

# ಗೃಹ ಸಚಿವರ ಆಪ್ತನ ಸೋಗಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂಬಿಬಿಎಸ್ ಸೀಟು ಕೊಡಿಸುವ ಆಮಿಷವೊಡ್ಡಿ ಗೃಹ ಸಚಿವರ ಆಪ್ತನೆಂದು ಹೇಳಿಕೊಂಡ ವ್ಯಕ್ತಿ, ₹ 4.5 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ರಾಜರಾಜೇಶ್ವರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸ್ಥಳೀಯ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದರು. ಕೊರಟಗೆರೆಯವರು ಎನ್ನಲಾದ ಆರೋಪಿ ಮೊಹಮ್ಮದ್ ಜುಬೇರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರ ಮಗಳು ನೀಟ್ ಬರೆದಿದ್ದು, ತುಮಕೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಪಡೆಯಲು ಪ್ರಯತ್ನಿಸಿದ್ದರು. ಆಗ ಆರೋಪಿ ಜುಬೇರ್ ಪರಿಚಯವಾಗಿತ್ತು. ಗೃಹ ಸಚಿವರ ಆಪ್ತನೆಂದು ಹೇಳಿಕೊಂಡಿದ್ದ ಜುಬೇರ್, ಅವರ ಜೊತೆಗಿನ ಫೋಟೊಗಳನ್ನು ತೋರಿಸಿದ್ದ. ಅದನ್ನು ದೂರುದಾರರು ನಂಬಿದ್ದರು.’

‘ವೈದ್ಯಕೀಯ ಕಾಲೇಜಿನಲ್ಲಿ ಶುಲ್ಕ ಪಾವತಿ ಮಾಡಿರುವುದಾಗಿ ಹೇಳಿ ನಕಲಿ ರಶೀದಿ ಕಳುಹಿಸಿದ್ದ ಆರೋಪಿ, ದೂರುದಾರರಿಂದ ₹ 4.5 ಲಕ್ಷ ಪಡೆದಿದ್ದ. ದಿನ ಕಳೆದರೂ ಕಾಲೇಜಿನಿಂದ ಸ್ಪಂದನೆ ಬಂದಿರಲಿಲ್ಲ. ಸೀಟಿನ ಬಗ್ಗೆ ಕಾಲೇಜಿನಲ್ಲಿ ವಿಚಾರಿಸಿದಾಗ, ನಕಲಿ ರಶೀದಿ ಎಂಬುದು ಗೊತ್ತಾಗಿತ್ತು. ದೂರುದಾರ ಸಹ ನಾಪತ್ತೆಯಾಗಿದ್ದ’ ಎಂದು ಮೂಲಗಳು ತಿಳಿಸಿವೆ.

### ಯುವಕನ ಅಡ್ಡಗಟ್ಟಿ ಸುಲಿಗೆಗೆ ಯತ್ನ

**ಬೆಂಗಳೂರು:** ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಮನೋಜ್ ಅವರನ್ನು ಶನಿವಾರ ರಾತ್ರಿ ಅಡ್ಡಗಟ್ಟಿ ಹಲ್ಲೆ ಮಾಡಿ, ಸುಲಿಗೆಗೆ ಯತ್ನಿಸಲಾಗಿದೆ.

‘ಅಸ್ಸಾಂನ ಮನೋಜ್, ನಗರದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಘಟನೆಯಲ್ಲಿ ಮನೋಜ್ ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಸ್ಥಳೀಯರು ಹೇಳಿದರು.

‘ನಡೆದುಕೊಂಡು ಹೊರಟಿದ್ದ ಇವರಿಗೆ ಬೈಕ್‌ನಲ್ಲಿ ಬಂದಿದ್ದ ಇಬ್ಬರು, ಮಾರಕಾಸ್ತ್ರ ತೋರಿಸಿ ಬೆದರಿಸಿದ್ದರು. ಹಲ್ಲೆ ಮಾಡಿದ್ದರು. ಮೊಬೈಲ್ ಹಾಗೂ ಪರ್ಸ್ ಕಿತ್ತುಕೊಳ್ಳಲು ಯತ್ನಿಸಿದ್ದರು. ಯುವಕ ಕೂಗಾಡುತ್ತಿದ್ದಂತೆ ಸ್ಥಳದಿಂದ ಪರಾರಿಯಾಗಿದ್ದಾರೆ’ ಎಂದು ಸ್ಥಳೀಯರು ತಿಳಿಸಿದರು.

# ಭಯ ಹುಟ್ಟಿಸುವ ಸುರಂಗ ಮಾರ್ಗ

## ವೃದ್ಧರು, ಮಹಿಳೆಯರಿಗೆ ಮೆಟ್ಟಿಲು ಇಳಿಯುವುದೇ ಸವಾಲು • ಕೆ.ಆರ್ ವೃತ್ತದ ಸುತ್ತಮುತ್ತ ಜನಸ್ನೇಹಿಯಾಗದ ಸಬ್‌ವೇ

• ವರುಣ ಹೆಗಡೆ



ಬೆಂಗಳೂರು: ಕೋಲ್ಮಿಂಚಿನಂತೆ ಆಗಾಗ ಬೆಳಗುವ ದೀಪಗಳು, ಭಯದಲ್ಲಿಯೇ ಕುಳಿತಿರುವ ಗೃಹ ರಕ್ಷಕ ಮಹಿಳಾ ಸಿಬ್ಬಂದಿ, ಪ್ರವೇಶ ಸ್ಥಳದಲ್ಲಿಯೇ ಕಸದ ರಾಶಿ, ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವ ಪಾದಚಾರಿಗಳು...

ಇದು ಕೆ.ಆರ್.ವೃತ್ತದ ಸುತ್ತಮುತ್ತ ಇರುವ ಪಾದಚಾರಿ ಸುರಂಗ ಮಾರ್ಗಗಳ (ಸಬ್ ವೇ) ಸ್ಥಿತಿ. ಶೇಷಾದ್ರಿ ರಸ್ತೆಯ ಎಸ್‌ಜೆಪಿ ಪಾಲಿಟೆಕ್ನಿಕ್ ಕಾಲೇಜು, ಕೆ.ಆರ್. ವೃತ್ತದ ಬಹುಮಹಡಿ ಕಟ್ಟಡ, ಕಬ್ಬನ್‌ಪಾರ್ಕ್ ರಸ್ತೆ, ಕೆ.ಆರ್.ವೃತ್ತದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು, ನೃಪತುಂಗ ರಸ್ತೆಯ ಸರ್ಕಾರಿ ವಿಜ್ಞಾನ ಕಾಲೇಜು ಹಾಗೂ ಸೇಂಟ್ ಮಾರ್ಥಾಸ್ ಆಸ್ಪತ್ರೆ ಎದುರು ಪಾದಚಾರಿ ಸುರಂಗ ಮಾರ್ಗಗಳಿವೆ.

ಆದರೆ, ಇವು ಬಳಕೆದಾರರ ಸ್ನೇಹಿಯಾಗಿಲ್ಲದ ಕಾರಣ ಶರವೇಗದಲ್ಲಿ ನುಗ್ಗಿ ಬರುವ ವಾಹನಗಳ ನಡುವೆಯೇ ಜನರು ರಸ್ತೆ ದಾಟುತ್ತಿದ್ದಾರೆ. ಕೆ.ಆರ್.ವೃತ್ತದಿಂದ ಕಾರ್ಪೊರೇಷನ್ ವೃತ್ತದ ನಡುವೆ ಕೇವಲ ಒಂದು ಕಿ.ಮೀ. ಅಂತರವಿದ್ದು, ಇಲ್ಲಿ ಮೂರು ಪಾದಚಾರಿ ಸುರಂಗ ಮಾರ್ಗಗಳಿರುವುದು ವಿಶೇಷ.

ಪ್ರಮುಖವಾಗಿ ಶೇಷಾದ್ರಿ ರಸ್ತೆ, ಅಂಬೇಡ್ಕರ್ ರಸ್ತೆ ಕಡೆಯಿಂದ ಬರುವ ವಾಹನಗಳು ನೃಪತುಂಗ ರಸ್ತೆಗೆ ಸಂಪರ್ಕ ಕಲ್ಪಿಸಲಿದ್ದು, ಕಸ್ತೂರ್ ಬಾ ರಸ್ತೆ ಹಾಗೂ ಮೈಸೂರು ರಸ್ತೆ ಕಡೆ ಸಾಗುವವರಿಗೆ ಸಹಕಾರಿಯಾಗಿದೆ. ಇದರಿಂದಾಗಿ ಪ್ರತಿನಿತ್ಯ ಸಾವಿರಾರು ವಾಹನಗಳು ನೃಪತುಂಗ ರಸ್ತೆಯಲ್ಲಿ ಸಂಚರಿಸುತ್ತವೆ. ದಟ್ಟಣೆ ಹೆಚ್ಚುವ ಕಾರಣ ರಸ್ತೆ ದಾಟುವುದು ಕಷ್ಟ. ಆದ್ದರಿಂದಲೇ ಪಾದಚಾರಿಗಳಿಗಾಗಿ ಕೆ.ಆರ್. ವೃತ್ತ, ಕೆ.ಆರ್. ವೃತ್ತ ನಿಲ್ದಾಣ ಹಾಗೂ ಆರ್‌ಬಿಐ ಎದುರು ಪಾದಚಾರಿ ಸುರಂಗ ಮಾರ್ಗಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಆರ್‌ಬಿಐ ಬಳಿ ಇರುವ ಪಾದಚಾರಿ ಮಾರ್ಗದಲ್ಲಿ ಮಾತ್ರ ಸಿಸಿಟಿವಿ ಕ್ಯಾಮೆರಾ ಕಾಣಬಹುದಾಗಿದೆ. ಉಳಿದ ಎರಡು ಮಾರ್ಗದಲ್ಲಿ ಭಯದಲ್ಲಿಯೇ ಹೆಜ್ಜೆ ಹಾಕಬೇಕಾಗಿದೆ.

ಶೇಷಾದ್ರಿ ರಸ್ತೆ, ನೃಪತುಂಗ ರಸ್ತೆಯ ಸುತ್ತಮುತ್ತ ಯುವಿಸಿಇ, ಸರ್ಕಾರಿ ವಿಜ್ಞಾನ ಕಾಲೇಜು, ಎಸ್.ಜೆ. ಪಾಲಿಟೆಕ್ನಿಕ್ ಸೇರಿ ವಿವಿಧ ಕಾಲೇಜುಗಳಿವೆ. ಭಾರತೀಯ ರಿಸರ್ವ್ ಬ್ಯಾಂಕ್, ಶಾಲಾ ಶಿಕ್ಷಣ ಇಲಾಖೆ ಸೇರಿ ವಿವಿಧ ಕಚೇರಿಗಳಿವೆ.

1. ನೃಪತುಂಗ ರಸ್ತೆಯಲ್ಲಿ ಪಾದಚಾರಿ ಸುರಂಗ ಮಾರ್ಗ ಜನರಿಲ್ಲದೆ ಬಿಕೊ ಎನ್ನುತ್ತಿರುವುದು. 2. ಕೆ.ಆರ್ ವೃತ್ತ ಬಸ್ ನಿಲ್ದಾಣದ ಬಳಿ ಸುರಂಗ ಮಾರ್ಗದಲ್ಲಿ ವಿದ್ಯಾರ್ಥಿಗಳು ಕತ್ತಲೆಯಲ್ಲೇ ಸಾಗಿದರು. 3. ಕೆ.ಆರ್ ವೃತ್ತದ ಬಳಿಯಿರುವ ಪಾದಚಾರಿ ಸುರಂಗ ಮಾರ್ಗದಲ್ಲಿ ನೀರೆತ್ತುವ ಮೋಟಾರ್ ಅಳವಡಿಸಿರುವುದು. ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ 9606038256



ಮೆಟ್ಟಿಲುಗಳನ್ನು ಇಳಿದು ಸುರಂಗಗಳಲ್ಲಿ ಹಾದು ಹೋಗುವುದು ವೃದ್ಧರು ಮತ್ತು ಮಕ್ಕಳಿಗೆ ಕೊಂಚ ಪ್ರಯಾಸದ ಕೆಲಸ. ಲಿಫ್ಟ್ ಅಥವಾ ಎಸ್ಕಲೇಟರ್‌ಗಳಿದ್ದರೆ ಸಹಾಯವಾಗುತ್ತಿತ್ತು

**ಮುಸ್ತಫಾ,** ವಿದ್ಯಾರ್ಥಿ



ಪಾದಚಾರಿ ಸುರಂಗ ಮಾರ್ಗಗಳಲ್ಲಿ ಭಯದ ವಾತಾವರಣ ಇದೆ. ಇದರಿಂದಾಗಿಯೇ ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಬಳಸುತ್ತಿಲ್ಲ. ಈ ಮಾರ್ಗವನ್ನು ಸೂಕ್ತವಾಗಿ ನಿರ್ವಹಣೆ ಮಾಡಬೇಕು

**ದಿಶಾ,** ಐಟಿ ಉದ್ಯೋಗಿ

ರಾಜಧಾನಿ ಜನರ ಧ್ವನಿ

### ಎತ್ತರದ ಮೆಟ್ಟಿಲುಗಳು

ಸುರಂಗ ಮಾರ್ಗಗಳಲ್ಲಿ ಅಳವಡಿಸಿರುವ ಮೆಟ್ಟಿಲುಗಳು ಎತ್ತರವಾಗಿವೆ. ಇದರಿಂದ ವೃದ್ಧರಿಗೆ ಸಾಗುವುದು ಕಷ್ಟ. ಆದ್ದರಿಂದ ಈ ಮಾರ್ಗಗಳತ್ತ ಜನರು ಮುಖ ಮಾಡುತ್ತಿಲ್ಲ. ಕಳ್ಳಕಾಕರು ಹಾಗೂ ಪುಂಡು-ಪೋಕರಿಗಳ ಭಯದಿಂದ ಮಹಿಳೆಯರು, ಮಕ್ಕಳು ಈ ಮಾರ್ಗವನ್ನು ಬಳಸುತ್ತಿಲ್ಲ. ಇದರಿಂದಾಗಿ ಎರಡು ಸುರಂಗ ಮಾರ್ಗಗಳು ನಿಷ್ಪ್ರಯೋಜಕವಾಗುತ್ತಿವೆ.

'ಸುರಂಗ ಮಾರ್ಗಗಳನ್ನು ದಿನಕ್ಕೆ ಒಮ್ಮೆ ಸ್ವಚ್ಛಗೊಳಿಸಲಾಗುತ್ತಿದೆ. ನಾವು ಎರಡು ಪಾಳಿಯಲ್ಲಿ ಕಾವಲಿರುತ್ತೇವೆ. ಕಾನೂನುಬಾಹಿರ ಚಟುವಟಿಕೆ ಕಂಡ ಕೂಡಲೇ ಎಚ್ಚರಿಕೆ ನೀಡಿ, ಮೇಲಧಿಕಾರಿಗಳ ಗಮನಕ್ಕೆ ತರುತ್ತೇವೆ' ಎಂದು ಕೆ.ಆರ್. ವೃತ್ತದ ಪಾದಚಾರಿ ಸುರಂಗ ಮಾರ್ಗದಲ್ಲಿ ಕೆಲಸ ಮಾಡುತ್ತಿರುವ ಗೃಹ ರಕ್ಷಕ ಸಿಬ್ಬಂದಿ ಹೇಳಿದರು.

'ಪಾದಚಾರಿ ಸುರಂಗ ಮಾರ್ಗದಲ್ಲಿ ಒಬ್ಬರೆ ತೆರಳಲು ಭಯ. ಕೆಲ ಅವಧಿಯಲ್ಲಿ ಗೃಹ ರಕ್ಷಕ ಸಿಬ್ಬಂದಿಯೂ ಇರುವುದಿಲ್ಲ. ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಸಿಸಿಟಿವಿ ಕ್ಯಾಮೆರಾ ಇದ್ದರೂ ಕಾರ್ಯನಿರ್ವಹಣೆ ಖಚಿತತೆಯಿಲ್ಲ. ಇದರಿಂದಾಗಿ ಪಾದಚಾರಿ ಸುರಂಗ ಮಾರ್ಗದಲ್ಲಿ ತೆರಳುತ್ತಿಲ್ಲ' ಎಂದು ಕೆ.ಆರ್. ವೃತ್ತ ಬಸ್ ನಿಲ್ದಾಣದಲ್ಲಿ ಬಸ್‌ಗೆ ಕಾಯುತ್ತಿದ್ದ ಮಂಜುಳಾ ತಿಳಿಸಿದರು.

### ಮಳೆ ಬಂದಲ್ಲಿ ಹೊಳೆಯಾಗಲಿದೆ

ಕೆ.ಆರ್.ವೃತ್ತದ ಸುತ್ತಮುತ್ತಲು ಇರುವ ಪಾದಚಾರಿ ಸುರಂಗ ಮಾರ್ಗಗಳು ಮಳೆ ಬಂದಾಗ ಹೊಳೆಯಂತಾಗುತ್ತಿವೆ. ಇದರಿಂದಾಗಿ ಈ ಮಾರ್ಗದಲ್ಲಿ ಸಾಗಲು ಪ್ರಯಾಸ-ಪಡಬೇಕಾಗಿದೆ. ನೀರು ತೆರವಿಗೆ ಮೋಟಾರ್ ಇರಿಸಿದ್ದು, ಅದು ನಿರ್ವಹಿಸುವ ಖಾತರಿ ಇಲ್ಲವಾಗಿದೆ. ನೆಲಹಾಸು ಕೂಡಾ ಅಲ್ಲಲ್ಲಿ ಕಿತ್ತು ಹೋಗಿದೆ.

ಈ ಹಿಂದೆ ಅವ್ಯವಸ್ಥೆಯ ಆಗರವಾಗಿದ್ದ ಈ ಪಾದಚಾರಿ ಸುರಂಗ ಮಾರ್ಗಗಳಿಗೆ ಕೆಲ ದಿನಗಳು ಬೀಗಬಿದ್ದಿತ್ತು. ಕಳೆದ ವರ್ಷ ಬಿಬಿಎಂಪಿ ಮೂಲಸೌಕರ್ಯ ವಿಭಾಗ ನವೀಕರಣ ಕಾಮಗಾರಿ ಕೈಗೆತ್ತಿಕೊಂಡು, ಆತಂಕದ ಪರಿಸ್ಥಿತಿಯಲ್ಲಿ ಒತ್ತಬಹುದಾದ ಗುಂಡಿ (ಪ್ಯಾನಿಕ್ ಬಟನ್) ಅಳವಡಿಕೆ, ಸಿಬ್ಬಂದಿ ನೇಮಕಾತಿ ಸೇರಿ ವಿವಿಧ ಕ್ರಮಗಳನ್ನು ಕೈಗೊಂಡಿತ್ತು. ಇಷ್ಟಾಗಿಯೂ ಈ ಮಾರ್ಗದಲ್ಲಿ ಜನರು ಸಾಗಲು ಹಿಂದೇಟು ಹಾಕುತ್ತಿದ್ದಾರೆ. ಬೆಳಿಗ್ಗೆ 7ರಿಂದ ರಾತ್ರಿ 9ರ ತನಕ ಈ ಪಾದಚಾರಿ ಸುರಂಗ ಮಾರ್ಗಗಳು ತೆರೆದಿರಲಿವೆ.

'ಸುರಂಗ ಬಳಸಿ ರಸ್ತೆ ದಾಟುವುದು ಸುರಕ್ಷಿತ ಅಲ್ಲ. ಒಳಗೆ ಸಮರ್ಪಕ ಬೆಳಕಿನ ವ್ಯವಸ್ಥೆಯೂ ಇರುವುದಿಲ್ಲ. ಕೆಲವರು ಮೂತ್ರ ವಿಸರ್ಜನೆಗೆ ಇದನ್ನು ಬಳಸಿಕೊಳ್ಳು-ತ್ತಾರೆ. ಇಂತಹ ಮಾರ್ಗ ನಿರ್ಮಾಣದ ಯೋಜನೆಗಳು ಕೆಲವೇ ಕೆಲವರು ದುಡ್ಡು ಮಾಡಿಕೊಳ್ಳಲು ನಡೆಸುವ ದಂಧೆ' ಎಂದು ಗೊಟ್ಟಿಗೆರೆ ನಿವಾಸಿ ಅನಿಲ್ ದೂರಿದರು.

## ಸುದ್ದಿ 2 ನಿಮಿಷ

### ವಿದ್ಯಾರ್ಥಿಗಳಿಂದ ಯುದ್ಧ ವಿರೋಧಿ ಅಭಿಯಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಶನಿವಾರ 'ವಿಕ್ಟಿಮ್ಸ್ ನೋ ವಿನ್ನರ್' ಘೋಷವಾಕ್ಯದಡಿ ಯುದ್ಧ ವಿರೋಧಿ ಅಭಿಯಾನ ಹಮ್ಮಿಕೊಂಡಿದ್ದರು.

ಸಮಾಜ ಶಾಸ್ತ್ರ, ಅರ್ಥಶಾಸ್ತ್ರ ವಿದ್ಯುನ್ಮಾನ ಮಾಧ್ಯಮ ವಿಭಾಗ, ಮಹಿಳಾ ಅಧ್ಯಯನ ವಿಭಾಗ ಮತ್ತು ದಕ್ಷಿಣ ಕೊರಿಯಾದ ಅಂತರರಾಷ್ಟ್ರೀಯ ಶಾಂತಿ ಸಂಘಟನೆಗಳು ಈ ಅಭಿಯಾನ ಆಯೋಜಿಸಿದ್ದವು.

ಎಚ್‌ಡಬ್ಲ್ಯುಪಿಎಲ್ ಇಂಟರ್ ನ್ಯಾಷನಲ್ ಲಾ ವಿಭಾಗದ ಸಂಯೋಜಕ ಜಾಡೆನ್ ಲೀ, ಬೆಂಗಳೂರು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಸಂಯೋಜಕ ಎಂ.ಸಿದ್ದಪ್ಪ, ಸಮಾಜ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಆರ್.ರಾಜೇಶ್, ಅರ್ಥಶಾಸ್ತ್ರ ವಿಭಾಗದ ಎಸ್.ಆರ್.ಕೇಶವ್, ವಿದ್ಯುನ್ಮಾನ ಮಾಧ್ಯಮ ಅಧ್ಯಯನ ವಿಭಾಗದ ಸಂಯೋಜಕಿ ಆರ್. ರಾಜೇಶ್ವರಿ, ಸಹ ಪ್ರಾಧ್ಯಾಪಕಿ ವಾಹಿನಿ, ಸಹಾಯಕ ಪ್ರಾಧ್ಯಾಪಕ ಟಿ.ಶ್ರೀಪತಿ ಇದ್ದರು.

### 'ವಿಕ್ರಮ್ ಲ್ಯಾಂಡರ್ ಚಂದ್ರನಲ್ಲಿನ ಭಾರತದ ಕಾಯಂ ರಾಯಭಾರಿ'



ಬೆಂಗಳೂರು: 'ಚಂದ್ರಯಾನ 3ರ ವಿಕ್ರಮ್ ಲ್ಯಾಂಡರ್ ಮತ್ತು ಪ್ರಜ್ಞಾನ್ ರೋವರ್ ಚಂದ್ರನಲ್ಲಿರುವ ಭಾರತದ ಕಾಯಂ ರಾಯಭಾರಿ ಗಳು' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಬಾಹ್ಯಾಕಾಶ ವಿಜ್ಞಾನಿ ಎಂ.ವಿ. ರೂಪಾ ತಿಳಿಸಿದರು.

ಯೋಧ ನಮನ ಸಂಘಟನೆ ನಗರದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಚಂದ್ರಯಾನ 3ರ ಯಶಸ್ಸಿನಿಂದ ಬಾಹ್ಯಾಕಾಶ ಸಂಶೋಧನೆ ಮತ್ತು ತಂತ್ರಜ್ಞಾನದಲ್ಲಿ ನಾಸಾದಂತಹ ಅಂತರರಾಷ್ಟ್ರೀಯ ಸಂಸ್ಥೆಗಳೂ ಇಸ್ರೊದ ಸಹಭಾಗಿತ್ವ ಬಯಸುತ್ತಿವೆ' ಎಂದು ಹೇಳಿದರು.

ಸಶಸ್ತ್ರ ಪಡೆಗಳ ನಿವೃತ್ತ ಸೇನಾಧಿಕಾರಿಗಳು ಮತ್ತು ನಿವೃತ್ತ ಯೋಧರನ್ನು ಸನ್ಮಾನಿಸಿ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತರ ಸಂಪರ್ಕಾಧಿಕಾರಿ ಶಂಕರ್ ಎಸ್.ಎನ್., 'ನಮ್ಮ ಗಡಿ ರಕ್ಷಿಸುವ ಯೋಧರನ್ನು ನಾವು ಸದಾ ಗೌರವಿಸಬೇಕು' ಎಂದರು.

ಎರಡು ಎಕರೆ ಭೂಮಿಯನ್ನು ಸರ್ಕಾರಿ ಶಾಲೆಗೆ ದಾನ ನೀಡಿ, ಅದೇ ಶಾಲೆಯಲ್ಲಿ ಅಡುಗೆ ಕೆಲಸ ನಿರ್ವಹಣೆ ಮಾಡುತ್ತಿರುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಕೊಪ್ಪಳದ ಹುಚ್ಚಮ್ಮ ಚೌದ್ರಿ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

## ಸರ್ಕಾರದ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿಕೆ ವಾಗ್ದಾಳಿ

# ಗ್ಯಾರಂಟಿ ಅನುಷ್ಠಾನ ವಿಫಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಸಂಪೂರ್ಣ ವಿಫಲವಾಗಿದೆ. ಈಗ ಗ್ಯಾರಂಟಿಗಳ ಹೆಸರಿನಲ್ಲಿ ಐದು ರಾಜ್ಯಗಳ ಜನರಿಗೆ ಮಂಕುಬೂದಿ ಎರಚಲು ಹೊರಟಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.



ಕುಮಾರಸ್ವಾಮಿ

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ಯಾರೆಂಟಿ ಯೋಜನೆಗಳು ಗುರಿ ಮುಟ್ಟಿಲ್ಲ. ಯುವ ನಿಧಿ ಯೋಜನೆ ಇನ್ನೂ ಆರಂಭವೇ ಆಗಿಲ್ಲ. ಗ್ಯಾರಂಟಿ ಹೆಸರಿನಲ್ಲಿ ಕರ್ನಾಟಕದ ಜನರ ಕಿವಿಗೆ ಹೂ ಮುಡಿಸಿದ ಕಾಂಗ್ರೆಸ್, ಈಗ ಐದು ರಾಜ್ಯಗಳ ಜನರಿಗೂ ಕಿವಿಗೆ ಹೂ ಮುಡಿಸಲು ಹೊರಟಿದೆ' ಎಂದರು.

'ಶಕ್ತಿ ಯೋಜನೆಯಡಿ ಸಂಚಾರಕ್ಕೆ ಬಸ್ಸುಗಳೇ ಇಲ್ಲ. ಶಾಲಾ ಮಕ್ಕಳು ಜೆಸಿಬಿಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಇಂದಿರಾ ಕ್ಯಾಂಟೀನ್ ಹೆಸರಿನಲ್ಲೂ ಹಣ ಲೂಟಿ ಮಾಡುತ್ತಿದ್ದಾರೆ. ಗ್ಯಾರಂಟಿ ಹೆಸರಿನಲ್ಲಿ ರಾಜ್ಯವನ್ನು ಸಂಕಷ್ಟಕ್ಕೆ ತಳ್ಳಿರುವ ಕಾಂಗ್ರೆಸ್ ಇದೇ ಮಾದರಿಯನ್ನು ರಾಷ್ಟ್ರಕ್ಕೆ ವಿಸ್ತರಿಸಲು ಹೊರಟಿದೆ' ಎಂದು ಟೀಕಿಸಿದರು.

**ನೈತಿಕತೆ ಇದೆಯೇ?:** 'ಪ್ರಧಾನಿ ನರೇಂದ್ರ ಮೋದಿ ದೇಶವನ್ನು ಸಾಲದ ಸುಳಿಗೆ ಸಿಲುಕಿಸಿದ್ದಾರೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ. ಇವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಐದು ವರ್ಷಗಳಲ್ಲಿ ₹2.45 ಲಕ್ಷ ಕೋಟಿ ಸಾಲ ಮಾಡಿದ್ದರು. ಈಗ ಮತ್ತೆ ₹ 85,815 ಕೋಟಿ ಸಾಲ ಮಾಡಲು ಹೊರಟಿದ್ದಾರೆ. ಸಾಲದ ಬಗ್ಗೆ ಮಾತನಾಡಲು ಅವರಿಗೆ ನೈತಿಕತೆ ಇದೆಯೇ' ಎಂದು ಪ್ರಶ್ನಿಸಿದರು.

'ಐದು ರಾಜ್ಯಗಳ ಚುನಾವಣೆಗೆ ಹಣ ಸಂಗ್ರಹಿಸಲು ಕಾಂಗ್ರೆಸ್ ಕರ್ನಾಟಕವನ್ನು ಬಳಸಿಕೊಳ್ಳುತ್ತಿದೆ. ಹಣ ಸಂಗ್ರಹಿಸಲು ಕಾಂಗ್ರೆಸ್ ಹೈಕಮಾಂಡ್ ಸಿಎಂ, ಡಿಸಿಎಂ ಮತ್ತು ಸಚಿವರಿಗೆ ಗುರಿ ನೀಡಿದೆ. ಹಣ ಕೊಡದವರು ಸಂಪುಟದಲ್ಲಿ ಉಳಿಯುವುದಿಲ್ಲ. ಹಣ ಕೊಟ್ಟವರಷ್ಟೇ ಮಂತ್ರಿಗಳಾಗಿ ಉಳಿಯುತ್ತಾರೆ' ಎಂದರು.

'ತೆಲಂಗಾಣ ಸರ್ಕಾರ ದಿನದ 24 ಗಂಟೆ ಉಚಿತ ವಿದ್ಯುತ್ ಪೂರೈಸುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದಿನಕ್ಕೆ 5 ಗಂಟೆ ಉಚಿತ ವಿದ್ಯುತ್ ಪೂರೈಸುವುದಾಗಿ ನಮ್ಮ ಡಿಸಿಎಂ ಆಶ್ವಾಸನೆ ನೀಡಿದ್ದಾರೆ. ಇಲ್ಲಿನ ಭರವಸೆ ಈಡೇರಿಸದವರ ಮಾತನ್ನು ತೆಲಂಗಾಣದ ಜನ ನಂಬಬೇಕೆ' ಎಂದರು.

### 'ಬರಗಾಲದಲ್ಲೂ ಸಿ.ಎಂ ಶೋಕಿ'

'ರಾಜ್ಯವು ಬರಗಾಲದಿಂದ ಸಂಕಷ್ಟದಲ್ಲಿದೆ. ಸಮಾಜವಾದಿ ಎಂದು ಹೇಳಿಕೊಳ್ಳುವ ಸಿ.ಎಂ ಸಿದ್ದರಾಮಯ್ಯ ಈ ಸಂದರ್ಭದಲ್ಲಿ ಶೋಕಿಗಾಗಿ ಸರ್ಕಾರದ ಹಣ ವ್ಯಯಿಸುತ್ತಿದ್ದಾರೆ' ಎಂದು ಕುಮಾರಸ್ವಾಮಿ ಟೀಕಿಸಿದರು.

'ಮುಖ್ಯಮಂತ್ರಿ ನಿವಾಸದಲ್ಲಿ ₹ 3 ಕೋಟಿ ವೆಚ್ಚದಲ್ಲಿ ಹೊಸ ಸಭಾಂಗಣ ನಿರ್ಮಿಸಲಾಗಿದೆ. ₹ 1.90 ಕೋಟಿ ಮೌಲ್ಯದ 'ಸ್ಟ್ಯಾನ್ಲಿ' ವಿದೇಶಿ ಬ್ರ್ಯಾಂಡ್‌ನ ಸೋಫಾ, ಮಂಚ ಹಾಕಲಾಗಿದೆ. ಅದಕ್ಕೆ ಸರ್ಕಾರ ಹಣ ಪಾವತಿಸಿಲ್ಲ. ಅದನ್ನು ಕೊಟ್ಟವರು ಯಾರು? ವಿಲಾಸಿ ಸೋಫಾ, ಮಂಚ ಬಳಸುವವರು ಸಮಾಜವಾದಿಯೆ' ಎಂದು ಪ್ರಶ್ನಿಸಿದರು. 'ಸಚಿವರೊಬ್ಬರ ಕಡೆಯವರು ಸೋಫಾ, ಮಂಚ ವ್ಯವಸ್ಥೆ ಮಾಡಿದ್ದಾರೆ ಎಂಬ ಮಾಹಿತಿ ಲಭಿಸಿದೆ. ಇದನ್ನೆಲ್ಲ ನೋಡುತ್ತಿದ್ದರೆ ಹ್ಯೂಬ್ಲೊ ವಾಚ್‌ನ ಮುಂದುವರಿದ ಭಾಗದಂತೆ ಕಾಣುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

### ಗ್ಯಾರಂಟಿ'ಗೂ ಎಚ್‌ಡಿಕೆಗೂ ಏನು ಸಂಬಂಧ: ಡಿಕೆಶಿ ಪ್ರಶ್ನೆ

ಬೆಂಗಳೂರು: 'ಕುಮಾರಸ್ವಾಮಿ ಅವರು ಗ್ಯಾರಂಟಿ ಯೋಜನೆಗಳ ಜಾರಿ ಬಗ್ಗೆ ತಮ್ಮ ಕ್ಷೇತ್ರ ಚನ್ನಪಟ್ಟಣದಲ್ಲಿ ಕೇಳಿ ತಿಳಿದುಕೊಳ್ಳಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.



ಶಿವಕುಮಾರ್

'ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ಸಮರ್ಪಕವಾಗಿ ಜನರಿಗೆ ತಲುಪಿಸುತ್ತಿಲ್ಲ' ಎಂಬ ಕುಮಾರಸ್ವಾಮಿ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿಗೂ ಗ್ಯಾರಂಟಿ ಯೋಜನೆಗಳಿಗೂ ಏನು ಸಂಬಂಧ?' ಎಂದು ಪ್ರಶ್ನಿಸಿದರು.

'ಕುಮಾರಸ್ವಾಮಿ ಫಲಾನುಭವಿ ಅಲ್ಲ. ಪಾಪ, ಅವರಿಗೆ ಅವರ ಪಂಚರತ್ನ ಯೋಜನೆಗಳನ್ನು ಜಾರಿ ಮಾಡಲು ಅವಕಾಶ ಆಗಲೇ ಇಲ್ಲ. ಬಡ ಜನರ ನೋವು ಗೊತ್ತಿದ್ದರೆ ಕುಮಾರಸ್ವಾಮಿ ಮಾತನಾಡುತ್ತಿರಲಿಲ್ಲ' ಎಂದರು.

'ಯೋಜನೆ ಬಗ್ಗೆ ಚನ್ನಪಟ್ಟಣದ 25ಕ್ಕೂ ಹೆಚ್ಚು ಮತದಾರರ ಬಳಿ ನಾನೇ ಮಾತನಾಡಿದ್ದೇನೆ. ಕುಮಾರಸ್ವಾಮಿ ತಮ್ಮ ಕ್ಷೇತ್ರದ ಮತದಾರರ ಬಳಿ ಚರ್ಚಿಸಿ, ಸೌಲಭ್ಯ ತಲುಪಿದೆಯೇ? ಇಲ್ಲವೇ? ಎಂದು ಪರೀಕ್ಷಿಸಿಕೊಳ್ಳಲಿ ಎಂದು ಸಲಹೆ ನೀಡಿದರು.

### 'ಬಿಜೆಪಿ ಜತೆ ಜೆಡಿಎಸ್ ವಿಲೀನದ ಪ್ರಶ್ನೆಯೇ ಇಲ್ಲ'

ಬೆಂಗಳೂರು: 'ಬಿಜೆಪಿ ಜತೆ ಜೆಡಿಎಸ್ ವಿಲೀನದ ಪ್ರಶ್ನೆಯೇ ಇಲ್ಲ. ಆದರೆ, ಎರಡೂ ಪಕ್ಷಗಳು ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಬಯಲಿಗೆಳೆಯಲು ಕೆಲಸ ಮಾಡಲಿವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬಿಜೆಪಿ ರಾಜ್ಯ ಅಧ್ಯಕ್ಷರನ್ನಾಗಿ ಬಿ.ವೈ.ವಿಜಯೇಂದ್ರ ಅವರ ನೇಮಕವನ್ನು ಸ್ವಾಗತಿಸುವುದಾಗಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಪಕ್ಷ ವಿಲೀನದ ಕುರಿತು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಆ ಸಾಧ್ಯತೆಯನ್ನು ಅಲ್ಲಗಳೆದರು.

'ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಒಕ್ಕಲಿಗರು, ಲಿಂಗಾಯತರ ಮತಗಳನ್ನು ಒಗ್ಗೂಡಿಸಲು ಸೀಮಿತವಾಗಿಲ್ಲ. ಇತರ ಸಮುದಾಯಗಳ ಮತಗಳನ್ನು ಸೆಳೆಯುವ ಉದ್ದೇಶವೂ ಇದೆ' ಎಂದು ಹೇಳಿದರು.

### 'ಕೈ' ಹಿಡಿದ ಜೆಡಿಎಸ್ ಮುಖಂಡ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಟಿಕೆಟ್ ಸಿಗದ ಕಾರಣಕ್ಕೆ ಕಾಂಗ್ರೆಸ್ ತ್ಯಜಿಸಿ, ಜೆಡಿಎಸ್ ಸೇರಿದ್ದ ರಾಜಗೋಪಾಲರೆಡ್ಡಿ ಅವರು ಮಾತೃಪಕ್ಷಕ್ಕೆ ಮರಳಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿಯ ಹುಲಿಮಂಗಲದಲ್ಲಿರುವ ರಾಜಗೋಪಾಲರೆಡ್ಡಿ ಅವರ ನಿವಾಸಕ್ಕೆ ಭಾನುವಾರ ತೆರಳಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರೆಡ್ಡಿ ಮತ್ತು ಅವರ ಪತ್ನಿ ಸುಷ್ಮಾ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್ ಇದ್ದರು. ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದ ರಾಜಗೋಪಾಲ ರೆಡ್ಡಿ ಸೋಲು ಕಂಡಿದ್ದರು.



ಬನ್ನೇರುಘಟ್ಟ ರಸ್ತೆಯಲ್ಲಿರುವ ಲೊಯೊಲಾ ಪದವಿ ಕಾಲೇಜಿನ 4ನೇ ವರ್ಷದ ಪದವಿ ಪ್ರದಾನ ಸಮಾರಂಭದಲ್ಲಿ ಬಿ.ಎ., ಹಾಗೂ ಬಿ.ಕಾಂ. ಪದವಿಯ 113 ವಿದ್ಯಾರ್ಥಿಗಳಿಗೆ ಪ್ರದವಿ ಪ್ರದಾನ ಮಾಡಲಾಯಿತು

### ವಿಮಾನ ಪತನ: ಅಮೆರಿಕದ ಐವರು ಯೋಧರ ಸಾವು

ಬರ್ಲಿನ್ (ಎಪಿ): ಅಮೆರಿಕದ ಸೇನಾಪಡೆಗೆ ಸೇರಿದ ತರಬೇತಿನಿರತ ವಿಮಾನವೊಂದು ಪೂರ್ವ ಮೆಡಿಟರೇನಿಯನ್ ಸಮುದ್ರದಲ್ಲಿ ಪತನಗೊಂಡಿದ್ದು, ಐವರು ಯೋಧರು ಮೃತಪಟ್ಟಿದ್ದಾರೆ.

'ತರಬೇತಿಯ ಭಾಗವಾಗಿ ಆಗಸದಲ್ಲಿಯೇ ಇಂಧನ ತುಂಬುವ ಕಾರ್ಯಾಚರಣೆಯ ವೇಳೆ ವಿಮಾನ ಪತನಗೊಂಡಿದೆ' ಎಂದು ಅಮೆರಿಕದ ಯುರೋಪಿಯನ್ ಕಮಾಂಡ್ ಭಾನುವಾರ ಹೇಳಿದೆ.

'ವಿಮಾನ ಪತನದ ಹಿಂದೆ ಯಾವುದೇ ವಿಧ್ವಂಸಕ ಕೃತ್ಯದ ಶಂಕೆ ಇಲ್ಲ.

ವಾಯುಪಡೆಯ ವಿಮಾನಗಳು ಮತ್ತು ನೌಕಾಪಡೆಯ ನೌಕೆಗಳ ನೆರವಿನಲ್ಲಿ ಶೋಧ ಕಾರ್ಯಾಚರಣೆ ನಡೆದಿದೆ ಎಂದು ವಿವರಿಸಿದೆ.

#### ರಷ್ಯಾದ ಮೂವರು ಅಧಿಕಾರಿಗಳ ಸಾವು

ಕೀವ್ (ರಾಯಿಟರ್ಸ್): ರಷ್ಯಾ ಅತಿಕ್ರಮಿಸಿಕೊಂಡಿರುವ ಉಕ್ರೇನ್‌ನ ಮೆಲಿಟೊಪೋಲ್ ನಗರದಲ್ಲಿ ಭಾನುವಾರ ನಡೆದ ಬಾಂಬ್ ಸ್ಫೋಟ ಕೃತ್ಯದಲ್ಲಿ ರಷ್ಯಾದ ಮೂವರು ಸೇನಾಧಿಕಾರಿಗಳು ಮೃತಪಟ್ಟಿದ್ದಾರೆ.

ಸ್ಥಳೀಯ ಭೂಗತ ಗುಂಪುಗಳು ಪ್ರತೀಕಾರದ ಕ್ರಮವಾಗಿ ಈ ಕೃತ್ಯವನ್ನು ಎಸಗಿವೆ ಎಂದು ಉಕ್ರೇನ್‌ನ ಗುಪ್ತಚರ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾದ ಸೇನಾಧಿಕಾರಿಗಳ ಸಭೆ ನಡೆಯುತ್ತಿದ್ದಾಗ ಬಾಂಬ್ ಸ್ಫೋಟಗೊಂಡಿದೆ ಎಂದು ವಿವರಿಸಿದ್ದಾರೆ.

## 'ಲೋಕಸಭೆಗೆ ಸಾಮೂಹಿಕ ನಾಯಕತ್ವ'

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: 'ಸಾಮೂಹಿಕ ನಾಯಕತ್ವದಲ್ಲಿ ಲೋಕಸಭೆ ಚುನಾವಣೆಯನ್ನು ಎದುರಿಸುತ್ತೇವೆ' ಎಂದು ಬಿಜೆಪಿ ರಾಜ್ಯ ಅಧ್ಯಕ್ಷರಾಗಿ ನೇಮಕಗೊಂಡಿರುವ ಬಿ.ವೈ.ವಿಜಯೇಂದ್ರ ಅವರು ಹೇಳಿದರು.

ಇಲ್ಲಿನ ಉದ್ದಾನೇಶ್ವರ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿ ಪೂಜೆ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

'ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಹೆಚ್ಚಿನ ಅಭ್ಯರ್ಥಿಗಳನ್ನು ಗೆಲ್ಲಿಸಿ, ಕೇಂದ್ರದಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವುದು ನಮ್ಮ ಗುರಿ. ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಬೇಕು. ಪ್ರತಿ ಕಾರ್ಯಕರ್ತನಿಗೂ ಅವರದೇ ಜವಾಬ್ದಾರಿ ಇರಲಿದೆ' ಎಂದರು.

'ಪಕ್ಷದಲ್ಲಿ ಆಂತರಿಕವಾಗಿ ಹಲವು ಬಣಗಳಲ್ಲಿ ಹಂಚಿಹೋಗಿರುವ ಮುಖಂಡರನ್ನು ಒಗ್ಗೂಡಿಸಬೇಕಿದೆ. ಪಕ್ಷ ಬಿಡಲು ಯೋಚಿಸುತ್ತಿರುವ ಮುಖಂಡರನ್ನು ಪಕ್ಷದಲ್ಲೇ ಉಳಿಸುವ ಕೆಲಸ ಮಾಡುತ್ತೇನೆ' ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್.ಸಿ ಮೋರ್ಚಾ ಕಾರ್ಯದರ್ಶಿ ಮಾದೇನಹಳ್ಳಿ ಪ್ರಕಾಶ್, ನೆಲಮಂಗಲ ಮಂಡಲ ಅಧ್ಯಕ್ಷ ಜಿ.ಬಿ.ಹೇಮಂತ ಕುಮಾರ, ಸೋಂಪುರ ಹೋಬಳಿ ಅಧ್ಯಕ್ಷ ಕೆ.ಮಧುಸೂದನ, ಪ್ರಧಾನ ಕಾರ್ಯದರ್ಶಿ ಎಸ್.ಮಹೇಶ, ಮುಖಂಡರಾದ ಗುಬ್ಬಣ್ಣ ಸ್ವಾಮಿ ಇದ್ದರು.



ಅನಂತಸ್ಮೃತಿ ನಡಿಗೆ ಮತ್ತು ಪಂಜಿನ ಮೆರವಣಿಗೆಯಲ್ಲಿ ಬಿ.ವೈ.ವಿಜಯೇಂದ್ರ ಮತ್ತು ತೇಜಸ್ವಿನಿ ಅನಂತಕುಮಾರ್ ಪಾಲ್ಗೊಂಡಿದ್ದರು.

### 'ಅನಂತ ಪರಿಶ್ರಮ ಮರೆಯುವಂತಿಲ್ಲ'

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಲು ಅನಂತಕುಮಾರ್ ಅವರ ಪರಿಶ್ರಮ ಮರೆಯುವಂತಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಅನಂತಕುಮಾರ್ ಪುಣ್ಯತಿಥಿ ಹಿನ್ನೆಲೆಯಲ್ಲಿ ಭಾನುವಾರ ಆಯೋಜಿಸಿದ್ದ 4ನೇ ಅನಂತಸ್ಮೃತಿ ನಡಿಗೆ, ಪಂಜಿನ ಮೆರವಣಿಗೆಯಲ್ಲಿ ಭಾಗವಹಿಸಿ ಮಾತನಾಡಿದರು. 'ರಾಜ್ಯದಲ್ಲಿ ಬಿಜೆಪಿಗೆ ಭದ್ರ ಬುನಾದಿ ಹಾಕಿದವರು ಯಡಿಯೂರಪ್ಪ ಮತ್ತು ಅನಂತಕುಮಾರ್. ಇಬ್ಬರೂ ಪಕ್ಷದ ಸಂಘಟನೆ ಬಗ್ಗೆ ಸದಾ ಚರ್ಚಿಸುತ್ತಿದ್ದರು. ಅನಂತ್ ಕುಮಾರ್ ಅವರು ಮನೆಗೆ ಬಂದರೆ ಯಡಿಯೂರಪ್ಪ ತಮ್ಮ ಕಾರ್ಯಕ್ರಮಗಳನ್ನು ಮರೆಯುತ್ತಿದ್ದರು. ಹಗಲಿರುಳೆನ್ನದೇ ಪಕ್ಷದ ಬೆಳವಣಿಗೆಗಾಗಿ ಧ್ಯಾನಿಸುತ್ತಿದ್ದರುಡ' ಎಂದು ಸ್ಮರಿಸಿದರು.

### 'ಸ್ಪರ್ಧೆ ಬಗ್ಗೆ ಸಮಯ ಬಂದಾಗ ಹೇಳುತ್ತೇನೆ'

ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಸಮಯ ಬಂದಾಗ ಹೇಳುತ್ತೇನೆ. ಈ ಕುರಿತು ಮಾತನಾಡಲು ಇದು ಸೂಕ್ತ ಸಮಯವಲ್ಲ ಎಂದು ಬಿಜೆಪಿ ಉಪಾಧ್ಯಕ್ಷೆಯೂ ಆಗಿರುವ ತೇಜಸ್ವಿನಿ ಅನಂತಕುಮಾರ್ ತಿಳಿಸಿದರು.

### ಕೆಇಎ ಪರೀಕ್ಷಾ ಅಕ್ರಮ: ಕಡತ ತರಿಸಿಕೊಂಡ ಸಿಐಡಿ

ಕಲಬುರಗಿ: ಬ್ಲೂಟೂತ್ ಉಪಕರಣ ಬಳಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಬರೆದಿದ್ದ ಅಕ್ರಮ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಆರಂಭಿಸಿದ್ದಾರೆ.

ಅಕ್ಟೋಬರ್ 28ರಂದು ವಿವಿಧ ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆ ನಡೆಸಿತ್ತು. ಕೆಲವರು ಬ್ಲೂಟೂತ್ ಡಿವೈಸ್ ಬಳಸಿ ಬಂಧಿತರಾಗಿದ್ದರು. ಪ್ರಕರಣದ ಆರೋಪಿ ಆರ್.ಡಿ.ಪಾಟೀಲ ಬಂಧನದ ಮರುದಿನವೇ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲಾಗಿತ್ತು. ಈ ಸಂಬಂಧ ಕಲಬುರಗಿ ನಗರ, ಅಫಜಲಪುರ, ಯಾದಗಿರಿ ಸೇರಿ ಎಂಟು ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ. ಸಿಐಡಿ ಅಧಿಕಾರಿಗಳು ಭಾನುವಾರ ಅಶೋಕನಗರ ಠಾಣೆಯಲ್ಲಿ ದಾಖಲಾಗಿದ್ದ ದೂರು, ಎಫ್‌ಐಆರ್ ಮಾಹಿತಿ ಪಡೆದಿದ್ದಾರೆ. ಕೆಲ ದಿನಗಳಲ್ಲಿ ಉಳಿದ ಠಾಣೆಗಳಲ್ಲಿನ ದೂರುಗಳು ಹಾಗೂ ಕಡತಗಳನ್ನು ತರಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ 9606038256 ಮಾಡಬಹುದು.



ಬಸವನಗುಡಿಯ ಸ್ವಾಮಿ ವಿವೇಕಾನಂದ ವೃತ್ತದ ರಸ್ತೆಯ ದುಃಸ್ಥಿತಿ

### 'ರಸ್ತೆಗೆ ಬಾಗಿರುವ ಮರ ತೆರವುಗೊಳಿಸಿ'

ಶಂಕರಪುರದ ಸತ್ಯಪ್ರಮೋದ ತೀರ್ಥ ರಸ್ತೆಯ 5ನೇ ಅಡ್ಡರಸ್ತೆಯಲ್ಲಿ ಮರವೊಂದು ರಸ್ತೆಗೆ ಬಾಗಿದೆ. ಕೆಲ ಟೊಂಗೆಗಳು ಮುರಿದಿವೆ. ಇದರಿಂದ ವಾಹನಗಳು ಮರಕ್ಕೆ ಬಡಿದಿರುವ ಘಟನೆಗಳು ನಡೆದಿವೆ. ಮರವು ಶಿಥಿಲವಾಗಿದ್ದು, ಅನಾಹುತ ಸಂಭವಿಸುವ ಮೊದಲು ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

**ವಿ. ಪಾಂಡುರಂಗ,** ಸ್ಥಳೀಯ ನಿವಾಸಿ



ಚಿಕ್ಕಬಾಣಾವರ ರಸ್ತೆಯಲ್ಲಿ ಗುಂಡಿ ತೆಗೆದಿರುವುದು

### 'ಚಿಕ್ಕಬಾಣಾವರ: ರಸ್ತೆಗುಂಡಿ ಮುಚ್ಚಿ'

ಚಿಕ್ಕಬಾಣಾವರದ ಅಬ್ಬಿಗೆರೆ ಧರ್ಮಸ್ಥಳ ವೀರೇಂದ್ರ ಹೆಗ್ಗಡೆ ರಸ್ತೆಯಲ್ಲಿ ಜಲಮಂಡಳಿ ಸಿಬ್ಬಂದಿ ಪೈಪುಗಳನ್ನು ಅಳವಡಿಸಲು ಗುಂಡಿ ತೆಗೆದಿದ್ದಾರೆ. ಇದರಿಂದ, ರಸ್ತೆ ದೂಳುಮಯವಾಗಿದೆ. ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ರಸ್ತೆ ಕಾಮಗಾರಿ ಮಾಡುವವರು ರಸ್ತೆಯಲ್ಲಿ ಗುಂಡಿ ತೆಗೆಯುವ, ಮುಚ್ಚುವ ಕೆಲಸ ಮಾಡುತ್ತಿದ್ದಾರೆ. ಇದರಿಂದ, ಸಂಚಾರಕ್ಕೆ ಸಮಸ್ಯೆಯಾಗಿದೆ. ಜತೆಗೆ ಅಯ್ಯಪ್ಪ ಶಾಲೆಯ ಹತ್ತಿರದ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲ. ರಾತ್ರಿ ಸಮಯದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

**ರಾ.ಬಾ. ವರದರಾಜನ್,** ಸ್ಥಳೀಯ ನಿವಾಸಿ

### 'ಕಾವೇರಿ ನೀರು ಪೂರೈಸಿ'

ಕೆ.ಆರ್.ಪುರದ ಸೂರ್ಯ ಬಡಾವಣೆಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಜಲಮಂಡಳಿ ಅಧಿಕಾರಿಗಳಿಗೆ ವಿಚಾರಿಸಿದರೆ 15 ದಿನಗಳಿಗೊಮ್ಮೆ ಮಾತ್ರ ಕಾವೇರಿ ನೀರು ಪೂರೈಸಲಾಗುವುದು ಎಂಬ ಸಿದ್ಧ ಉತ್ತರ ನೀಡುತ್ತಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಈ ಭಾಗದಲ್ಲಿ ಉದ್ಭವವಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಕೂಡಲೇ ನಿವಾರಿಸಬೇಕು.

**ಪಾರ್ವತಮ್ಮ,** ಸ್ಥಳೀಯ ನಿವಾಸಿ



ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ ದೊಡ್ಡಬಸ್ತಿ ರಸ್ತೆಯ ಇಕ್ಕೆಲಗಳಲ್ಲಿ ಕಸದ ರಾಶಿ

### 'ಮುಖ್ಯರಸ್ತೆಯಲ್ಲಿ ಹಾಕಿರುವ ಕಸ'

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಯ 4ನೇ ಬ್ಲಾಕ್‌ನ ದೊಡ್ಡಬಸ್ತಿ ರಸ್ತೆಯ ಮಾರ್ಗದ ಇಕ್ಕೆಲಗಳಲ್ಲಿ ಕಸ ಹಾಕಲಾಗುತ್ತಿದೆ. ಮಾಂಸದ ಅಂಗಡಿಯವರು ಕೋಳಿ, ಮೇಕೆಯ ತ್ಯಾಜ್ಯಗಳನ್ನು ಎಸೆಯುತ್ತಿದ್ದು, ನಿವಾಸಿಗಳು ಮನೆಯಲ್ಲಿನ ಕಸವನ್ನು ಹಾಕುತ್ತಿದ್ದಾರೆ. ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಕ್ರಮ ಕೈಗೊಳ್ಳುತ್ತಿಲ್ಲ.

**ಆಂಜನೇಯ,** ಸ್ಥಳೀಯ ನಿವಾಸಿ

ಸ್ವಲೀನ ಮಕ್ಕಳಿಗೆ ಯೋಗ ಕಲಿಸಿಕೊಡುತ್ತಿರುವ ಶ್ಯಾಡೋ ಟೀಚರ್



# ಆಟಿಸಂ ಮಕ್ಕಳ ಶಿಕ್ಷಣಕ್ಕೆ 'ಪ್ರೀತಿಯೇ ಜೀವಾಳ'

ಡಿ.ಬಿ.ನಾಗರಾಜು

ಯಾರೊಂದಿಗೂ ಬೆರೆಯಲು ಇಷ್ಟಪಡದ, ಸಮಾಜದೊಂದಿಗೆ ಸಂವಾದಿಸಲು ಹಿಂದೇಟು ಹಾಕುವ, ಎಲ್ಲದಕ್ಕೂ ಪೋಷಕರನ್ನೇ ಅವಲಂಬಿಸುವ ಆಟಿಸಂ (ಸ್ವಲೀನ) ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವುದು ಇಂದಿಗೂ ಹರಸಾಹಸದ ಕೆಲಸ.

ಶೈಶವದಿಂದಲೇ ಆಟಿಸಂಗೀಡಾಗುವ ಮಕ್ಕಳನ್ನು ಸ್ವಾವಲಂಬಿಗಳನ್ನಾಗಿಸಲು ಚಿಕಿತ್ಸೆಯ ಜೊತೆಗೆ ಕಲಿಕೆಯೂ ಅತ್ಯಗತ್ಯ. ತುಸು ದುಬಾರಿಯಾಗಿಯೇ ಇರುವ ಈ ಎರಡೂ ಇಂಥವರಿಗೆ ಅವಶ್ಯ. ಜೊತೆಗೆ ಸಾಕಷ್ಟು ಸಮಯ, ಸಂಯಮ, ಅಪಾರ ಪ್ರೀತಿಯೂ ಇದರೊಳಗಿರಬೇಕು.

ಹುಟ್ಟಿನಿಂದಲೇ ಕೆಲವು ಮಕ್ಕಳಿಗೆ ಆಟಿಸಂ ಬಾಧಿಸುವುದುಂಟು. ಎರಡು ವರ್ಷದೊಳಗೆ ಆಯಾ ಕುಟುಂಬದವರು ಇದನ್ನು ಸೂಕ್ಷ್ಮವಾಗಿ ಗಮನಿಸಿಕೊಂಡು ತಜ್ಞ ವೈದ್ಯರನ್ನು ಮೂರ್ನಾಲ್ಕು ಬಾರಿ ಭೇಟಿಯಾಗಿ ಸಮಾಲೋಚಿಸಿದರೆ, ಅಂತಹ ಮಗುವಿಗೆ ಅತ್ಯಗತ್ಯವಾಗಿ ಬೇಕಿರುವ ಚಿಕಿತ್ಸೆ ಹಾಗೂ ಶಿಕ್ಷಣ ಕೊಡಿಸಲು ಸಹಕಾರಿ ಆಗಲಿದೆ. ಜೊತೆಗೆ ಮಗುವಿನ ಸಕಾಲಿಕ ಬೆಳವಣಿಗೆಗೂ ಪೂರಕ.

ಪ್ರತಿ ಮಗುವಿಗೂ ಕಲಿಕೆಯನ್ನು ಆರಂಭಿಸುವಂತೆಯೇ ಆಟಿಸಂಗೀಡಾದ ಮಕ್ಕಳಿಗೂ ಎರಡೂವರೆ, ಮೂರು ವರ್ಷದಿಂದಲೇ ಶಿಕ್ಷಣ ನೀಡಲಾಗುತ್ತಿದೆ. ಕಲಿಕೆ ಆರಂಭಿಸುವುದಕ್ಕೂ ಮುನ್ನ ಕೆಲವೊಂದು ಪರೀಕ್ಷೆ, ಮೌಲ್ಯಮಾಪನ ಕಡ್ಡಾಯ. ನರ ಹಾಗೂ ಮಕ್ಕಳ ತಜ್ಞ ವೈದ್ಯರು ಹಾಗೂ ವಿಶೇಷ ಶಾಲೆಗಳಲ್ಲಿನ ಅನುಭವಿ ಶಿಕ್ಷಕರೇ ಮಾಡಬೇಕಾದ ಮೊದಲ ಕೆಲಸವಿದು.

ಮಗುವೊಂದು ಆಟಿಸಂನ ಯಾವ ರೀತಿಯ ಲಕ್ಷಣದಿಂದ ಬಳಲುತ್ತಿದೆ. ಅದರ ಪ್ರಮಾಣ ತುಸು ಇದೆಯೋ? ಪರಿಹರಿಸಬಹುದೋ? ಗಂಭೀರವಾಗಿದೆಯೋ? ಎಂಬುದನ್ನು ನಿರ್ಧರಿಸಿ ಚಿಕಿತ್ಸೆ ಮತ್ತು ಕಲಿಕೆಯನ್ನು ಏಕಕಾಲಕ್ಕೆ ಆರಂಭಿಸಬೇಕಿದೆ. ಈಚೆಗೆ ಯೋಗ ಹಾಗೂ ಆಯುರ್ವೇದವನ್ನು ಇದಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇಂತಹ ಪ್ರಯತ್ನ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ (ಬೆಟ್ಟದಾಸನಪುರ ಮುಖ್ಯ ರಸ್ತೆ) ಸರ್ವಂ ಶಾಲೆಯಲ್ಲಿ ನಡೆದಿದೆ. ಯಶಸ್ಸೂ ಸಿಕ್ಕಿದೆ.

## ಆಟಿಸಂ ಕುರಿತಂತೆ

ನರಮಂಡಲದ ಬೆಳವಣಿಗೆಯಲ್ಲಿನ ನ್ಯೂನತೆ, ಸಾಮಾಜಿಕ ನಡವಳಿಕೆ ಮತ್ತು ಸಂವಹನ ಕೊರತೆಯನ್ನು ಆಟಿಸಂ ಎಂದು ಗುರುತಿಸಲಾಗುತ್ತದೆ. ಇದು ನರವ್ಯೂಹಕ್ಕೆ ಸಂಬಂಧಿಸಿದ ಸಮಸ್ಯೆ. ಮೆದುಳಿನ ಸಾಮಾನ್ಯ ಬೆಳವಣಿಗೆಯನ್ನು ಕುಂಠಿತಗೊಳಿಸಿ ಮಗುವಿನ ಸಂವಹನ, ಸಾಮಾಜಿಕ ಒಡನಾಟ, ಗ್ರಹಿಕೆ ಮತ್ತು ವರ್ತನೆಗಳ ಮೇಲೆ ಪರಿಣಾಮ ಬೀರುತ್ತದೆ. ಬುದ್ಧಿಮಾಂದ್ಯತೆ, ಅತಿ ಕ್ರಿಯಾಶೀಲತೆ, ಚಲನವಲನದಲ್ಲಿನ ಅಡೆತಡೆಗಳು, ಮೂರ್ಛೆ ಹೊಂದುವುದು, ಕಲಿಯುವ ತೊಂದರೆ, ಶ್ರವಣ ಅಥವಾ ದೃಷ್ಟಿದೋಷ ಸೇರಿದಂತೆ ಇನ್ನಿತರ ಸಮಸ್ಯೆಗಳು ಆಟಿಸಂನೊಂದಿಗೆ ಕಾಣಿಸಿಕೊಳ್ಳಬಹುದು. ಅರ್ಥಪೂರ್ಣವಾಗಿ ಮಾತನಾಡಲು, ಭಾವನೆ ಹೇಳಿಕೊಳ್ಳಲು, ಸಂವಹನ ನಡೆಸಲು ಕಷ್ಟಪಡುವುದು. ಕೆಲವೊಂದು ಪದಗಳ ಪುನರುಚ್ಚಾರ, ಹಾವಭಾವಗಳಲ್ಲಿ ಪುನರಾವರ್ತನೆ. ಮಾತನಾಡುವಾಗ ಸಂಜ್ಞೆ ಬಳಸುವಿಕೆ, ಎದುರಿರುವವರ ಮಾತಿಗೆ ಸ್ಪಂದಿಸದಿರುವುದು, ಮಾರ್ಗದರ್ಶನ, ಸೂಚನೆ ಪಾಲಿಸಲು ಸಾಧ್ಯವಾಗದಿರುವುದು. ಬದಲಾವಣೆಗೆ ಒಗ್ಗಿಕೊಳ್ಳದಿರುವುದು, ಸಮಾಜದೊಂದಿಗೆ ಒಡನಾಟವಿಟ್ಟುಕೊಳ್ಳದೇ ಏಕಾಂಗಿಯಾಗಿರಲು ಬಯಸುವುದು. ಸ್ವಭಾವದಲ್ಲಿ ಆಕ್ರಮಣಶೀಲತೆ ಮತ್ತು ಉದ್ವೇಗತೆ, ಆಹಾರ ಸೇವನೆಯಲ್ಲೂ ಸಮಸ್ಯೆ, ಅನೈಚ್ಛಿಕ ಮೂತ್ರಸ್ರಾವವೂ.. ಆಟಿಸಂನ ಲಕ್ಷಣವಾಗಿದೆ.

> ಆಟಿಸಂ ಲಕ್ಷಣ ಹೊಂದಿರುವ ಮಕ್ಕಳ ಪೋಷಕರು ಒತ್ತಡಕ್ಕೊಳಗಾಗಬಾರದು. ಕಲಿಸುವ ಶಿಕ್ಷಕರು ಸೇವಾ ಮನೋಭಾವದೊಟ್ಟಿಗೆ ಪ್ರೀತಿಯ ಹೊಳೆಯನ್ನೇ ಹರಿಸಿದಾಗ, ಮಗು ಸ್ವಾವಲಂಬಿಯಾಗುವತ್ತ ದಿಟ್ಟ ಹೆಜ್ಜೆಯಿಡಲಿದೆ



ಆಟಿಸಂಗೊಳಗಾದ ಮಕ್ಕಳ ಪೋಷಕರಿಗೂ ಯೋಗ ಕಲಿಕೆ

## ಸೇವಾ ಮನೋಭಾವ

ತುಸು ಹಾಗೂ ಪರಿಹರಿಸಬಹುದು ಎಂಬಂತಹ ಆಟಿಸಂ ಲಕ್ಷಣಗಳುಳ್ಳ ಮಕ್ಕಳಿಗೆ ವಿಶೇಷ ಶಾಲೆಗಳಲ್ಲೂ ಸಾಮಾನ್ಯ ಶಿಕ್ಷಕರೇ ನರ್ಸರಿ ಹಂತದಲ್ಲಿ ಕಲಿಸುತ್ತಾರೆ. ಹೆಚ್ಚಿನ ಕಾಳಜಿ ವಹಿಸಿ ವಿವಿಧ ಚಟುವಟಿಕೆಗಳಲ್ಲಿ ತಲ್ಲೀನರನ್ನಾಗಿಸುತ್ತಾರೆ. ಮಗುವೊಂದು ಯಾವ ಸಮಸ್ಯೆಯಿಂದ ಬಳಲುತ್ತಿರುತ್ತದೆಯೋ; ಅದನ್ನು ಪರಿಹರಿಸಲಿಕ್ಕಾಗಿ ವಿವಿಧ ಚಿಕಿತ್ಸೆಯೊಟ್ಟಿಗೆ ಕಲಿಕೆಯ ಮೂಲಕವೂ ಯತ್ನಿಸುತ್ತಾರೆ. ಈ ಹಂತದಲ್ಲೇ ಕೆಲವೊಂದು ಮಕ್ಕಳು ಸ್ವಾವಲಂಬಿಗಳಾಗುತ್ತವೆ. ಮುಂದಿನ ಕಲಿಕೆಗೆ ಕುತೂಹಲಿಗಳಾಗುತ್ತವೆ.

ಪ್ರಾಥಮಿಕ ಹಂತದಲ್ಲಿ ಸಾಮಾನ್ಯ ಮಗು ಹಾಗೂ ವಿಶೇಷ ಮಗುವಿಗೂ ಬೋಧಿಸುವ ಸಾಮರ್ಥ್ಯ ಹೊಂದಿರುವ ಶಿಕ್ಷಕರು ಕಲಿಸುತ್ತಾರೆ. ಈ ಹಂತದಲ್ಲಿ ಮಗುವಿನ ಸ್ಪಂದನೆ ಉತ್ತಮವಾಗಿದ್ದು, ಕಲಿಕೆಯು ಆಸಕ್ತಿಯಿಂದ ಇದ್ದರೆ, ಅದು ಸಮಾಜದೊಟ್ಟಿಗೆ ಒಡನಾಡಲು ಶುರು ಮಾಡುತ್ತದೆ. ತನ್ನ ಭವಿಷ್ಯ ರೂಪಿಸಿಕೊಳ್ಳಲು ಮುಂದಡಿಯಿಡಲಿದೆ ಎನ್ನುತ್ತಾರೆ ಆಟಿಸಂ ವಿಷಯಕ್ಕೆ ಸಂಬಂಧಿಸಿದಂತೆ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಮಹರ್ಷಿ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಅಧ್ಯಯನ ಮಾಡುತ್ತಿರುವ ಹಾಗೂ ಸ್ವಲೀನ ಮಕ್ಕಳಿಗೆ ಯೋಗ ಕಲಿಸಿಕೊಡುವ ಯೋಗಾಚಾರ್ಯ ಮಹೇಶ್ ನಟರಾಜನ್.

## ಶ್ಯಾಡೋ ಟೀಚರ್

ಗಂಭೀರ ಲಕ್ಷಣ ಇರುವ ಮಕ್ಕಳಿಗೆ ಕಲಿಸುವುದೇ ಸವಾಲಿನದ್ದು. ಇಂತಹ ಮಕ್ಕಳಿಗೆ ಸಕಲವನ್ನೂ ಹೇಳಿಕೊಡಬೇಕಿದೆ. ಅಕ್ಷರ ಕಲಿಸುವುದಕ್ಕೂ ಮುನ್ನವೇ ಸ್ವಭಾವ, ನಡವಳಿಕೆ, ಸ್ಪಂದನೆ, ಭಾವನೆ, ಮಾತು.. ಕಲಿಸಬೇಕು. ಇದು ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರ ಸಾರಥ್ಯದಲ್ಲೇ ನಡೆಯಬೇಕು. ಈ ಶಿಕ್ಷಕರಿಗೆ ಶ್ಯಾಡೋ ಶಿಕ್ಷಕರ (ಛಾಯಾ ಶಿಕ್ಷಕರ) ಸಾಥ್ ಬೇಕಿದೆ. ಈ ಮಕ್ಕಳು ಸ್ಪಂದಿಸುವುದೇ ಇಲ್ಲ. ಯಾವೊಂದಕ್ಕೂ ಪ್ರತಿಕ್ರಿಯಿಸುವುದಿಲ್ಲ. ಇಂತಹ ಪ್ರತಿ ಮಗುವಿಗೆ ಒಬ್ಬ ಶ್ಯಾಡೋ ಟೀಚರ್‌ನ ಅವಶ್ಯಕತೆಯಿದೆ. ವಿಶೇಷ ಶಿಕ್ಷಕರು ಹೇಳುವುದನ್ನು ಛಾಯಾ ಶಿಕ್ಷಕ ಮಗುವಿನ ಜೊತೆಗಿದ್ದು ಅಭ್ಯಾಸ ಮಾಡಿಸಬೇಕು. ಸ್ಪಂದನೆ ಸಿಗುವ ತನಕವೂ ಈ ಅಭ್ಯಾಸ ನಿರಂತರವಾಗಿರಬೇಕು. ಇದಕ್ಕೆ ಸಾಕಷ್ಟು ಸಮಯ ಬೇಕಿದೆ. ಸ್ವಲೀನ ಮಗುವೊಂದು ಸ್ವಾವಲಂಬಿಯಾಗಲು ಇದು ಅವಶ್ಯವೂ ಆಗಿದೆ. ಇಲ್ಲಿ ಮಗುವನ್ನು ಸ್ವಾವಲಂಬಿಯನ್ನಾಗಿಸುವುದೇ ಪ್ರಮುಖ ಧ್ಯೇಯೋದ್ದೇಶ. ನಂತರವಷ್ಟೇ ಆಟೋಟ, ಹಾಡು–ನೃತ್ಯ, ಅಕ್ಷರ ಕಲಿಕೆ ಎನ್ನುತ್ತಾರೆ ಆಟಿಸಂ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಸರ್ವಂ ಶಾಲೆಯ ಸಂಸ್ಥಾಪಕಿ ಎಂ.ಸ್ವಾತಿ.

## ಯೋಗ–ಆಯುರ್ವೇದ

'ಮಗುವೊಂದು ನಮ್ಮ ಶಾಲೆ ಪ್ರವೇಶಿಸುತ್ತಿದ್ದಂತೆ ವೈದ್ಯರ ವರದಿಯನ್ನು ಅಧ್ಯಯನ ಮಾಡುತ್ತೇವೆ. ಯಾವ ಲಕ್ಷಣಗಳನ್ನು ಹೊಂದಿದೆ ಎಂಬುದನ್ನು ಕೂಲಂಕಷವಾಗಿ ಅರಿಯುತ್ತೇವೆ. ನಂತರ ಯೋಗಾಚಾರ್ಯರು ಪೋಷಕರೊಂದಿಗೆ ಸಮಾಲೋಚಿಸುತ್ತಾರೆ. ಮಗುವಿನ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಯಾವ ಯೋಗಾಸನದಿಂದ ಪ್ರಯೋಜನವಾಗಲಿದೆ. ಆಯುರ್ವೇದ ಪದ್ಧತಿಯಂತೆ ಯಾವ ಚಿಕಿತ್ಸೆ ಕೊಡಬೇಕು ಎಂಬುದನ್ನು ನಿರ್ಧರಿಸಿ ಅದರಂತೆ ವೇಳಾಪಟ್ಟಿ ನಿಗದಿಯಾಗಲಿದೆ' ಎನ್ನುತ್ತಾರೆ ಸ್ವಾತಿ.

'ಆಟಿಸಂಗೂ ನರಮಂಡಲಕ್ಕೂ ನೇರ ಸಂಬಂಧವಿದೆ. ಮೆದುಳಿನಲ್ಲಿನ ನರತಂತುಗಳು ಸಂದೇಶ ರವಾನಿಸಿದಾಗ; ದೇಹವು ಅದನ್ನು ಸ್ವೀಕರಿಸಿ ಕಾರ್ಯಗತಗೊಳಿಸಲು ಅವಶ್ಯವಿರುವ ಕೆಲವು ಸಂಪರ್ಕ ತಪ್ಪಿರುತ್ತದೆ. ಇದೇ ಸಮಸ್ಯೆಯಾಗಿ ಕಾಡುತ್ತದೆ. ಇದನ್ನು ಪತ್ತೆ ಹಚ್ಚಿ, ಸೂಕ್ತವಾದ ಸರಳ ಯೋಗಾಸನವನ್ನು ಮಗುವಿಗೆ ಕಲಿಸುತ್ತೇವೆ. ನಿತ್ಯವೂ 45 ನಿಮಿಷ ಯೋಗಾಸನಕ್ಕೆ ಮೀಸಲು. ಇದು ಪರಿಣಾಮಕಾರಿಯಾಗಿ ಮಗುವಿನ ದೇಹವನ್ನು ಹುರಿಗೊಳಿಸಿ, ಚಲನಶೀಲಗೊಳಿಸಲಿದೆ' ಎಂದು ಯೋಗಾಚಾರ್ಯ ಮಹೇಶ್ ತಿಳಿಸಿದರು.

'ಕೆಲವೊಂದು ಮಕ್ಕಳಿಗೆ ಆಹಾರದ್ದೇ ಸಮಸ್ಯೆ. ಜೀರ್ಣವಾಗಲ್ಲ. ಹಸಿವಾಗಲ್ಲ. ಇಂತಹವರಿಗೆ ಆಯುರ್ವೇದ ಚಿಕಿತ್ಸೆ ನೀಡಲಾಗುವುದು. ಡಯಟ್ ಪ್ಲ್ಯಾನ್, ನ್ಯೂಟ್ರಿಷಿಯನ್ ಪ್ಲ್ಯಾನ್ ಅನುಷ್ಠಾನಗೊಳಿಸಲಾಗುವುದು. ಕಷಾಯ, ಚೂರ್ಣ ತಿನ್ನಿಸಲಾಗುವುದು. ಪಂಚಕರ್ಮ ಚಿಕಿತ್ಸೆಯನ್ನು ನೀಡುತ್ತೇವೆ. ಹೊರಗೆ ದುಬಾರಿಯಾಗುವುದರಿಂದ ಪೋಷಕರಿಗೆ ನಾವೇ ತರಬೇತಿ ನೀಡುತ್ತೇವೆ. ಯೋಗವನ್ನು ಕಲಿಸಿಕೊಟ್ಟು ನಿತ್ಯವೂ ಮನೆಯಲ್ಲೇ ಮಾಡಿಸುವಂತೆ ಹೇಳುತ್ತೇವೆ' ಎಂದು ಅವರು ಹೇಳಿದರು.

# ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

## ಸಮಾಜ ವಿಜ್ಞಾನ: ಇತಿಹಾಸ

ಅಧ್ಯಾಯ-2

### ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

**8) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕುರಿತು ಬರೆಯಿರಿ**

ಉತ್ತರ:- (...ಹಿಂದಿನ ಸಂಚಿಕೆಯಿಂದ)

**ಈ ನೀತಿಯ ಪ್ರಕಾರ:** 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೇ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ನಾಗಪುರ ಮೊದಲಾದವು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗವರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು. ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಸಾಮಾನ್ಯ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ನಿಂತಿತು.

**ಬಹು ಆಯ್ಕೆ ಪ್ರಶ್ನೆಗಳು**

**1) 1839ರಲ್ಲಿ ಯಾರು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು?**

ಎ) ರಣಜಿತ್ ಸಿಂಗನು ಬಿ) ಮೂಲರಾಜ
ಸಿ) ಅನ್ವರುದ್ದೀನ ಡಿ) ಮೇಲಿನ ಯಾರೂ ಅಲ್ಲ

ಉತ್ತರ:-ಎ

**2) ____________ ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.**

ಎ) 1800 ಬಿ) 1809
ಸಿ) 1706 ಡಿ) 1850

ಉತ್ತರ:-ಬಿ

**3) ಪೇಶ್ವೆ ____________ನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ**

ಎ) ಎರಡನೇ ಬಾಜಿರಾಯ
ಬಿ) ಮೂರನೇ ಬಾಜಿರಾಯ
ಸಿ) ಶಂಭಾಜಿ ಡಿ) ಯಾರೂ ಅಲ್ಲ

ಉತ್ತರ:- ಎ

ಎಸ್ಸೆಸ್ಸೆಲ್ಸಿ ಗಣಿತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

**4) ಸಹಾಯಕ ಸೈನ್ಯ ಪದ್ಧತಿ ಕುರಿತ ಯಾವ ಹೇಳಿಕೆ ತಪ್ಪಾಗಿದೆ?**

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ

**ಉತ್ತರ ಸಂಕೇತ**

ಎ) 1, 2. 3 ಮಾತ್ರ ಬಿ) 2, 3, 4 ಮಾತ್ರ
ಸಿ) 1 ಮತ್ತು 2 ಮಾತ್ರ ಡಿ) ಯಾವುದೂ ತಪ್ಪಾಗಿಲ್ಲ

ಉತ್ತರ:- ಡಿ

**5) ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಯಾವುದು?**

ಎ) ಹೈದರಾಬಾದ್ ಸಂಸ್ಥಾನ ಬಿ) ಮೈಸೂರು
ಸಿ) ಝಾನ್ಸಿ ಡಿ) ಔಧ್

ಉತ್ತರ:- ಎ

**6) ಕೆಳಗಿನ ಯಾರು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಭಾರತದಲ್ಲಿ ಆರಂಭಿಸಿದನು?**

ಎ) ವೆಲ್ಲೆಸ್ಲಿ ಬಿ) ಲಾರ್ಡ್ ಮಿಂಟೊ
ಸಿ) ಡಾಲ್‌ಹೌಸಿ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- ಸಿ

**7) ಮರಾಠರಲ್ಲಿ ಅಪ್ಪಾಸಾಹೇಬ ಮತ್ತು ____________ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು.**

ಎ) ಮಲ್ಹಾರರಾವ್ ಬಿ) ಮೂಲರಾಜ
ಸಿ) ಚಟ್ಟಾರ್ ಸಿಂಗ್ ಅಟ್ಟಾರಿವಾಲ
ಡಿ) ಮೇಲಿನ ಯಾರೂ ಅಲ್ಲ

ಉತ್ತರ:- ಎ

**8) ಪೇಶ್ವೆಯು ಯಾವ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.**

ಎ) ಬೆಸ್ಸಿನ್ ಒಪ್ಪಂದ ಬಿ) ಲಾಹೋರ್ ಒಪ್ಪಂದ
ಸಿ) ಚಂಢಿಗರ್ ಒಪ್ಪಂದ ಡಿ) ಮುಂಬೈ ಒಪ್ಪಂದ

ಉತ್ತರ:- ಎ

**9) ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣರಾಯನು ಬಂದನಾದರೂ ಅವನನ್ನು ಯಾರು ಕೊಲೆ ಮಾಡಿದನು?**

ಎ) ರಘುನಾಥರಾವ್ ಬಿ) ಮಲ್ಹಾರ್ ರಾವ್
ಸಿ) 2ನೇ ಮಾಧವ್ ರಾವ್ ಡಿ) ಪ್ರತಾಪ್ ಸಿಂಹ

ಉತ್ತರ:- ಎ

**10) ರಣಜಿತ್ ಸಿಂಗನು ಎಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು?**

ಎ) ಲಾಹೋರ್ ಬಿ) ಚಂಡಿಗಢ
ಸಿ) ಕರಾಚಿ ಡಿ) ದೆಹಲಿ

ಉತ್ತರ:- ಎ

**ಹಿಂದಿನ ಪ್ರಶ್ನೆ ಪತ್ರಿಕೆಯಿಂದ**

**1) ಮೊದಲನೇ ಆಂಗ್ಲೋ ಮರಾಠ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ**

ಎ) ಬಸ್ಸೈನ್ ಒಪ್ಪಂದ ಬಿ) ಸಾಲ್ಬಾಯಿ ಒಪ್ಪಂದ
ಸಿ) ಅಲಹಾಬಾದ್ ಒಪ್ಪಂದ ಡಿ) ಲಾಹೋರ್ ಒಪ್ಪಂದ

ಉತ್ತರ:- ಬಿ **(2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)**

**2) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?**

(2020 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ:- ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳ ಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು.

**3) ವೆಲೆಸ್ಲಿಯು ಸಹಾಯಕ ಸೈನ್ಯಪದ್ಧತಿಯನ್ನು ಯಾಕೆ ಜಾರಿಗೆ ತಂದನು?**

(2023 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

ಉತ್ತರ:- ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಹಾಯಕ ಸೈನ್ಯಪದ್ದತಿಯನ್ನು ಜಾರಿಗೆ ತಂದನು.

## ಭೂಗೋಳಶಾಸ್ತ್ರ

**ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು**

**ಪಿಠೀಕೆ:-** ಭಾರತವು ಏಷ್ಯಾಖಂಡದ ದಕ್ಷಿಣ ಭಾಗದಲ್ಲಿರುವ ಪರ್ಯಾಯ ದ್ವೀಪವಾಗಿದೆ. ಇದನ್ನು 'ಇಂಡಿಯಾ' ಹಾಗೂ ಹಿಂದೂಸ್ಥಾನ ಎಂದು ಕರೆಯುತ್ತಾರೆ. ಇಂಡಿಯಾ ಎಂಬ ಹೆಸರು 'ಸಿಂಧೂ' ನದಿಯಿಂದ ಬಳಕೆಗೆ ಬಂದಿದೆ. 'ಭಾರತ' ಎಂಬ ಹೆಸರು ಭರತ ಎಂಬ ಪುರಾತನ ಚಕ್ರವರ್ತಿ ಹೆಸರಿನಿಂದ ಬಂದಿದೆ. ಭಾರತವು ಸಂಪೂರ್ಣವಾಗಿ ಉತ್ತರಾರ್ಧಗೋಳದಲ್ಲಿದೆ. ಭಾರತವು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿ ತ್ರಿಕೋನಾಕೃತಿಯಲ್ಲಿ ಹಿಂದೂ ಮಹಾಸಾಗರದಲ್ಲಿ ಚಾಚಿಕೊಂಡಿದೆ

**ಪ್ರಶ್ನೋತ್ತರ:-**

**1) ಭಾರತದ ವಿಸ್ತೀರ್ಣ ಎಷ್ಟಿದೆ?**

ಉತ್ತರ:- ಭಾರತವು 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿಗಳಷ್ಟು ವಿಸ್ತಾರವಾಗಿದೆ.

**2) ಭೂ ಕ್ಷೇತ್ರದ ದೃಷ್ಟಿಯಿಂದ ಇದು ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರವಾಗಿದೆ?**

ಉತ್ತರ:- ಏಳನೇ ದೊಡ್ಡ ರಾಷ್ಟ್ರವಾಗಿದೆ

(ಮುಂದುವರೆಯುವುದು)

# II PUC CHEMISTRY

*ELECTROCHEMISTRY*

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

**41. What is molar conductance?**

Ans:- The molar conductance $(\mu)$ of a solution is defined as the conductance due to all the ions present in a solution which contains one mole of the electrolyte.

**42. What is the unit of molar conductance?**

**Ans:-** The unit of molar conductance,

$$\mu = kV = \left(Sm^{-1}\right)\left(\frac{m^3}{mol}\right) = Sm^2/mol$$

**43. How is the molar conductance $(\mu)$ of a solution related to the molarity $(C')$?**

**Ans:-** The molar conductance $(\mu)$ of a solution related to the molarity $(C')$ as

$$\mu = \frac{k}{1000C'}$$

**44. Why is the alternating current used in the place of direct current in measuring the electrolytic conduction?**

**Ans:-** The alternating current is used in the place of direct current in measuring the electrolytic conduction because direct current results in the electrolysis of the electrolytic solution.

**45. A solution is placed in two different cells having cell constant 0.1 and 0.5 $cm^{-1}$ respectively. Which of the two will have the greater value of the specific conductance?**

Ans:- The specific conductance of both the cells will be same.

**46. State Kohlrausch's law.**

**Ans:-** ***Kohlrausch's law states that*** – At infinite dilution when the dissociation is complete, each ion of the electrolyte makes a definite contribution of its own towards the molar conductivity of the electrolyte and it is quite independent of the presence of the other ion of the electrolyte.

**47. Mention some important applications of the Kohlrausch's law.**

**Ans:-** The following are the important applications of the Kohlrausch's law –


(a) It is used in the calculation of Molar Conductance at infinite dilution for Weak Electrolytes.
(b) It is used in the calculation of degree of dissociation of Weak Electrolytes.

**48. Define electrochemical equivalent?**

**Ans:-** The electrochemical equivalent is defined as the mass of a substance deposited when one ampere current flows for one second.

The unit of electrochemical equivalent is gram per coulomb.

**49. Consider the following diagram in which an electrochemical cell is coupled to an electrolytic cell. What will be the polarity of electrodes 'A' and 'B' in the electrolytic cell?**




**Ans:-** In the electrolytic cells coupled with an electrochemical cell, electrode 'A' will have negative polarity since it is connected to copper plate in the electrochemical cell which has positive polarity. At the same time electrode 'B' will have positive polarity.

**50. Why is alternating current used for measuring resistance of an electrolytic solution?**

**Ans:-** Alternating current is used for measuring the resistance of an electrolytic solution because direct current (DC) will cause the electrolysis of the electrolyte. As a result, the concentration of the ions in solution will change.

**51. A galvanic cell has electrical potential of 1.1 V. If an opposing potential of 1.1 V is applied to this cell, what will happen to the cell reaction and current flowing through the cell?**

**Ans:-** The cell reaction will stop and no current will flow through the cell.

**52. How will the pH of bring (aq. NaCl solution) be affected when it is electrolysed?**


**Ans:-** The pH of aqueous NaCl solution (brine solution) is 7. Upon electrolysis, NaOH is formed as one of the products. Since it is a strong base, the pH of the solution will rise.

**53. Unlike dry cell, the mercury cell has a constant cell potential throughout its useful life. Why?**

**Ans:-** In the mercury cell, ions are not involved in the overall cell reaction. Therefore, it generates a constant cell potential of 1.35 V throughout. On the other hand, in a dry cell, ions participate in the overall cell reaction. As the concentration of the ions changes, the cell potential which is initially 1.25 V is also likely to change. It does not remain constant.

**54. What advantage do the fuel cells have over primary and secondary batteries?**

**Ans:-** Primary batteries contain a limited amount of reactants and are discharged when the reactants are consumed. Secondary batteries or cells can be recharged but the process takes a long time. Fuel cells work continuously as long the reactants (i.e. fuel) are supplied. *(Contd.....)*



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

# ತೋಟಗಾರಿಕೆ ಕೋರ್ಸ್‌ನ ವಿಶೇಷತೆಯೇನು?

- **ಮುಂದಿನ ದಿನಗಳಲ್ಲಿ ಬಿ.ಎಸ್ಸಿ (ತೋಟಗಾರಿಕೆ) ಕ್ಷೇತ್ರದಲ್ಲಿ ವೃತ್ತಿಯ ಅವಕಾಶಗಳೇನು? ಕರ್ನಾಟಕ ಸರ್ಕಾರದಲ್ಲಿನ ಅವಕಾಶಗಳೇನು?**

ಊರು, ಹೆಸರು ತಿಳಿಸಿಲ್ಲ.

ಬಿ.ಎಸ್ಸಿ (ತೋಟಗಾರಿಕೆ) ಕೋರ್ಸ್‌ಗಳಲ್ಲಿ ಅನೇಕ ಉಪಯುಕ್ತ ಮತ್ತು ಕುತೂಹಲಕಾರಿ ವಿಷಯಗಳನ್ನು ಕಲಿಸಲಾಗುತ್ತದೆ. ಉದಾಹರಣೆಗೆ,

ತೋಟಗಾರಿಕೆ, ಹೂವು, ಹಣ್ಣು ಮತ್ತು ತರಕಾರಿ ವಿಜ್ಞಾನ, ಪ್ಲಾಂಟೇಷನ್ ಬೆಳೆಗಳು, ತಳಿವಿಜ್ಞಾನ, ಜೇನು ಕೃಷಿ, ಸಾವಯವ ಕೃಷಿ, ಸಸ್ಯ ರೋಗವಿಜ್ಞಾನ, ತೋಟಗಾರಿಕಾ ವ್ಯವಹಾರ ನಿರ್ವಹಣೆ ಇತ್ಯಾದಿ ವಿಷಯಗಳಿರುತ್ತದೆ. ಆಸಕ್ತಿಯಿರುವ ವಿಷಯದಲ್ಲಿ, ಉನ್ನತ ಶಿಕ್ಷಣಕ್ಕಾಗಿ ಎಂ.ಎಸ್ಸಿ/ಪಿ.ಎಚ್‌ಡಿ ಮಾಡಬಹುದು.

ಬಿ.ಎಸ್ಸಿ (ತೋಟಗಾರಿಕೆ) ಪದವಿಯ ನಂತರ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ವೃತ್ತಿಯನ್ನು ಅರಸಬಹುದು. ಉದಾಹರಣೆಗೆ, ತೋಟಗಾರಿಕೆ ಅಸಿಸ್ಟೆಂಟ್, ಫಸ್ಟ್ ಕ್ಲಾಸ್ ಅಸಿಸ್ಟೆಂಟ್, ಸಹಾಯಕ ತೋಟಗಾರಿಕೆ ಅಧಿಕಾರಿ, ಕೃಷಿ ಅಧಿಕಾರಿ, ತೋಟಗಾರಿಕೆ ಅಧಿಕಾರಿ ಸೇರಿದಂತೆ ಹಲವು ಸರ್ಕಾರಿ ಹುದ್ದೆಗಳನ್ನು ಪಡೆಯಬಹುದು. ಖಾಸಗಿ ವಲಯದಲ್ಲಿ ನರ್ಸರಿ ಮ್ಯಾನೇಜರ್, ತೋಟಗಾರಿಕಾ ತಜ್ಞ, ತೋಟಗಾರಿಕಾ ವ್ಯವಸ್ಥಾಪಕ, ಲ್ಯಾಂಡ್‌ಸ್ಕೇಪ್ ಡಿಸೈನರ್, ಫಾರ್ಮ್ ಮ್ಯಾನೇಜರ್ ಮುಂತಾದ ವೃತ್ತಿಗಳನ್ನು ಅರಸಬಹುದು. ಇದಲ್ಲದೆ, ಈ ಕ್ಷೇತ್ರಕ್ಕೆ ಸಂಬಂಧಿಸಿದ ಸ್ವಯಂ-ಉದ್ಯೋಗವನ್ನೂ ಮಾಡಬಹುದು. ಮುಖ್ಯವಾಗಿ, ಈ ಕ್ಷೇತ್ರದಲ್ಲಿ ಅಭಿರುಚಿಯಿದ್ದರೆ, ವೃತ್ತಿಯೋಜನೆಯನ್ನು ಮಾಡಿ ಮುಂದುವರೆಯುವುದು ಸೂಕ್ತ.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://youtu.be/MHnPg_sp6E0

ಹೆಚ್ಚಿನ ಪ್ರಶ್ನೋತ್ತರಗಳಿಗೆ https://www.prajavani.net/education-career/education ಓದಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು


ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





# ಜನಪ್ರತಿನಿಧಿಗಳ ವಿರುದ್ಧದ ಪ್ರಕರಣ ತ್ವರಿತ ಇತ್ಯರ್ಥಕ್ಕೆ ಮುಂದಾದ 'ಸುಪ್ರೀಂ'

**ಸಂಸದರು** ಹಾಗೂ ಶಾಸಕರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ-ಪಡಿಸಬೇಕು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್ ಕೆಲವು ಸ್ವಾಗತಾರ್ಹ ಕ್ರಮಗಳನ್ನು ಕೈಗೊಂಡಿದೆ. ಶಾಸಕರು ಹಾಗೂ ಸಂಸದರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ಮೇಲ್ವಿಚಾರಣೆಗೆ ವಿಶೇಷ ನ್ಯಾಯಪೀಠ ರಚಿಸಬೇಕು ಎಂದು ಹೈಕೋರ್ಟ್‌ಗಳ ಮುಖ್ಯ ನ್ಯಾಯ-ಮೂರ್ತಿಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಆರೋಪ ಸಾಬೀತಾದಲ್ಲಿ ಮರಣದಂಡನೆ, ಜೀವಾವಧಿ ಶಿಕ್ಷೆ, ಐದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಜೈಲು ಶಿಕ್ಷೆಗೆ ಗುರಿಯಾಗಬಹುದಾದ ಪ್ರಕರಣಗಳ ತ್ವರಿತ ವಿಚಾರಣೆಗೆ ಆದ್ಯತೆ ನೀಡಬೇಕು ಎಂದು ಕೋರ್ಟ್ ಹೇಳಿದೆ. ಕೆಲವು ಜನಪ್ರತಿನಿಧಿಗಳ ವಿರುದ್ಧ ಅತ್ಯಾಚಾರ, ಕೊಲೆಯಂತಹ ಗಂಭೀರ ಸ್ವರೂಪದ ಆರೋಪಗಳು ಕೂಡ ಇವೆ. ಶಾಸಕರು ಮತ್ತು ಸಂಸದರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳು ವರ್ಷಗಳಿಂದ ವಿಚಾರಣೆಯ ಹಂತ ದಲ್ಲಿಯೇ ಇರುವುದಕ್ಕೆ ಕಾರಣ ನ್ಯಾಯದಾನ ಪ್ರಕ್ರಿಯೆಯಲ್ಲಿನ ನಿಧಾನಗತಿ ಮಾತ್ರವೇ ಅಲ್ಲ. ಪ್ರಕರಣಗಳ ವಿಚಾರಣೆಯು ನಿಧಾನಗತಿಗೆ ತಿರುಗುವಂತೆ ಮಾಡಲು, ನ್ಯಾಯದಾನದ ಉದ್ದೇಶವೇ ವಿಫಲವಾಗುವಂತೆ ಮಾಡಲು ಅಗತ್ಯವಿರುವ ಹಲವು ಅಸ್ತ್ರಗಳು ರಾಜಕಾರಣಿಗಳ ಬತ್ತಳಿಕೆಯಲ್ಲಿ ಇರುತ್ತವೆ.



ರಾಜಕಾರಣಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳು ತ್ವರಿತವಾಗಿ ಇತ್ಯರ್ಥಗೊಂಡಾಗ ದೇಶಕ್ಕೆ ಬಹಳ ದೊಡ್ಡ ನೆರವು ಸಿಕ್ಕಂತಾಗುತ್ತದೆ

2022ರ ನವೆಂಬರ್‌ವರೆಗಿನ ಮಾಹಿತಿ ಪ್ರಕಾರ, ರಾಜಕಾರಣಿಗಳ ವಿರುದ್ಧ ದಾಖಲಾಗಿರುವ, ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ 5,175. ಈ ಪ್ರಕರಣಗಳ ಪೈಕಿ 2,166 ಪ್ರಕರಣಗಳು ಐದು ವರ್ಷಗಳಿಗಿಂತ ಹಳೆಯವು. ಅತಿಹೆಚ್ಚಿನ ಪ್ರಕರಣಗಳು ಬಾಕಿ ಇರುವುದು ಉತ್ತರಪ್ರದೇಶದಲ್ಲಿ (1,377). ಎರಡನೆಯ ಹಾಗೂ ಮೂರನೆಯ ಸ್ಥಾನದಲ್ಲಿ ಇರುವ ರಾಜ್ಯಗಳು ಕ್ರಮವಾಗಿ ಬಿಹಾರ (546) ಮತ್ತು ಮಹಾರಾಷ್ಟ್ರ (482). ಸುಪ್ರೀಂ ಕೋರ್ಟ್ ಇಂತಹ ಪ್ರಕರಣಗಳ ತ್ವರಿತ ವಿಚಾರಣೆಗೆ ಮಾರ್ಗಸೂಚಿ ಹೊರಡಿಸುವ ಸಂದರ್ಭದಲ್ಲಿ ಮನನೀಯವಾದ ಮಾತೊಂದನ್ನು ಹೇಳಿದೆ. ಸಂಸದೀಯ ಪ್ರಜಾತಂತ್ರವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದಾದರೆ, ಕ್ಷೇತ್ರದ ಜನರು ತಮ್ಮ ರಾಜಕೀಯ ಪ್ರತಿನಿಧಿಯಲ್ಲಿ ವಿಶ್ವಾಸ ಹೊಂದಿರಬೇಕಾಗಿರುವುದು ಅತ್ಯಗತ್ಯ ಎಂದು ಕೋರ್ಟ್ ಹೇಳಿದೆ. ಶಾಸಕರು ಮತ್ತು ಸಂಸದರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸರ್ವ ಪ್ರಯತ್ನಗಳನ್ನೂ ಆದ್ಯತೆಯ ಮೇರೆಗೆ ಮಾಡಬೇಕು, ಈ ಪ್ರಕರಣಗಳು ನಮ್ಮ ರಾಜಕೀಯ ಪ್ರಜಾತಂತ್ರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವಂಥವು ಎಂದು ಕೂಡ ಕೋರ್ಟ್ ಹೇಳಿದೆ. ಕ್ರಿಮಿನಲ್ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ, ವಿಶೇಷ ನ್ಯಾಯಪೀಠದ ರಚನೆಗೆ, ಪ್ರಕರಣಗಳು ಕಾಲಕಾಲಕ್ಕೆ ವಿಚಾರಣೆಗೆ ಬರುವಂತೆ ಆಗಲು ಹಾಗೂ ಅವುಗಳ ವಿಚಾರಣೆಯು ಯಾವುದೇ ಅಡ್ಡಿ ಇಲ್ಲದೆ ನಡೆಯುವಂತೆ ಆಗಲು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ದಾಖಲು ಮಾಡಿಕೊಳ್ಳಬೇಕು ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ. ತೀರಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಚಾರಣೆಯನ್ನು ಮುಂದಕ್ಕೆ ಹಾಕಬೇಕು. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಗಳಿಗೆ ತಮ್ಮ ವ್ಯಾಪ್ತಿಯಲ್ಲಿನ ಇಂತಹ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ನಿರ್ದೇಶನ ನೀಡಬೇಕು ಎಂದೂ ಸುಪ್ರೀಂ ಕೋರ್ಟ್ ಸೂಚನೆ ನೀಡಿರುವುದು ಸೂಕ್ತ ನಡೆ.

ಸುಪ್ರೀಂ ಕೋರ್ಟ್ ಹೊರಡಿಸಿರುವ ಮಾರ್ಗಸೂಚಿಯು ಅನುಷ್ಠಾನಕ್ಕೆ ಬಂದು, ರಾಜಕಾರಣಿಗಳು ಎಷ್ಟೇ ದೊಡ್ಡವರಿರಲಿ ಅಂಥವರ ವಿರುದ್ಧದ ಕ್ರಿಮಿನಲ್ ಪ್ರಕರಣಗಳು ತ್ವರಿತವಾಗಿ ಇತ್ಯರ್ಥಗೊಂಡಾಗ ದೇಶಕ್ಕೆ ಬಹಳ ದೊಡ್ಡ ನೆರವು ಸಿಕ್ಕಂತಾಗುತ್ತದೆ. ಇಂತಹ ಕ್ರಮವೊಂದನ್ನು ಕೋರ್ಟ್ ತೆಗೆದುಕೊಂಡಿರುವುದು ಇದೇ ಮೊದಲೇನೂ ಅಲ್ಲ. 2017ರಲ್ಲಿ ರಾಜಕಾರಣಿಗಳ ವಿರುದ್ಧದ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ತ್ವರಿತಗತಿಯ ನ್ಯಾಯಾಲಯಗಳ ರಚನೆಗೆ ಆದೇಶ ನೀಡಿತ್ತು. ಇಂತಹ 12 ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಸರ್ಕಾರವು ಆಗ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. 2020ರಲ್ಲಿ ಸುಪ್ರೀಂ ಕೋರ್ಟ್, ಆಗ ವಿಚಾರಣೆಯ ಹಂತದಲ್ಲಿ ಇದ್ದ ಅಂದಾಜು ನಾಲ್ಕು ಸಾವಿರ ಪ್ರಕರಣಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸಬೇಕು ಎಂದು ಸೂಚನೆ ನೀಡಿತ್ತು. ಆದರೆ ಜನಪ್ರತಿನಿಧಿಗಳ ವಿರುದ್ಧದ ಅಪರಾಧಗಳು ಸಾಬೀತಾದ ನಿದರ್ಶನಗಳು ಕಡಿಮೆ. ಸುಪ್ರೀಂ ಕೋರ್ಟ್ ಈಗ ತಾನು ರೂಪಿಸಿರುವ ಮಾರ್ಗಸೂಚಿಗಳು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳಬೇಕು.

## ದಿನದ ಟ್ವೀಟ್

### ಅಗತ್ಯಗಳಿಗೆ ಆದ್ಯತೆ ಇರಲಿ



**ಎಂತಹ ದುಃಖಕರ ದಿನ. ನೂಕುನುಗ್ಗಲಿನಲ್ಲಿ ಕಷ್ಟಪಟ್ಟು ರೈಲು ಹತ್ತುವಾಗ ವ್ಯಕ್ತಿಯೊಬ್ಬ ಸಾವಿಗೀಡಾಗುವುದು ವಾಸ್ತವ ಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದನ್ನು ತಿಳಿಸುತ್ತದೆ. ಆಡಳಿತಗಾರರು 80 ಕೋಟಿ ಭಾರತೀಯರ ಸ್ಥಿತಿಗತಿಯನ್ನು ಅರಿಯಬೇಕು ಮತ್ತು ಕಾಯ್ದಿರಿಸದ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸುವುದೂ ಸೇರಿದಂತೆ ಅವರ ಅಗತ್ಯಗಳಿಗೆ ಆದ್ಯತೆ ನೀಡಬೇಕು. ಈ ಪ್ರಕರಣಕ್ಕೆ ಯಾರು ಹೊಣೆ ಅಶ್ವಿನಿ ವೈಷ್ಣವ್ ಅವರೇ?**

(ಗುಜರಾತ್‌ನ ಸೂರತ್ ರೈಲು ನಿಲ್ದಾಣದ ಜನಜಂಗುಳಿಯಲ್ಲಿ ಸಿಲುಕಿ ವ್ಯಕ್ತಿಯೊಬ್ಬ ಮೃತಪಟ್ಟಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

**ಮಾಣಿಕಂ ಟ್ಯಾಗೋರ್,** ಸಂಸತ್ ಸದಸ್ಯ, ಕಾಂಗ್ರೆಸ್

## ಕಿಡಿನುಡಿ



**ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ವಿಜಯೇಂದ್ರ ನೇಮಕದ ಕುರಿತು ವಂಶಪಾರಂಪರ್ಯ ಆಡಳಿತದ ಆರೋಪ ಮಾಡುವ ಕಾಂಗ್ರೆಸ್‌ಗೆ, ವಂಶಪಾರಂಪರ್ಯ-ದಿಂದ ಹೊರಬರಲಾಗದೇ ಮೂರು ವರ್ಷ ತಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನು ನೇಮಕ ಮಾಡಲು ಸಾಧ್ಯವಾಗಿರಲಿಲ್ಲ. ಈಗ ಖರ್ಗೆ ಅವರನ್ನು ನೇಮಕ ಮಾಡಿದ್ದರೂ ಅವರಿಗೆ ಯಾವುದೇ ಅಧಿಕಾರ ಇಲ್ಲ.**

**ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

## 25 ವರ್ಷಗಳ ಹಿಂದೆ

ಶುಕ್ರವಾರ, 13-11-1998

**• ಜನತಾದಳ ಬಿಕ್ಕಟ್ಟು ಉಲ್ಬಣ ಇಂದು ಬಲ ಪರೀಕ್ಷೆಗೆ ಸಜ್ಜು**

**ಬೆಂಗಳೂರು, ನ. 12–** ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ನಾಯಕತ್ವ ಬದಲಾವಣೆ ಆಗಲೇಬೇಕೆಂದು ಭಿನ್ನರು ಹಾಗೂ ಆಗಬಾರದು ಎಂದು ನಿಷ್ಠರು ಬಿಗಿಪಟ್ಟು ಹಿಡಿದಿರುವುದರಿಂದ ಆಡಳಿತ ಜನತಾದಳದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಪರಾಕಾಷ್ಠೆಗೆ ತಲುಪಿದ್ದು, ನಾಳೆ ನಡೆಯಲಿರುವ ದಳ ಶಾಸಕಾಂಗ ಪಕ್ಷದ ಸಭೆಯ ಕಲಾಪ ತೀವ್ರ ಕುತೂಹಲ ಕೆರಳಿಸಿದೆ.

ಪಟೇಲ್ ನೇತೃತ್ವದ ಸಂಪುಟದ ಬಹುತೇಕ ಸಚಿವರು ಮತ್ತು ಅವರ ಬೆಂಬಲಿಗರು ಇಂದು ದೊಡ್ಡ ಗುಂಪಿನಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿ, ನಾಯಕತ್ವ ಬದಲಾವಣೆಗೆ ಪಟ್ಟು ಹಿಡಿಯಬಾರದು ಎಂದು ಮನವಿ ಮಾಡಿದರು.

**• ಹಿಂಸಾಚಾರಕ್ಕೆ ತಿರುಗಿದ ಹುಬ್ಬಳ್ಳಿ ಬಂದ್**

**ಹುಬ್ಬಳ್ಳಿ, ನ. 12 –** ಮೂರುಸಾವಿರ ಮಠದ ಉತ್ತರಾಧಿಕಾರ ವಿವಾದದ ಹಿನ್ನೆಲೆಯಲ್ಲಿ ಇಂದು ಕರೆ ನೀಡಲಾಗಿದ್ದ ಬಂದ್ ಆಚರಣೆ ವೇಳೆಯಲ್ಲಿ ನಗರದ ವಿವಿಧ ಭಾಗಗಳಲ್ಲಿ ಹಿಂಸಾಚಾರ ನಡೆದಿದ್ದು, ಕಲ್ಲು ತೂರಾಟದಲ್ಲಿ 15ಕ್ಕೂ ಹೆಚ್ಚು ಬಸ್‌ಗಳಿಗೆ ಹಾನಿಯಾಗಿದೆ. ಮೆರವಣಿಗೆ ಕಾಲದಲ್ಲಿ ಎರಡು ಕಡೆ ಪೊಲೀಸರು ಲಾಠಿ ಪ್ರಹಾರ ಮಾಡಿದರು.

ನಿಷೇಧಾಜ್ಞೆ ಉಲ್ಲಂಘಿಸಿ ಸಹಸ್ರಾರು ಮಂದಿ ಬೃಹತ್ ಮೆರವಣಿಗೆ ನಡೆಸಿದರು. ಮೂರುಸಾವಿರ ಮಠದ ಬಳಿ ಮೆರವಣಿಗೆಕಾರರು ಕಲ್ಲೆಸೆದಾಗ ಪೊಲೀಸರು ಲಾಠಿ ಬೀಸಿ ಅವರನ್ನು ಚದುರಿಸಿದರು. ಲಾಠಿ ಪ್ರಹಾರ, ಕಲ್ಲೆಸೆತದಲ್ಲಿ ಕೆಲವರಿಗೆ ಗಾಯಗಳಾಗಿವೆ.

## 50 ವರ್ಷಗಳ ಹಿಂದೆ

ಮಂಗಳವಾರ, 13-11-1973

**• ಬೆಲೆ ಏರಿಕೆ ನಿಯಂತ್ರಣಕ್ಕೆ ಸರ್ಕಾರದ ದೃಢ ಕ್ರಮ: ಚವಾಣ್ ಭರವಸೆ**

**ನವದೆಹಲಿ, ನ. 13–** ಬೆಲೆಗಳು ಮತ್ತಷ್ಟು ಏರದಂತೆ ನೋಡಿಕೊಳ್ಳುವುದೇ ಈಗ ಸರ್ಕಾರದ ಮುಖ್ಯೋದ್ದೇಶ ಎಂದು ಕೇಂದ್ರ ಹಣಕಾಸು ಮಂತ್ರಿ ವೈ.ಬಿ.ಚವಾಣ್ ಅವರು ಇಂದು ಲೋಕಸಭೆಗೆ ತಿಳಿಸಿದರು.

ಮುಂಬರುವ ತಿಂಗಳುಗಳಲ್ಲಿ ಬೆಲೆಗಳು ತೀವ್ರ ರೀತಿ ಇಳಿಯುವುದಾಗಿ ತಾವು ಭವಿಷ್ಯ ನುಡಿಯುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು.

ಬೆಲೆಗಳ ಏರಿಕೆಯನ್ನು ತಡೆಗಟ್ಟುವುದರಲ್ಲಿ ಸರ್ಕಾರ ವಿಫಲಗೊಂಡ ಬಗ್ಗೆ ಎಸ್.ಎಂ.ಬ್ಯಾನರ್ಜಿ (ಸಿಪಿಐ) ಅವರು ನಿಲುವಳಿ ಸೂಚನೆಯನ್ನು ಮಂಡಿಸಿದ್ದರು.

**• ನರಸಿಂಹಸ್ವಾಮಿ ಮತ್ತು ನಾಲ್ವರಿಗೆ ಸಾಹಿತ್ಯ ಪ್ರಶಸ್ತಿ**

**ಬೆಂಗಳೂರು, ನ. 12–** ಈ ಬಾರಿಯ ಸಾಹಿತ್ಯ ಪ್ರಶಸ್ತಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಐದು ಮಂದಿ ಸಾಹಿತಿಗಳನ್ನು ಆಯ್ಕೆ ಮಾಡಿದೆ.

ಎಂ.ವಿ.ಸೀತಾರಾಮಯ್ಯ, ಕೆ.ಎಸ್. ನರಸಿಂಹಸ್ವಾಮಿ, ಕೃಷ್ಣಮೂರ್ತಿ ಪುರಾಣಿಕ, ಡಾ. ಕೆ.ಕೃಷ್ಣಮೂರ್ತಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ದೇ.ಜವರೇಗೌಡ ಅವರಿಗೆ ಪ್ರಶಸ್ತಿ ನೀಡಲಾಗುವುದು.

---

ವಿಶ್ವಕಪ್ ಕ್ರಿಕೆಟ್: ಭಾರತದ ಜಯದ ಓಟದಲ್ಲಿ ಇದೆ ದ್ರಾವಿಡ್ ಕಾರ್ಯದಕ್ಷತೆ

# ಸವಾಲು ಮೆಟ್ಟಿದ 'ಕೂಲ್ ಕೋಚ್'



ವಿಶ್ಲೇಷಣೆ

ಗಿರೀಶ ದೊಡ್ಡಮನಿ

**ಭಾರತ** ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಯೆಂದರೆ ಆಕರ್ಷಕ ಸಿಂಹಾಸನವೂ ಹೌದು, ಮುಳ್ಳುಗಳ ಗದ್ದುಗೆಯೂ ಹೌದು.

ಈ ಹುದ್ದೆಗೇರುವವರಿಗೆ ಹಣ ಮತ್ತು ಹೆಸರು ಸಹಜವಾಗಿಯೇ ಒಲಿಯುತ್ತವೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಅಪಕೀರ್ತಿ, ವೈಫಲ್ಯಗಳು ಮತ್ತು ವಿವಾದಗಳ ಮುಳ್ಳುಗಳು ಇರಿಯುತ್ತವೆ. ಅಂತಹ ಹಲವಾರು ನಿದರ್ಶನಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ.

ಆದರೆ ರಾಹುಲ್ ಶರದ್ ದ್ರಾವಿಡ್ ಎಂಬ 'ಗಟ್ಟಿ ಗೋಡೆ'ಯ ಮುಂದೆ ಈ ಮುಳ್ಳುಗಳು ಮೊನಚು ಕಳೆದುಕೊಂಡಿವೆ. ಭಾರತ ತಂಡದ ಮುಖ್ಯ ಕೋಚ್ ಆಗಿ ಎರಡು ವರ್ಷಗಳಿಂದ ಬೆಂಗಳೂರಿನ ದ್ರಾವಿಡ್ ನೀಡುತ್ತಿರುವ ಕಾಣಿಕೆ ಅಸಾಧಾರಣವಾದದ್ದು. ತಮ್ಮ ಅದ್ಭುತ ಬ್ಯಾಟಿಂಗ್ ಮೂಲಕ 'ಗೋಡೆ' ಎಂದು ಖ್ಯಾತಿ ಗಳಿಸಿದ್ದ ರಾಹುಲ್ ತಮ್ಮ ಶಾಂತಸ್ವಭಾವದ ಕಾರ್ಯವೈಖರಿಯಿಂದಾಗಿ 'ಕೂಲ್ ಕೋಚ್' ಆಗಿದ್ದಾರೆ.

ಈ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿರುವ ತಂಡದ ಗುಣಗಾನ ಎಲ್ಲೆಡೆಯೂ ನಡೆಯುತ್ತಿದೆ. ರೋಹಿತ್ ಬ್ಯಾಟಿಂಗ್, ಕೆ.ಎಲ್. ರಾಹುಲ್ ವಿಕೆಟ್‌ಕೀಪಿಂಗ್, ವಿರಾಟ್ ಕೊಹ್ಲಿ ಶತಕ, ಮೊಹಮ್ಮದ್ ಶಮಿಯ ಸ್ವಿಂಗ್, ಜಸ್‌ಪ್ರೀತ್ ಬೂಮ್ರಾ ಅವರ ಯಾರ್ಕರ್, ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಸ್ಪಿನ್ ಮೋಡಿ ಚರ್ಚೆಯ ಕೇಂದ್ರಬಿಂದುವಾಗಿವೆ. ಆದರೆ ಇವೆಲ್ಲದರ ಹಿಂದೆ ದ್ರಾವಿಡ್ ಅವರ 'ಸದ್ದಿಲ್ಲದ ಕಾರ್ಯದಕ್ಷತೆ' ಇದೆ.

2021ರ ನವೆಂಬರ್‌ನಲ್ಲಿ ಭಾರತ ತಂಡಕ್ಕೆ ಕೋಚ್ ಆಗಿ ದ್ರಾವಿಡ್ ಆಯ್ಕೆಯಾದಾಗ ಬಹಳಷ್ಟು ಜನರ ಹುಬ್ಬೇರಿದ್ದವು. ಇವರಿಂದ ಸಾಧ್ಯವೇ ಎಂಬ ಪ್ರಶ್ನೆಗಳೂ ಕೇಳಿಬಂದಿದ್ದವು.

ಏಕೆಂದರೆ, ಭಾರತ ತಂಡದಲ್ಲಿ ಮುಖ್ಯ ಕೋಚ್ ಆದವರಿಗೆ ಎದುರಾಗುವ ಸವಾಲುಗಳು ವಿಭಿನ್ನ. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕೋಟಿ ಕೋಟಿ ಮೌಲ್ಯ ಪಡೆದ ಹಾಗೂ ತಾರಾವರ್ಚಸ್ಸು ಗಳಿಸಿ ರಾಷ್ಟ್ರೀಯ ಬಳಗಕ್ಕೆ ಬಂದಿರುವ ಆಟಗಾರರಿಗೆ 'ತರಬೇತಿ' ನೀಡುವುದು ಸುಲಭವಲ್ಲ. ಅದಕ್ಕೆ ಅವರಿಗಿಂತಲೂ ದೊಡ್ಡ ತಾರೆಯಾಗಿದ್ದರೆ ಮಾತ್ರ ಸಾಧ್ಯ. ಈ ವಿಷಯದಲ್ಲಿ ವಿಶ್ವ ಕ್ರಿಕೆಟ್ ದಿಗ್ಗಜರಲ್ಲಿ ಒಬ್ಬರಾಗಿರುವ ದ್ರಾವಿಡ್ ಬಹುತೇಕ ಯಶಸ್ಸು ಸಾಧಿಸಿದ್ದಾರೆ.

ದ್ರಾವಿಡ್ ಮುಖ್ಯ ಕೋಚ್ ಆದ ಸಂದರ್ಭದಲ್ಲಿ ಭಾರತದ ಕ್ರಿಕೆಟ್‌ನಲ್ಲಿ ಎಲ್ಲವೂ ಸರಿಯಿರಲಿಲ್ಲ. ಆಗಷ್ಟೇ ಕೋವಿಡ್ ಹೊಡೆತದಿಂದ ಜಗತ್ತು ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಕ್ರಿಕೆಟ್‌ನಲ್ಲಿಯೂ ಹಲವು ಹೊಸ ನಿಯಮಗಳು ಬಂದಿದ್ದವು. ಪ್ರಮುಖ ಬ್ಯಾಟರ್ ವಿರಾಟ್ ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸುತ್ತಿದ್ದರು. ಟಿ20 ನಾಯಕತ್ವಕ್ಕೆ ವಿದಾಯ ಘೋಷಿಸಿದ್ದ ವಿರಾಟ್ ಅವರನ್ನು ಏಕದಿನ ಕ್ರಿಕೆಟ್ ತಂಡದ ನಾಯಕತ್ವದಿಂದ ಬಿಸಿಸಿಐ ಕೆಳಗಿಳಿಸಿತ್ತು. ಇದು ವಿರಾಟ್ ಮತ್ತು ಬಿಸಿಸಿಐ ನಡುವಣ ಮುಸುಕಿನ ಗುದ್ದಾಟಕ್ಕೂ ಕಾರಣವಾಗಿತ್ತು. 2022ರ ಜನವರಿಯಲ್ಲಿ ಅವರು ಟೆಸ್ಟ್ ಕ್ರಿಕೆಟ್ ನಾಯಕತ್ವಕ್ಕೆ ವಿದಾಯ ಹೇಳಿದ್ದರು. ಈ ಬೆಳವಣಿಗೆಯ ನಡುವೆ ನಾಯಕತ್ವ ವಹಿಸಿಕೊಂಡಿದ್ದ ರೋಹಿತ್ ಫಿಟ್‌ನೆಸ್ ಸಮಸ್ಯೆಯಿಂದ ಹೊರಬರುವ ಪ್ರಯತ್ನದಲ್ಲಿದ್ದರು.

ಇನ್ನೊಂದೆಡೆ, 19 ವರ್ಷದೊಳಗಿನವರ ತಂಡಕ್ಕೆ ದ್ರಾವಿಡ್ ಕೋಚ್ ಆಗಿದ್ದ ಸಂದರ್ಭದಲ್ಲಿಯೇ ಬೆಳೆದು ನಿಂತಿದ್ದ ಯುವ ಆಟಗಾರರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ಹಾತೊರೆಯುತ್ತಿದ್ದರು. ಅನುಭವಿ ಆಟಗಾರರ ಪ್ರದರ್ಶನ ಮಟ್ಟವನ್ನು ಹೆಚ್ಚಿಸುವುದು ಮತ್ತು ಯುವಪ್ರತಿಭೆಗಳಿಗೆ ಅವಕಾಶ ನೀಡುವ ಸವಾಲುಗಳಿದ್ದವು. ದ್ರಾವಿಡ್ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರು.

ತಾವು ಆಡುವ ದಿನಗಳಿಂದಲೂ ಫಿಟ್‌ನೆಸ್‌ಗೆ ಹೆಚ್ಚು ಮಹತ್ವ ಕೊಟ್ಟವರು ಅವರು. ಅಲ್ಲದೆ, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದ ಅನುಭವಿ. ಕೋಚ್ ಆದ ನಂತರ ತಮ್ಮ ತಂಡದವರ ಫಿಟ್‌ನೆಸ್‌ಗೆ ಆದ್ಯತೆ ಕೊಟ್ಟರು. ಅದಕ್ಕಾಗಿ ಕಾರ್ಯಭಾರ ನಿರ್ವಹಣೆಗೆ ಪ್ರಾಶಸ್ತ್ಯ ಕೊಟ್ಟರು. ವರ್ಷವಿಡೀ ಮೂರು ಮಾದರಿಗಳಲ್ಲಿಯೂ ನಡೆಯುವ ಒಂದಿಲ್ಲೊಂದು ಸರಣಿ ಮತ್ತು ಪ್ರವಾಸಗಳ ಜೊತೆಗೆ ಐಪಿಎಲ್ ಟೂರ್ನಿಯಲ್ಲಿ ಆಡುವ ಆಕರ್ಷಣೆ. ಇದರಿಂದಾಗಿ ಪ್ರಮುಖ ಆಟಗಾರರಿಗೆ ಗಾಯದ ಸಮಸ್ಯೆ ವಿಪರೀತವಾಗಿತ್ತು. ಆದ್ದರಿಂದ ವಿಶ್ರಾಂತಿಯ ಅವಧಿಗೆ ಆದ್ಯತೆ ನೀಡಿದರು. ತಾವೂ ಕೆಲವು ಸರಣಿಗಳಿಂದ ವಿರಾಮ ತೆಗೆದುಕೊಂಡರು. ಅವರ ಅನುಪಸ್ಥಿತಿಯಲ್ಲಿ ತಂಡಕ್ಕೆ ವಿವಿಎಸ್ ಲಕ್ಷ್ಮಣ್ ಮಾರ್ಗದರ್ಶಕರಾಗಿ ತೆರಳಿದರು.

ರೋಹಿತ್, ವಿರಾಟ್, ಜಡೇಜ ಅವರಂತಹ ಸೀನಿಯರ್ ಆಟಗಾರರು ವಿರಾಮ ತೆಗೆದುಕೊಂಡಾಗ ಹೊಸ ಹುಡುಗರಿಗೆ ಅವಕಾಶ ಕೊಡುವ ಪ್ರಯೋಗಗಳಿಗೆ ದ್ರಾವಿಡ್ ಕೈಹಾಕಿದರು. ಇದರ ಫಲವಾಗಿ ತಂಡವು ಬರೀ ಹತ್ತು ತಿಂಗಳ ಅವಧಿಯಲ್ಲಿ ಎಂಟು ನಾಯಕರನ್ನು ಕಾಣಬೇಕಾಯಿತು. ಅವರಲ್ಲಿ ಕೆ.ಎಲ್. ರಾಹುಲ್, ಶಿಖರ್ ಧವನ್, ರಿಷಭ್ ಪಂತ್, ದಿನೇಶ್ ಕಾರ್ತಿಕ್, ಹಾರ್ದಿಕ್ ಪಾಂಡ್ಯ ಮತ್ತು ಜಸ್‌ಪ್ರೀತ್ ಬೂಮ್ರಾ ಅವರಿಗೂ ತಮ್ಮ ನಾಯಕತ್ವ ಗುಣ ತೋರುವ ಅವಕಾಶ ದೊರೆಯಿತು. ರೋಹಿತ್ ನಂತರ ತಂಡದ ಸಾರಥ್ಯ ವಹಿಸುವವರಿಗಾಗಿ ಹುಡುಕಾಟದ ಭಾಗವೂ ಈ ಪ್ರಯೋಗವಾಗಿತ್ತು.



ಈ ಸಂದರ್ಭದಲ್ಲಿ ರಿಷಭ್ ಅಪಘಾತಕ್ಕೆ ತುತ್ತಾಗಿ ತಂಡದಿಂದ ಹೊರಬಿದ್ದಾಗ ವಿಕೆಟ್ ಕೀಪರ್ ಯಾರು ಎಂಬ ಪ್ರಶ್ನೆ ಮೂಡಿತು. ರಾಹುಲ್ ಕೂಡ ಐಪಿಎಲ್ ಸಂದರ್ಭದಲ್ಲಿ ಗಾಯಗೊಂಡು ಶಸ್ತ್ರಚಿಕಿತ್ಸೆಗೆ ತೆರಳಿದರು. ಇನ್ನೊಂದೆಡೆ ವೇಗಿ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಬ್ಯಾಟರ್ ಶ್ರೇಯಸ್ ಅಯ್ಯರ್ ಕೂಡ ಗಾಯಕ್ಕೆ ತುತ್ತಾಗಿ ದೀರ್ಘಕಾಲದವರೆಗೆ ಹೊರಗುಳಿದರು. ಹೋದ ವರ್ಷ ಟಿ20 ವಿಶ್ವಕಪ್ ಮತ್ತು ವಿಶ್ವ ಟೆಸ್ಟ್ ಫೈನಲ್ ಸೋಲುಗಳೂ ಕಾಡಿದವು. ಆಗ ತೂರಿಬಂದ ಟೀಕೆಗಳನ್ನು 'ವೆಲ್ ಲೆಫ್ಟ್' (ಆಫ್‌ಸ್ಟಂಪ್ ಹೊರಗಿನ ಸ್ವಿಂಗ್ ಎಸೆತಗಳನ್ನು ತಡವದೇ ಬಿಡುವ ತಂತ್ರದಲ್ಲಿ ದ್ರಾವಿಡ್ ನಿಸ್ಸೀಮರಾಗಿದ್ದರು) ಮಾಡಿದರು.

ಇದರ ನಡುವೆ ವಿಕೆಟ್‌ಕೀಪರ್ ಇಶಾನ್ ಕಿಶನ್ ಸಿದ್ಧವಾದರು. ಆರಂಭಿಕ ಬ್ಯಾಟರ್ ಆಗಿ ಶುಭಮನ್ ಗಿಲ್ ಮಿಂಚತೊಡಗಿದರು. ವೇಗಿ ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಸ್ಪಿನ್ನರ್ ಕುಲದೀಪ್ ಯಾದವ್ ತಮಗೆ ಸಿಕ್ಕ ಅವಕಾಶಗಳಲ್ಲಿ ಕೌಶಲ ಮೆರೆದರು. ಈ ವಿಶ್ವಕಪ್ ಟೂರ್ನಿ ಆರಂಭವಾಗುವ ಒಂದು ತಿಂಗಳು ಮುನ್ನವೂ ರೋಹಿತ್ ಲಯಕ್ಕೆ ಮರಳಿರಲಿಲ್ಲ. ಇದು ಚಿಂತೆಯ ವಿಷಯವಾಗಿತ್ತು. ರಾಹುಲ್, ಶಮಿ, ಬೂಮ್ರಾ ಮತ್ತು ಶ್ರೇಯಸ್ ಫಿಟ್‌ನೆಸ್ ಸಾಬೀತುಪಡಿಸುವ ಪ್ರಯತ್ನದಲ್ಲಿದ್ದರು. ಆದರೆ ದ್ರಾವಿಡ್ ಅವರೆಲ್ಲರ ಮೇಲೂ ವಿಶ್ವಾಸವಿಟ್ಟರು. ಬಲಿಷ್ಠ ತಂಡ ಕಟ್ಟಿದರು.

ಅದರ ಫಲವಾಗಿ ಇದೀಗ ರೋಹಿತ್ ಬಳಗ ಯಾರ ಮುಂದೂ ತಲೆಬಾಗದೆ ಮುನ್ನುಗ್ಗುತ್ತಿದೆ. ಮೊದಲ ಪಂದ್ಯದಲ್ಲಿಯೇ ಬಲಿಷ್ಠ ಆಸ್ಟ್ರೇಲಿಯಾ ಎದುರು ಎರಡು ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಕೊಹ್ಲಿ ಮತ್ತು ರಾಹುಲ್ ಜೊತೆಯಾಟ ಜಯದ ಹಾದಿ ತೋರಿತು. ಆರಂಭಿಕ ಬ್ಯಾಟರ್ ಆಗಿದ್ದ ರಾಹುಲ್ ಅವರನ್ನು ಮಧ್ಯಮ ಕ್ರಮಾಂಕಕ್ಕೆ ಕಳಿಸಿದ್ದ ದ್ರಾವಿಡ್ ಅವರ ದೂರಾಲೋಚನೆ ಫಲ ನೀಡಿತು. ಕಿವೀಸ್ ಎದುರಿನ ಪಂದ್ಯದಲ್ಲಿ ಹಾರ್ದಿಕ್ ಬೌಲಿಂಗ್ ಮಾಡುವಾಗ ಗಾಯಗೊಂಡರು. ಆಗ ವಿರಾಟ್ ಅವರನ್ನೇ ಆರನೇ ಬೌಲರ್ ಆಗಿ ಬಳಸಿಕೊಂಡರು.

ಟೆಸ್ಟ್ ಪಂದ್ಯವೊಂದರಲ್ಲಿ 90 ಎಸೆತಗಳನ್ನು ಆಡಿ ಒಂದು ರನ್ ಗಳಿಸಿದ್ದ ದ್ರಾವಿಡ್, ದಕ್ಷಿಣ ಆಫ್ರಿಕಾದ ಎದುರಿನ ಏಕದಿನ ಪಂದ್ಯಗಳಲ್ಲಿ ಮಿಂಚಿನ ಬ್ಯಾಟಿಂಗ್ ಕೂಡ ಮಾಡಿದ್ದರು. ಫೀಲ್ಡಿಂಗ್, ಕೀಪಿಂಗ್‌ನಲ್ಲಿಯೂ ಮಿಂಚಿದ್ದವರು. ಅವರ ನಾಯಕತ್ವದಲ್ಲಿ ತಂಡವು ಕೆಲವು ಸಾಧನೆಗಳನ್ನೂ ಮಾಡಿತ್ತು. ಆದರೆ 2007ರ ವಿಶ್ವಕಪ್ ಟೂರ್ನಿಯಲ್ಲಿ ಅವರ ನಾಯಕತ್ವದ ತಂಡವು ಹೀನಾಯವಾಗಿ ಸೋತಿತ್ತು. ಇದೀಗ ಆ ಕಹಿಯನ್ನು ಮರೆಯುವ ಸಂದರ್ಭ ಬಂದಿದೆ. ದ್ರಾವಿಡ್ ಕೋಚ್ ಆಗಿ ತಂಡವನ್ನು ವಿಶ್ವಕಪ್ ಜಯದ ಸನಿಹಕ್ಕೆ ತಂದು ನಿಲ್ಲಿಸಿದ್ದಾರೆ. ಸೆಮಿಫೈನಲ್ ಮತ್ತು ಫೈನಲ್ ಸವಾಲುಗಳನ್ನು ಮೀರಿನಿಂತರೆ ಭಾರತವು ಸ್ವದೇಶಿ ಕೋಚ್ ಮಾರ್ಗದರ್ಶನದಲ್ಲಿ ಮಾಡಿದ ಐತಿಹಾಸಿಕ ಸಾಧನೆಯೂ ಇದಾಗಲಿದೆ. ಅದರ ರೂವಾರಿ ದ್ರಾವಿಡ್ ಆಗುತ್ತಾರೆಂಬುದೇ ಕರ್ನಾಟಕಕ್ಕೆ ಹೆಮ್ಮೆ.

## ಸಂಗತ

# ಸಮರಕ್ಕೆ 'ಪೋಸ್ಟ್'ದಾರರ ಕೊಡುಗೆ!

**ಯುದ್ಧದ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಬೇಜವಾಬ್ದಾರಿಯಿಂದ ಮಾಹಿತಿ ಹರಿಯಬಿಡುವುದು ಇಡೀ ಮನುಕುಲಕ್ಕೇ ನಷ್ಟ ಉಂಟು ಮಾಡುತ್ತದೆ**

• ಗೀತಾ ಎ.ಜೆ.

**ಇಸ್ರೇಲ್** ನೆಲದಿಂದಲೇ ಇತ್ತೀಚೆಗೆ ಯುದ್ಧದ ಪ್ರತ್ಯಕ್ಷ ವರದಿ ಮಾಡುತ್ತಿದ್ದ ಭಾರತೀಯ ಪತ್ರಕರ್ತೆಯೊಬ್ಬರು ಯುದ್ಧದ ವಿವರಗಳನ್ನು ನೀಡುತ್ತಾ, ಯಾವುದೇ ಯುದ್ಧದಲ್ಲಿ ಆಗಬಹುದಾದ ಬಹುದೊಡ್ಡ ಅನಾಹುತ ಎಂದರೆ ಅದು 'ಸತ್ಯ'ದ ಮರಣ ಎಂದು ವಿಷಾದ ವ್ಯಕ್ತಪಡಿಸಿದರು. ಈ ವ್ಯಾಖ್ಯಾನ ಯೋಚನೆಗೆ ಹಚ್ಚುವ ವಿಚಾರ.


ಯುದ್ಧವೆಂದರೆ ಹಾಗೆಯೇ. ನಮಗೆ ಬೇಕೋ ಬೇಡವೋ ನೂರಾರು ಕಥನಗಳು ನಮ್ಮ ಕಿವಿಗೆ ಅಪ್ಪಳಿಸುತ್ತಾ, ಕಣ್ಣಿಗೆ ರಾಚುತ್ತಾ ಇರುತ್ತವೆ. ಕಂಡಿದ್ದು ಮತ್ತು ಕೇಳಿದ್ದನ್ನೇ ಸತ್ಯವೆಂದು ಗ್ರಹಿಸುತ್ತಾ ಒಂದು ಅಭಿಪ್ರಾಯಕ್ಕೆ ಬಂದುಬಿಡುತ್ತೇವೆ. ಬಹುಶಃ ಇದಕ್ಕೆ ಸಾಮಾಜಿಕ ಜಾಲತಾಣಗಳ 'ಪೋಸ್ಟ್'ದಾರರ ಕೊಡುಗೆಯೇ ದೊಡ್ಡದು ಎಂದರೆ ತಪ್ಪಿಲ್ಲ.

ಸಂಘರ್ಷ ಯಾವುದೇ ಇರಲಿ, ಯಾವ ದೇಶದಲ್ಲೇ ಇರಲಿ, ದ್ವೇಷ ಬಿತ್ತುವ ಅಪಾಯಕಾರಿ ಮನಃಸ್ಥಿತಿಯನ್ನು ಹೊಂದಿರುವ ಕೆಲವು ವ್ಯಕ್ತಿಗಳ ಸಾಮಾಜಿಕ ಜಾಲತಾಣದ ಸಂದೇಶಗಳು, ಅವರು ಹಂಚಿಕೊಳ್ಳುವ 'ಆಯ್ದ' ಚಿತ್ರಗಳು ಹಾಗೂ ದೃಶ್ಯಗಳ ಪರಿಣಾಮ ದೊಡ್ಡದಾಗಿರುತ್ತದೆ. ಬಹುಶಃ ಯುದ್ಧದಿಂದಾಗುವ ಸಾವು, ನೋವು ಮತ್ತು ನಷ್ಟಗಳಿಗಿಂತ ಇದರ ಪರಿಣಾಮ ಹೆಚ್ಚು. ಇಲ್ಲಿ ನೇರವಾಗಿ ಪ್ರಹಾರ ನಡೆಯುವುದು ಜನರ ಭಾವನೆ ಹಾಗೂ ಅಭಿಪ್ರಾಯದ ಮೇಲೆ. ತಮಗೆ ಬೇಕಾದ ಮನಃಸ್ಥಿತಿಯನ್ನು ರೂಪಿಸುವ ಯೋಜಿತ ಪ್ರಚಾರದ ದುರಾಲೋಚನೆ ಮತ್ತು ದೂರಾಲೋಚನೆ ಯುದ್ಧಕ್ಕಿಂತಲೂ ಭೀಕರ. ಯುದ್ಧದ ಪರಿಣಾಮವನ್ನು ಭಾಗಿಯಾದ ದೇಶಗಳು ಅನುಭವಿಸಿದರೆ, ಸಾಮಾಜಿಕ ಜಾಲತಾಣದಲ್ಲಾಗುವ ಬೇಜವಾಬ್ದಾರಿಯುತ ಮಾಹಿತಿ ಹರಿಯಬಿಡುವಿಕೆ ಇಡೀ ಮನುಕುಲಕ್ಕೇ ನಷ್ಟ ಉಂಟು ಮಾಡುತ್ತದೆ. ಇದು ಶೆಲ್ ದಾಳಿಗಿಂತಲೂ ಅಪಾಯಕಾರಿ.

ಇಸ್ರೇಲ್-ಹಮಾಸ್ ಘರ್ಷಣೆ ಆರಂಭವಾಗಿ 35 ದಿನಗಳೇ ಕಳೆದುಹೋದವು. ಏನೇ ಆಗಲಿ 'ತಂತ್ರಜ್ಞಾನ ಮೊದಲಿರಲಿ' ಎನ್ನುವ ನಮ್ಮ ಹಪಹಪಿಯು ಜಗತ್ತಿನಲ್ಲಿ ಹರಿದಾಡುವ ವಿಚಾರಗಳನ್ನು ವೈಭವೀಕರಿಸುವುದರಲ್ಲಿ, ತನ್ಮೂಲಕ ಮನರಂಜನೆ ತೆಗೆದುಕೊಳ್ಳುವುದರಲ್ಲಿ ಇದೆಯೇ ವಿನಾ ಪರಿಹಾರ ನೀಡುವುದಕ್ಕಲ್ಲ, ಸೌಹಾರ್ದಯುತ ಮುಕ್ತಾಯಕ್ಕಲ್ಲ. ಹಾಗಿದ್ದರೆ, ಇಂದಿನ ಸ್ಥಿತಿಯಲ್ಲಿ, ಅಂಗೈಯಲ್ಲಿ ಮಾಹಿತಿ ಎನ್ನುವ ತಂತ್ರಜ್ಞಾನ ಪರಿಹಾರವಲ್ಲ, ಅದು ಸಮಸ್ಯೆಯ ಆಗರ ಎಂದು ಅರ್ಥೈಸಿಕೊಳ್ಳಬೇಕೇ?

ಪತ್ರಿಕೆ, ಟಿ.ವಿ, ರೇಡಿಯೊದಂತಹ ಮುಖ್ಯ ವಾಹಿನಿಯಲ್ಲಿರುವ ಮಾಧ್ಯಮಗಳಿಗೆ ಒಂದಿಷ್ಟಾದರೂ ನೀತಿಸಂಹಿತೆಯ ಕಟ್ಟುಪಾಡು ಇರುತ್ತದೆ. ಕೆಲವು ಟಿ.ವಿ. ಚಾನೆಲ್‌ಗಳು ಹಿಂಸಾತ್ಮಕ ದೃಶ್ಯಗಳನ್ನು ಮತ್ತೆ ಮತ್ತೆ ಬಿಂಬಿಸುತ್ತಾ, ನೀತಿಸಂಹಿತೆಯನ್ನು ಗಾಳಿಗೆ ತೂರಿದ ಪ್ರಕರಣಗಳು ಈ ಯುದ್ಧದ ಸಂದರ್ಭದಲ್ಲಿ ನಡೆದಿವೆ. ಆದರೂ ಪೂರ್ತಿಯಾಗಿ ಅಲ್ಲದಿದ್ದರೂ ಕೆಲವು ಅಂಶಗಳನ್ನಾದರೂ ಇವು ಪಾಲಿಸಿವೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ದೃಶ್ಯಗಳು, ಚಿತ್ರಗಳು ಹಾಗೂ ಬರಹಗಳಿಗೆ ಮಾತ್ರ ಯಾವುದೇ ಲಂಗುಲಗಾಮಿಲ್ಲ. ಸಾಮಾಜಿಕ ಜಾಲತಾಣದ ಬಳಕೆದಾರರನ್ನು 'ಪರಿಣಾಮಕಾರಿ'ಯಾಗಿ ತಲುಪುವ ಹಾಗೂ ಅವರನ್ನು ಅದರೊಳಗೆ ಭಾಗಿಯಾಗಿಸುವ ಆಲ್ಗೊರಿದಮ್ಮಿನ ಲೆಕ್ಕಾಚಾರವು ಯಾವುದು ಹೆಚ್ಚು ರೋಚಕವೋ ಅದನ್ನೇ ಹೆಚ್ಚು ಪ್ರಸಾರ ಮಾಡುವ ಪ್ರಕ್ರಿಯೆಗೆ ಇಂಬು ನೀಡುತ್ತದೆ. ತಪ್ಪು ಮಾಹಿತಿ, ಅರೆ ಮಾಹಿತಿ ನೀಡುತ್ತಾ 'ಮಾಹಿತಿ ಯುದ್ಧ'ವೇ ಮುನ್ನೆಲೆಗೆ ಬರುತ್ತಿರುವುದು ವಿಷಾದಕರ.

ಮಾಧ್ಯಮ ಸಂಸ್ಥೆಯೊಂದು ನಡೆಸಿದ ಸತ್ಯಶೋಧನಾ ವರದಿಯ ಪ್ರಕಾರ, ಇಸ್ರೇಲ್- ಹಮಾಸ್ ಸಂಘರ್ಷ ಕುರಿತಾದ ಮಾಹಿತಿಗಳಲ್ಲಿ ಹೆಚ್ಚಿನವನ್ನು ಯಾವುದೋ ವಿಡಿಯೊ ಗೇಮ್‌ನ ದೃಶ್ಯಾವಳಿಗಳು, ತುಂಬಾ ಹಳೆಯದಾದ ಹಾಗೂ ಈ ಸಂಘರ್ಷಕ್ಕೆ ಸಂಬಂಧವೇ ಇಲ್ಲದವನ್ನು ಅಥವಾ ಯಾವುದೋ ಸಿನಿಮಾದ ದೃಶ್ಯಗಳನ್ನು ಕತ್ತರಿಸಿ ಹರಿಯಬಿಡಲಾಗಿದೆ. ಈ ಬಗ್ಗೆ ಅರಿವಿಲ್ಲದ ಬಳಕೆದಾರರು ತಮ್ಮ ಅಭಿಪ್ರಾಯದ ಜೊತೆಗೆ ಇಂತಹ ತಪ್ಪು ಮಾಹಿತಿಗಳನ್ನು ಇನ್ನಷ್ಟು ಜನರಿಗೆ ತಲುಪಿಸುವುದರಲ್ಲಿ ಪಾಲುದಾರರಾಗುತ್ತಾರೆ. ಇದು ಮಾಹಿತಿಯುಗದಲ್ಲಿನ ಅನಕ್ಷರತೆ!




1922ರಲ್ಲೇ ವಾಲ್ಟರ್ ಲಿಪ್‌ಮನ್ 'ಪಬ್ಲಿಕ್ ಒಪೀನಿಯನ್' ಎಂಬ ಪುಸ್ತಕದಲ್ಲಿ, 'ವಾಸ್ತವದಲ್ಲಿ ನಾವಿರುವ ಪ್ರಪಂಚ ಅತ್ಯಂತ ವಿಶಾಲ, ವ್ಯಾಪಕ ಹಾಗೂ ಸಂಕೀರ್ಣ. ಅದನ್ನು ಸುಲಭದಲ್ಲಿ ಅರ್ಥೈಸಿಕೊಳ್ಳುವುದು ಕಷ್ಟ. ಅಂದರೆ, ನಾವು ಕಟ್ಟಿಕೊಂಡ ಅಥವಾ ಕಟ್ಟಿಕೊಟ್ಟ ಸಂಕುಚಿತ ಪ್ರಪಂಚದಲ್ಲಿ ನಾವೇನು ಗ್ರಹಿಸಿಕೊಳ್ಳುತ್ತೇವೆಯೋ ಅದರೊಳಗೇ ಬದುಕುತ್ತಾ ಇದ್ದೇವೆ. ಅದು ಮಾನಸಿಕ ಚಿತ್ರಣವಷ್ಟೇ ವಿನಾ ವಾಸ್ತವ ಆಗಿರುವುದಕ್ಕೆ ಸಾಧ್ಯವಿಲ್ಲ' ಎಂದು ಹೇಳುತ್ತಾರೆ. ಈಗ ಆಗುತ್ತಿರುವುದು ಅಷ್ಟೆ. ತೀರಾ ಸಂಕೀರ್ಣವಾದ ಸಮಸ್ಯೆಯೊಂದನ್ನು ಅತ್ಯಂತ ಸಂಕುಚಿತವಾಗಿ ವ್ಯಾಖ್ಯಾನಿಸುತ್ತಾ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಾ ಇದ್ದೇವೆ.

ಜನರ ಕೈಯಲ್ಲಿ ಸಿಲುಕಿದ ಮಾಧ್ಯಮವು ನಿಖರ ಮಾಹಿತಿಯ ಸಾಧನವಾಗಿಲ್ಲ. ತಮಗೆ ಬೇಕಾದಂತೆ ಕಲ್ಪಿಸಿಕೊಳ್ಳುತ್ತಾ ಸಮಸ್ಯೆಯನ್ನು ಇನ್ನಷ್ಟು ಹದಗೆಡಿಸುವ ಸಾಧನವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಸಿಗುವುದೆಲ್ಲವೂ ನಿಖರ ಮಾಹಿತಿಯಲ್ಲ. ಅದು ಹಲವಾರು ಬಳಕೆದಾರರನ್ನು ದಾಟುತ್ತಾ ವಿರೂಪಗೊಂಡ ಮಾಹಿತಿಯಾಗಿರಬಹುದು ಎಂಬ ಸಣ್ಣ ಸಂಶಯವಾದರೂ ನಮ್ಮಲ್ಲಿ ಇರಬೇಕು.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಎಸ್‌ಡಿಎಂ ಕಾಲೇಜು, ಉಜಿರೆ

## ವಾಚಕರ ವಾಣಿ

### ಹಸಿರು ಪಟಾಕಿ: ಜನಜಾಗೃತಿ ಹೆಚ್ಚಲಿ

ಜಾತ್ರೆ, ಉತ್ಸವ, ಹಬ್ಬಗಳ ಸಂದರ್ಭದಲ್ಲಿ ಪಟಾಕಿ ಸುಡುವುದೆಂದರೆ ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಎಲ್ಲಿಲ್ಲದ ಸಡಗರ, ಸಂಭ್ರಮ. ಆದರೆ ಅದು ವಿಷಕಾರಿ ಮದ್ದು, ಪರಿಸರ ಹಾಗೂ ಪಕ್ಷಿಗಳಿಗೆ ತುಂಬಾ ಹಾನಿ ಉಂಟುಮಾಡುತ್ತದೆ ಎಂಬುದು ಗೊತ್ತಿದ್ದೂ ಗೊತ್ತಿಲ್ಲದವರಂತೆ ವರ್ತಿಸುವುದು ವಿಷಾದಕರ. ಶಬ್ದಮಾಲಿನ್ಯ-ದಿಂದ ಆಗುವ ತೊಂದರೆಗಳು ಒಂದೆರಡಲ್ಲ. ಇಂತಹ ಸ್ಥಿತಿಯಲ್ಲಿ, ಹಸಿರು ಪಟಾಕಿ ಸುಡುವುದರಿಂದ ಪರಿಸರ ರಕ್ಷಣೆಯೊಂದಿಗೆ ಪಕ್ಷಿ ಸಂಕುಲವನ್ನೂ ರಕ್ಷಿಸಬಹುದು ಎಂಬ ಗುರುರಾಜ ಎಸ್. ದಾವಣಗೆರೆ ಅವರ ಲೇಖನ (ಪ್ರ.ವಾ., ನ. 10) ಪಟಾಕಿಪ್ರಿಯರ ಕಣ್ತೆರೆಸುವಂತಿದೆ.

ಪರಿಸರ ಮತ್ತು ಜನರ ಆರೋಗ್ಯದ ದೃಷ್ಟಿಯಿಂದ ಹಸಿರು ಪಟಾಕಿಯ ಬಳಕೆ ಹಿತಕರ. ಶಾಲಾಕಾಲೇಜುಗಳು, ಗ್ರಾಮ ಪಂಚಾಯಿತಿ ಹಾಗೂ ಸಂಘ–ಸಂಸ್ಥೆಗಳ ಮಟ್ಟದಲ್ಲಿ ಹಸಿರು ಪಟಾಕಿ ಬಳಕೆ ಕುರಿತು ಜನಜಾಗೃತಿ ಮೂಡಿಸಬೇಕಾದುದು ಅವಶ್ಯ.

**ಜಿ.ಎಸ್.ಸುತಾರ,** ಜಮಖಂಡಿ

### ದುಸ್ಸೇರ, ದಿವಾಳಿ... ಹಾಗೆಂದರೆ?!

ಒಂದೆಡೆ ಪಾಶ್ಚಿಮಾತ್ಯರ ಅನುಕರಣೆ, ಇನ್ನೊಂದೆಡೆ ಅನ್ಯಭಾಷಿಕರ ಪ್ರಭಾವ. ಇವುಗಳಿಂದಾಗಿ ನಮ್ಮ ಹಬ್ಬಗಳ ಹೆಸರು, ಅವುಗಳ ಮೂಲ ಸ್ವರೂಪ ಮತ್ತು ಆಚರಣೆಯ ಬಗೆ ಎಲ್ಲವೂ ಬದಲಾಗುತ್ತಿವೆ ಮತ್ತು ಮಹತ್ವ ಕಳೆದುಕೊಳ್ಳುತ್ತಿವೆ. ಇತ್ತೀಚಿನ ದಿನಗಳಲ್ಲಿ ಜನರು ದುಸ್ಸೇರ, ದಿವಾಳಿ ಎಂಬಂತಹ ಹೆಸರುಗಳನ್ನು ವಿವೇಚನೆ ಇಲ್ಲದೆ ಒಪ್ಪಿಕೊಂಡು, ಆ ಹೆಸರುಗಳಲ್ಲೇ ಹಬ್ಬಗಳ ಶುಭಾಶಯ ಕೋರುತ್ತಿರುವುದು ಇದಕ್ಕೆ ನಿದರ್ಶನ.

ನಾವು ಎಂದಿನಿಂದಲೋ ದಸರಾ, ದೀಪಾವಳಿ ಎಂಬ ಹೆಸರುಗಳನ್ನು ಬಳಸುತ್ತಿದ್ದೇವೆ. ಈಗ ಇದ್ದಕ್ಕಿದ್ದಂತೆ ಅವು ದುಸ್ಸೇರ ಹಾಗೂ ದಿವಾಳಿ ಆಗಲು ಹೇಗೆ ಸಾಧ್ಯ? ಇದು ನಿಜಕ್ಕೂ ನಮ್ಮ ಬಗ್ಗೆ ನಮಗೇ ಅರಿವಿಲ್ಲದಿರುವುದು ಅಥವಾ ಮೈಮರೆತು ಪರರನ್ನು ಅನುಸರಿಸುತ್ತಿರುವುದರ ಸಂಕೇತವಾಗಿದೆ. ಪರರ ಅನುಕರಣೆ ಬಿಟ್ಟು, ನಮ್ಮ ಹಬ್ಬಗಳನ್ನು ನಮ್ಮಲ್ಲಿ ಬಳಕೆಯಲ್ಲಿರುವ ಹೆಸರುಗಳಿಂದ ಕರೆಯೋಣ, ನಮ್ಮಲ್ಲಿ ಪ್ರಚಲಿತದಲ್ಲಿರುವ ಅರ್ಥಗಳಲ್ಲಿ ಆಚರಿಸೋಣ.

**ನಾಗರಾಜ್ ಮಾದೇಗೌಡ,** ಕನಕಪುರ

### ಕಳ್ಳಬೇಟೆಗಾರರ ವಿಷಜಾಲ ಹತ್ತಿಕ್ಕಬೇಕಿದೆ

ಆರು ಮಂದಿ ಅಂತರರಾಜ್ಯ ಶ್ರೀಗಂಧ ಕಳ್ಳರನ್ನು ಬಂಧಿಸಿರುವ ಚಿತ್ರದುರ್ಗ ಜಿಲ್ಲೆಯ ಪೊಲೀಸರು, ಆನೆ ದಂತ, ರಕ್ತಚಂದನ ಜಪ್ತಿ ಮಾಡಿರುವ ಸುದ್ದಿಯನ್ನು (ಪ್ರ.ವಾ., ನ. 12) ಓದಿದಾಗ, ಪೊಲೀಸರ ಬಗ್ಗೆ ಅಭಿಮಾನ ಮೂಡಿತು. ಹೊಲಗಳ ಬದುಗಳಲ್ಲಿ ಬೆಳೆದ ಶ್ರೀಗಂಧದ ಮರಗಳನ್ನು ಕಡಿದು ಗಂಧದ ತುಂಡುಗಳನ್ನು ಕಳ್ಳತನ ಮಾಡಲಾಗುತ್ತಿದೆ ಎಂದು ಆಗಾಗ ರೈತರು ದೂರುವುದನ್ನು ಕೇಳುತ್ತಿರುತ್ತೇವೆ. ಹೀಗೆ ರಾತ್ರೋರಾತ್ರಿ ಕಡಿದ ಗಂಧದ ತುಂಡುಗಳನ್ನು ರಾಜ್ಯದ ಗಡಿಗೆ ಹೊಂದಿಕೊಂಡಂತೆ ಆಂಧ್ರಪ್ರದೇಶದ ಗಡಿಯಲ್ಲಿರುವ ಖಾಸಗಿ ಗಂಧದ ಕಾರ್ಖಾನೆಗಳಿಗೆ ವಾಮಮಾರ್ಗದಲ್ಲಿ ಸಾಗಿಸುತ್ತಿರುವ ಸಂಗತಿ ಗುಟ್ಟಾಗಿ ಉಳಿದಿಲ್ಲ.

ಚಿತ್ರದುರ್ಗದಂತಹ ಬಯಲುಸೀಮೆಯಲ್ಲೂ ಹೊಲದ ಬೇಲಿಯಲ್ಲಿ ಸಾವಿರಾರು ಸಂಖ್ಯೆಯ ಶ್ರೀಗಂಧದ ಮರಗಳು ಬೆಳೆಯುತ್ತವೆ. ಆದರೆ ಅವುಗಳ ಕಾಂಡವು ಸ್ವಲ್ಪ ದಪ್ಪವಾದ ಕೂಡಲೇ ರಾತ್ರಿ ಬೆಳಗಾಗುವುದರೊಳಗೆ ಅವೆಲ್ಲ ಮಂಗಮಾಯ ಆಗುತ್ತವೆ. ಶ್ರೀಗಂಧ ಕಳ್ಳಬೇಟೆಗಾರರ ವಿಷಜಾಲ ಬಹಳ ಸಕ್ರಿಯವಾಗಿದೆ. ಹತ್ತು ಅಡಿ ದೂರದಲ್ಲಿ ಇರುವವರಿಗೂ ಶಬ್ದ ಕೇಳದಂತೆ ಶ್ರೀಗಂಧದ ಮರ ಕತ್ತರಿಸಬಲ್ಲ ಗರಗಸದಂತಹ ಸೌಂಡ್‌ಪ್ರೂಫ್ ಹತಾರಗಳು ಲಭ್ಯ ಇವೆ. ಜೊತೆಗೆ ಮರಗಳ್ಳರ ಗುಂಪು ಶಸ್ತ್ರಸಜ್ಜಿತವಾಗಿಯೇ ಕಾರ್ಯಾಚರಣೆಯಲ್ಲಿ ತೊಡಗುತ್ತದೆ. ಅಂತಹವರನ್ನು ಬರೀ ಲಾಠಿಯಿಂದ ಎದುರಿಸಲು ಸಾಧ್ಯವಿಲ್ಲ. ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ, ಸಚಿವರ ನಿವಾಸಗಳ ಆವರಣದಲ್ಲಿ ಬೆಳೆದ ಶ್ರೀಗಂಧದ ಮರಗಳನ್ನೇ ಕಳವು ಮಾಡಿದ್ದು ಸುದ್ದಿಯಾಗಿರುವುದನ್ನು ಓದಿದ್ದೇವೆ. ಹಾಗಾಗಿ, ಅರಣ್ಯ ಇಲಾಖೆಯು ಸಿಬ್ಬಂದಿಗೆ ಸೂಕ್ತ ವಾಹನ, ಶಸ್ತ್ರಾಸ್ತ್ರ, ವಾಕಿಟಾಕಿ ಒದಗಿಸುವುದರ ಜೊತೆಗೆ ರಾಜಕೀಯ ಪ್ರಭಾವ ಬೀರುವುದನ್ನು ಸಂಪೂರ್ಣ ನಿಲ್ಲಿಸಬೇಕಿದೆ. ವನ್ಯಜೀವಿಗಳ ಅಂಗಾಂಗ, ಶ್ರೀಗಂಧ ಹಾಗೂ ಕಾಡಿನ ಸಂಪತ್ತು ಕಳವು ಮಾಡುವವರಿಗೆ ಆಜೀವಪರ್ಯಂತ ಜೈಲುಶಿಕ್ಷೆ ವಿಧಿಸುವಂತಹ ಕಠಿಣ ಕಾನೂನು ಪ್ರಯೋಗಿಸಿದಾಗ ಕಾಡು ಮತ್ತು ಕಾಡಿನ ಸಂಪತ್ತನ್ನು ರಕ್ಷಿಸಲು ಸಾಧ್ಯ.

**ಎಂ.ಜಿ.ರಂಗಸ್ವಾಮಿ,** ಹಿರಿಯೂರು

### ಪ್ರಕೃತಿ ಪ್ರೀತಿ, ದೇಸಿತನ ಕಾಯ್ದುಕೊಳ್ಳೋಣ

ದೀಪಾವಳಿಯನ್ನು ನಮ್ಮ ನಾಡವರು ಆಯಾ ಭಾಗದಲ್ಲಿ ತಮ್ಮ ಪೂರ್ವಜರು ಆಚರಿಸಿಕೊಂಡು ಬಂದ ಬಗೆಯಲ್ಲಿ ಅನುಸರಿಸಿದರೆ, ಕಾಲಾನುಕ್ರಮದಲ್ಲಿ ಅದು ಕೆಲವು ಬದಲಾವಣೆಗಳನ್ನು ಕಂಡ ಉದಾಹರಣೆಗಳೂ ಇವೆ. ಹಾಗೆಯೇ ಈ ಹಬ್ಬವು ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧದ ದ್ಯೋತಕವೂ ಹೌದು. ರಾಜ್ಯದ ಕೃಷಿ ವಲಯದಲ್ಲಿ ನಾನಾ ನಮೂನೆಯ ಬೆಳೆಗಳು ಹೂವು, ಕಾಯಿ, ತೆನೆಯಾಗಿ ಜಮೀನಿನಲ್ಲಿ ನಳನಳಿಸುವ ಸುಸಂದರ್ಭ ಇದು. ಹಬ್ಬದಲ್ಲಿ ಅವನ್ನು ಕಿತ್ತುತಂದು ವಿಶೇಷ ಅಲಂಕಾರ ಮಾಡಿ, ಬಾಗಿಲ ಬಳಿ ಇಡುವ ಸಂಪ್ರದಾಯ ಇದೆ. ಆದರೆ ಪ್ರಸಕ್ತ ಸಾಲಿನಲ್ಲಿ ಮಳೆ ಕೊರತೆಯಿಂದ ಕೃಷಿ ಕ್ಷೇತ್ರವು ಅಪಾರ ನಷ್ಟ ಅನುಭವಿಸುತ್ತಿದೆ. ಇದು ರೈತಾಪಿ ವರ್ಗದ ಮೇಲಷ್ಟೇ ಅಲ್ಲ, ಆಹಾರ ಸಾಮಗ್ರಿಗಳ ಕೊರತೆಯ ಮೂಲಕ ಸಾರ್ವಜನಿಕರ ಮೇಲೂ ಗಂಭೀರ ಪರಿಣಾಮ ಬೀರದೇ ಇರದು.

ಪ್ರಕೃತಿ ಪ್ರೀತಿ, ಮತ್ತದರ ನಿರ್ವಹಣೆಯಲ್ಲಿ ನಿಗಾ ವಹಿಸದೆ ನಮ್ಮ ನಿಷ್ಕಾಳಜಿ ಮುಂದುವರಿದಲ್ಲಿ, ಹೊಲಗದ್ದೆಗಳೂ ಸೇರಿದಂತೆ ಭೂಮಿಯ ಮೇಲೆ ದುಷ್ಪರಿಣಾಮ ಬೀರುತ್ತಿರುವ ಪ್ಲಾಸ್ಟಿಕ್ ಹಾವಳಿಯನ್ನು ನಿಯಂತ್ರಿಸದಿದ್ದಲ್ಲಿ, ದೀಪಾವಳಿ ಹಬ್ಬದಲ್ಲಿ ಬಳಸುವ ಬೆಳೆಗಳ ಮಾದರಿ ತಯಾರಿಸಿ ಪೂಜಿಸಬೇಕಾದ ದಿನಗಳು ಬರಬಹುದು. ಅದಾಗಲು ಬಿಡದೆ, ನಮ್ಮ ಗ್ರಾಮಗಳು ಗಾಂಧೀಜಿ ಕಂಡ ಮಾದರಿ ಹಳ್ಳಿಗಳಾಗಿ ಪ್ರತಿ ಹಂತದಲ್ಲಿಯೂ ದೇಸಿತನವನ್ನು ಕಾಪಿಟ್ಟುಕೊಂಡು, ಬದುಕನ್ನು ಸುಸ್ಥಿರವಾಗಿಸಲು ಪ್ರಯತ್ನಿಸಬೇಕಿದೆ.

**ರುದ್ರಮೂರ್ತಿ ಎಂ.ಜೆ.,** ಚಿತ್ರದುರ್ಗ

---



## ಸುಭಾಷಿತ

ನಿನ್ನನ್ನು ನೀನು ನಂಬುವುದಾದರೆ ಪರಮಾತ್ಮನನ್ನು ನಂಬಿದಂತೆ.

–ಸ್ವಾಮಿ ವಿವೇಕಾನಂದ

## ಚುರುಮುರಿ



### ಕಪ್ ನಮ್ಮದೇ!

• ಸುಮಂಗಲಾ

'ಏ ನೋಡಿಲ್ಲಿ... ನಮ್ ವಿಜಿಯಣ್ಣನೇ ಫಸ್ಟ್ ಬಂದಾನ. ಮ್ಯಾರಥಾನ್‌ವಳಗ ಎಂತೆಂಥ ಘಟಾನುಘಟಿಗಳನ್ನು ಹಿಂದೆ ಹಾಕ್ಯಾನೆ' ಬೆಕ್ಕಣ್ಣ ಪೇಪರು ಹಿಡಿದು ಭಯಂಕರ ಖುಷಿಯಿಂದ ವದರಿತು. 'ಏಷ್ಯಾಡ್ ಗೇಮ್ಸ್ ಮೊನ್ನೆನೇ ಮುಗಿದೈತಿ, ಇದ್ಯಾವ ಮ್ಯಾರಥಾನ್, ಯಾವ ವಿಜಿಯಣ್ಣ?' ನಾನು ಪೆಂಗಳಂತೆ ಕಣ್ಣುಕಣ್ಣುಬಿಟ್ಟೆ.

'ನೀ ಸುದ್ದಿ ನೋಡಿಲ್ಲೇನ್? ವಿಜಿಯಣ್ಣ ಕಮಲ- ರಾಜ್ಯಾಧ್ಯಕ್ಷ ಆಗ್ಯಾನೆ. ರವಿಯಣ್ಣ, ಶೋಭಕ್ಕ, ಸೋಮಣ್ಣ, ಹಿಂಗೆ ಎಷ್ಟೆಲ್ಲ ಮಂದಿ ರಾಜ್ಯಾಧ್ಯಕ್ಷ ಮ್ಯಾರಥಾನವಳಗೆ ಇದ್ರು, ಎಲ್ಲಾರಿನ್ನೂ ಹಿಂದೆ ಹಾಕ್ಯಾನೆ... ಮಕ್ಕಳು ರ‍್ಯಾಂಕುಗೀಂಕು ಬಂದಾಗ ಅಪ್ಪ ಅಮ್ಮಂದಿರು ಅವರ ಬಾಯೊಳಗೆ ಸಿಹಿ ತುರುಕಿ, ಫೋಟೊಗೆ ಪೋಸು ಕೊಡ್ತಾರಲ್ಲ ಹಂಗೆ ನಮ್ಮ ಯಡ್ಯೂರಜ್ಜಾರು ಅವಂಗ ಸಿಹಿ ತಿನ್ನಿಸಲಾಕೆ ಹತ್ಯಾರ ನೋಡು' ಎಂದು ನನ್ನ ಮೂತಿ ತಿವಿದು ಫೋಟೊ ತೋರಿಸಿತು.

'ರಾಜಾಹುಲಿ ರಾಜಕೀಯ ಪಟ್ಟುಗಳು ಕಡಿಮೆ ಅಂತ ಮಾಡೀಯೇನು?' ನಾನು ಕಿಚಾಯಿಸಿದೆ.'ನೋಡ್ತಿರು... ನಮ್ ಯಡ್ಯೂರಜ್ಜಾರು ಮಗನ ಸಾರಥ್ಯದಲ್ಲಿ ಹೆಂಗ ಪಕ್ಷ ಮುನ್ನಡೆಸತಾರೆ ಅಂತ. ಈಗ ಕುಮಾರಣ್ಣನೂ ಮೋದಿಮಾಮನ ಜೊತಿಗಿ ಸೇರ್ಯಾನ, ಈ ಸಲ ಕಪ್ ನಮ್ಮದೇ!' ಎಂದು ಗುರುಗುಟ್ಟಿ ಮೀಸೆ ತಿರುವಿತು.

'ಅಲ್ಲಲೇ... ಕಾಂಗಿಗಳಿದ್ದು ಕುಟುಂಬ ರಾಜಕಾರಣ, ಇಡೀ ಇಂಡಿಯಾದಾಗೆ ಕುಟುಂಬ ರಾಜಕಾರಣ ಮಾಡದ ಪಕ್ಷಗಳು ಅಂದ್ರ ಕಮಲ-ದಳ ಪಕ್ಷ ಅಂತಿದ್ದಿರಿ, ಇದಿನ್ನೇನು ಮತ್ತ?' ಎಂದು ನಾನೆಂದರೆ ಬೆಕ್ಕಣ್ಣ ಪಕಪಕನೆ ನಕ್ಕಿತು.

'ಇದ್ರಾಗೆ ಕುಟುಂಬ ರಾಜಕಾರಣ ಎಲ್ಲೈತಿ? ಕಮಲಕ್ಕನ ಮನ್ಯಾಗಿನ ಹರೇದ ಹುಡುಗ್ರು ಅವರ ಪ್ರತಿಭೆ ತೋರಿಸ್ಯಾರೆ, ಅದಕ್ಕೆ ತಕ್ಕಂತೆ ಸ್ಥಾನ ಗಳಿಸ್ಯಾರೆ. ಇನ್ನು ದಳದವರ ವಿಚಾರಕ್ಕೆ ಬಂದರೆ ಪಕ್ಷವೇ ಕುಟುಂಬ, ಕುಟುಂಬವೇ ಪಕ್ಷ ಅಂತ ಏಕೋಭಾವದಿಂದ ದುಡಿತಾರೆ'.

'ಅದ್ಸರಿ... ವಿರೋಧ ಪಕ್ಷದ ನಾಯಕನ ಆಯ್ಕೆಗೆ ಇನ್ನಾ ಮುಹೂರ್ತ ಕೂಡಿಲ್ಲೇನ್?'


'ಭಾಳ ಮಂದಿ ಆ ಮ್ಯಾರಥಾನ್‌ವಳಗೂ ಅದಾರೆ. ಇನ್ನಾ ಸ್ಪರ್ಧೆ ಮುಗಿದಿಲ್ಲ, ಅಷ್ಟೆ' ಬೆಕ್ಕಣ್ಣ ಮುಸಿಮುಸಿ ನಕ್ಕಿತು.


Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಹಿಮಾಲಯದಲ್ಲಿ ಸುರಂಗ ಮಾರ್ಗ ಎಷ್ಟು ಸುರಕ್ಷಿತ?

ಉತ್ತರಾಖಂಡದ ಉತ್ತರಕಾಶಿ ಪಟ್ಟಣಕ್ಕೆ ಸಮೀಪದಲ್ಲಿರುವ ಗಂಗೋತ್ರಿ–ಯಮುನೋತ್ರಿ ಹೆದ್ದಾರಿಯಲ್ಲಿ ನಿರ್ಮಿಸಲಾಗುತ್ತಿರುವ ಸರ್ವಋತು ಸುರಂಗದ ಕೆಲಭಾಗ ಭಾನುವಾರ ನಸುಕಿನ ವೇಳೆಯಲ್ಲಿ ಕುಸಿದಿದೆ. ಗಂಗೋತ್ರಿ, ಯಮುನೋತ್ರಿ, ಬದರೀನಾಥ ಮತ್ತು ಕೇದಾರನಾಥಕ್ಕೆ ವರ್ಷದ ಎಲ್ಲಾ ದಿನಗಳಲ್ಲೂ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ನಿರ್ಮಿಸಲಾಗುತ್ತಿರುವ 'ಚಾರ್‌ಧಾಮ್ ಕಾರಿಡಾರ್' ಯೋಜನೆಯ ಭಾಗವಿದು. ಈ ಯೋಜನೆ ಆರಂಭಿಸಿದಾಗಲೇ, ಹಿಮಾಲಯದ ಭೌಗೋಳಿಕ ಸ್ಥಿತಿ ಮತ್ತು ಅಸ್ಥಿರ ನೆಲವನ್ನು ಪರಿಗಣಿಸದೆ ಯೋಜನೆ ರೂಪಿಸಲಾಗಿದೆ ಎಂದು ಆಕ್ಷೇಪ ವ್ಯಕ್ತವಾಗಿತ್ತು. ಅದರ ವಿರುದ್ಧ ಕಾನೂನು ಹೋರಾಟವನ್ನೂ ನಡೆಸಲಾಗಿತ್ತು. ಇಂತಹ ಪ್ರದೇಶದಲ್ಲಿ ಸುರಂಗ ಕೊರೆಯುವುದು ಅಪಾಯಕಾರಿ ಎಂದು ಆತಂಕ ವ್ಯಕ್ತಪಡಿಸಲಾಗಿತ್ತು. ಇದನ್ನು ಪುಷ್ಟೀಕರಿಸುವಂತೆ ಸುರಂಗಗಳನ್ನು ಒಳಗೊಂಡ ಜಲವಿದ್ಯುತ್ ಯೋಜನೆಗಳು ಮತ್ತು ಹೆದ್ದಾರಿ ಯೋಜನೆಗಳಲ್ಲಿ ಸಾಲು–ಸಾಲು ಅವಘಡಗಳು ಸಂಭವಿಸಿವೆ

• ಜಯಸಿಂಹ ಆರ್.






2021ರ ಫೆಬ್ರುವರಿಯಲ್ಲಿ ತಪೋವನ ಅಣೆಕಟ್ಟೆಯ ಬಳಿ ಸಂಭವಿಸಿದ್ದ ದಿಢೀರ್ ಪ್ರವಾಹದಲ್ಲಿ ತಪೋವನ ಜಲಸುರಂಗಕ್ಕೆ ತೀವ್ರ ಹಾನಿಯಾಗಿತ್ತು

ಉತ್ತರಕಾಶಿ ಬಳಿ ನಿರ್ಮಿಸಲಾಗುತ್ತಿದ್ದ 4.5 ಕಿ.ಮೀ. ಉದ್ದದ ಸುರಂಗ ಮಾರ್ಗದ ಕೆಲಭಾಗ ಕುಸಿದಿದೆ. ಕೆಲಭಾಗ ಅಂದರೆ, 200 ಮೀಟರ್‌ಗಳಷ್ಟು ಸುರಂಗಮಾರ್ಗ ಸಂಪೂರ್ಣ ಕುಸಿದಿದೆ. ಅಲ್ಲಿ ಸಿಲುಕಿರುವ 40 ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ತರಬೇಕಿದೆ. ಸುರಂಗ ಏಕೆ ಕುಸಿಯಿತು ಎಂಬುದನ್ನು ಪತ್ತೆ ಮಾಡುವ ತನಿಖಾ ಪ್ರಕ್ರಿಯೆ, ತೆರವು ಕಾರ್ಯಾಚರಣೆಯ ನಂತರವಷ್ಟೇ ಆರಂಭವಾಗಲಿದೆ. ಆದರೆ, ಈ ಪ್ರದೇಶದಲ್ಲಿ ನಿರ್ಮಿಸುತ್ತಿರುವ ಸುರಂಗಗಳು ಸುರಕ್ಷಿತವಲ್ಲ, ಅವು ಯಾವಾಗ ಬೇಕಾದರೂ ಕುಸಿಯಬಹುದು ಎಂದು ವಿಜ್ಞಾನಿಗಳು ವರ್ಷಗಳ ಹಿಂದೆಯೇ ಅಂದಾಜಿಸಿದ್ದರು. ಈ ಪ್ರದೇಶದಲ್ಲಿ ಅಂತಹ ಕಾಮಗಾರಿ ನಡೆಸುವುದು ತರವಲ್ಲ ಎಂದು ಸಲಹೆ ನೀಡಿದ್ದರು.

ಇಲ್ಲಿನ ಅವಘಡಗಳಿಗೆ ಕಳಪೆ ಕಾಮಗಾರಿ ಕಾರಣವಲ್ಲ. ಬದಲಿಗೆ ಇಂತಹ ಪ್ರದೇಶದಲ್ಲಿ ಇಂತಹ ಕಾಮಗಾರಿ ನಡೆಸಲು ನಿರ್ಧರಿಸಿದ್ದೇ ಅವಘಡಕ್ಕೆ ಕಾರಣ ಎಂದು ವಿಜ್ಞಾನಿಗಳು ಹೇಳುತ್ತಾರೆ. ಇದಕ್ಕೆ ಕಾರಣ ಹಿಮಾಲಯ ಪ್ರದೇಶದ ಮೇಲ್ಮೈ, ತಳಹದಿ ಮತ್ತು ಅಂತರಾಳ ಯಾವುದೇ ಸಂಪೂರ್ಣ ಸ್ಥಿರವಾದ ಪ್ರದೇಶವಲ್ಲ. ಏಕೆಂದರೆ ಇದು ಎರಡು ಭೂಫಲಕಗಳು ಪರಸ್ಪರ ಕೂಡುವ ಪ್ರದೇಶ.

ಟಿಬೆಟಿಯನ್ ಭೂಫಲಕ ಭಾರತ ಉಪಖಂಡದ ಫಲಕ ಒತ್ತುತ್ತಿರುವ ಪ್ರದೇಶದಲ್ಲಿ ಹಿಮಾಲಯವಿದೆ. ಈ ಒತ್ತುವ ಕ್ರಿಯೆಯ ಫಲವಾಗಿಯೇ ಹಿಮಾಲಯ ಸೃಷ್ಟಿಯಾಗಿದೆ. ಟಿಬೆಟಿಯನ್ ಭೂಫಲಕದ ದಕ್ಷಿಣ ಭಾಗದ ಕೆಳಗೆ ಭಾರತ ಉಪಖಂಡದ ಫಲಕವು ಸಿಲುಕಿದೆ. ಭಾರತ ಉಪಖಂಡದ ಫಲಕವು ಉತ್ತರ ದಿಕ್ಕಿಗೆ ಒತ್ತಿದಂತೆಲ್ಲಾ, ಟಿಬೆಟಿಯನ್ ಭೂಫಲಕವು ಸ್ವಲ್ಪ ಮೇಲಕ್ಕೆ ಏಳುತ್ತದೆ. ಪ್ರತಿದಿನವೂ ಇಂತಹ ಕ್ರಿಯೆ ಜರುಗುತ್ತಿರುವ ಕಾರಣದಿಂದ ಹಿಮಾಲಯ ಪ್ರದೇಶದ ಎತ್ತರ ಬದಲಾಗುತ್ತಲೇ ಇರುತ್ತದೆ. ಈ ಕಾರಣದಿಂದಲೇ ಹಿಮಾಲಯದ ಪ್ರಮುಖ ಪರ್ವತ–ಶಿಖರಗಳ ಎತ್ತರವನ್ನು ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಲೆಕ್ಕಹಾಕಲಾಗುತ್ತದೆ. ಈ ಪ್ರದೇಶದಲ್ಲಿ ಅತ್ಯಂತ ಕಡಿಮೆ ತೀವ್ರತೆಯ (ರಿಕ್ಟರ್ ಮಾಪಕದಲ್ಲಿ 4ರಷ್ಟು ತೀವ್ರತೆಗಿಂತ ಕಡಿಮೆ ಇರುವ) ಹತ್ತಾರು ಭೂಕಂಪಗಳು ಸಂಭವಿಸುತ್ತವೆ. ಹೀಗಾಗಿ ನೆಲದ ಮೇಲ್ಮೈನಲ್ಲಿ ಗೋಚರಿಸದೇ ಇದ್ದರೂ ನೆಲದಡಿಯಲ್ಲಿ ಮಣ್ಣಿನ ರಚನೆ ಬದಲಾಗುತ್ತಲೇ ಇರುತ್ತದೆ. ಅಷ್ಟು ಅಸ್ಥಿರವಾದಂತಹ ಪ್ರದೇಶವಿದು.

ಇಂತಹ ಅಸ್ಥಿರವಾದ ನೆಲವು ಯಾವುದೇ ಬೃಹತ್ ನಿರ್ಮಾಣಕ್ಕೆ ಯೋಗ್ಯವಲ್ಲ ಎಂದು ಅಮೆರಿಕದ ಟೊಲೆಡೊ ವಿಶ್ವವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿಗಳು ಸಿದ್ಧಪಡಿಸಿದ್ದ ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ. ನೇಪಾಳ, ಭೂತಾನ್ ಮತ್ತು ಭಾರತದ ವಿಜ್ಞಾನಿಗಳ ತಂಡದೊಂದಿಗೆ ಈ ವಿಜ್ಞಾನಿಗಳ ತಂಡವು ಅಧ್ಯಯನ ನಡೆಸಿತ್ತು. ಜೋಶಿಮಠದ ಈಶಾನ್ಯ ದಿಕ್ಕಿನಲ್ಲಿ ನಿರ್ಮಿಸುತ್ತಿರುವ ತಪೋವನ ಜಲವಿದ್ಯುತ್ ಯೋಜನೆಯು ಅಪಾಯಕಾರಿ ಎಂದು ಆ ಅಧ್ಯಯನ ವರದಿಯಲ್ಲೇ ಎಚ್ಚರಿಕೆ ನೀಡಲಾಗಿತ್ತು. ವರದಿ ಪ್ರಕಟವಾದ ಕೆಲವೇ ತಿಂಗಳಲ್ಲಿ ತಪೋವನ ಅಣೆಕಟ್ಟೆ ಪ್ರದೇಶದಲ್ಲಿ ಅವಘಡ ಸಂಭವಿಸಿತ್ತು.

ಭಾರತದ ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ ರಾಜ್ಯಗಳು ಮತ್ತು ನೇಪಾಳ, ಭೂತಾನ್ ಹಿಮಾಲಯದ ಅತ್ಯಂತ ಅಸ್ಥಿರ ಪ್ರದೇಶದಲ್ಲಿವೆ. ಇಲ್ಲಿ ಬೃಹತ್ ಅಣೆಕಟ್ಟೆಗಳು ಮತ್ತು ಸುರಂಗ ಮಾರ್ಗಗಳ ನಿರ್ಮಾಣ ಅಪಾಯಕಾರಿ ಎಂದು ವರದಿಯಲ್ಲಿ ಹೇಳಲಾಗಿತ್ತು. ತಪೋವನ–ವಿಷ್ಣುಗಡ ಜಲವಿದ್ಯುತ್ ಯೋಜನೆಯ ಸುರಂಗ ಮಾರ್ಗದಲ್ಲಿ ನೀರು ಹರಿಸಿ ವಿದ್ಯುತ್ ಉತ್ಪಾದಿಸಲಾಗುತ್ತದೆ. ಇಂತಹ ಹತ್ತಾರು ಯೋಜನೆಗಳು ಉತ್ತರಾಖಂಡ, ಹಿಮಾಚಲ ಪ್ರದೇಶ ಮತ್ತು ಸಿಕ್ಕಿಂನಲ್ಲಿ ನಿರ್ಮಾಣದ ಹಂತದಲ್ಲಿವೆ. ಅಲ್ಲೆಲ್ಲಾ ಭೂಕುಸಿತ ಮತ್ತು ಸುರಂಗ ಕುಸಿತದ ಅವಘಡಗಳು ಈಗಾಗಲೇ ಸಂಭವಿಸಿವೆ.

ಚಾರ್‌ಧಾಮ್ ಕಾರಿಡಾರ್‌ನಲ್ಲಿ 99.6 ಕಿ.ಮೀ.ನಷ್ಟು ಉದ್ದದ 14 ಸುರಂಗ ಮಾರ್ಗಗಳನ್ನು ನಿರ್ಮಿಸಲಾಗುತ್ತಿದೆ. ಇವುಗಳ ಬಗ್ಗೆಯೂ ಸ್ಥಳೀಯರು, ಪರಿಸರವಾದಿಗಳು ಆತಂಕ ವ್ಯಕ್ತಪಡಿಸಿದ್ದರು. ಇದರ ವಿರುದ್ಧ ಹಸಿರು ನ್ಯಾಯಮಂಡಳಿಗೆ ಸಲ್ಲಿಸಲಾಗಿದ್ದ ಅರ್ಜಿಯಲ್ಲೂ ವೈಜ್ಞಾನಿಕ ಅಧ್ಯಯನದ ವರದಿಯ ಅಂಶಗಳನ್ನು ಉಲ್ಲೇಖಿಸಲಾಗಿತ್ತು. ಇದರ ಅಧ್ಯಯನಕ್ಕಾಗಿ ಸುಪ್ರೀಂ ಕೋರ್ಟ್ ರಚಿಸಿದ್ದ ಉನ್ನತಮಟ್ಟದ ಸಮಿತಿಯ ಕೆಲ ಸದಸ್ಯರೂ ಇಲ್ಲಿನ ಅಸ್ಥಿರ ನೆಲದ ಬಗ್ಗೆ ತಮ್ಮ ವರದಿಯಲ್ಲಿ ಆತಂಕ ವ್ಯಕ್ತಪಡಿಸಿದ್ದರು. ಆದರೆ, ಹೆಚ್ಚು ಅಗಲವಾದ ರಸ್ತೆ ಬೇಕು ಎಂಬ ಸರ್ಕಾರದ ಪ್ರತಿಪಾದನೆಯನ್ನು ಒಪ್ಪಿದ್ದ ಸುಪ್ರೀಂ ಕೋರ್ಟ್ ಕಾಮಗಾರಿಗೆ ಹಸಿರು ನಿಶಾನೆ ತೋರಿತ್ತು. ಹೀಗಾಗಿ ಸುರಂಗ ಮಾರ್ಗಗಳನ್ನು ಒಳಗೊಂಡ, ಎರಡು ಪಥಗಳ ಸರ್ವ ಋತು ಹೆದ್ದಾರಿ ನಿರ್ಮಾಣ ಪ್ರಗತಿಯಲ್ಲಿದೆ. ಇದರ ಮಧ್ಯೆಯೇ ಆರು ತಿಂಗಳ ಅವಧಿಯಲ್ಲಿ ಎರಡು ಕಡೆ ಸುರಂಗಗಳು ಕುಸಿದು ಅವಘಡಗಳು ಸಂಭವಿಸಿವೆ.

## ಹಿಮಾಲಯ ಪ್ರದೇಶ ಅಸ್ಥಿರವೇಕೆ?



**ದುರ್ಬಲ ಕಲ್ಲು:** ಹಿಮಾಲಯದ ನೆಲ, ಪರ್ವತ ಮತ್ತು ಶಿಖರಗಳಲ್ಲಿ ಇರುವ ಕಲ್ಲುಗಳನ್ನು ಅತ್ಯಂತ ದುರ್ಬಲವಾದುದು ಎಂದು ಪರಿಗಣಿಸಲಾಗಿದೆ. ಒಂದು ಘನ ಮೀಟರ್‌ನಷ್ಟು ಕಲ್ಲನ್ನು ತೆಗೆದುಕೊಂಡರೆ, ಅದರಲ್ಲಿ ಹತ್ತಾರು ಬಿರುಕುಗಳು ಮತ್ತು ಜೋಡಣೆಗಳು ಇರುತ್ತವೆ. ಈ ಕಲ್ಲುಗಳ ಧಾರಣಾ ಸಾಮರ್ಥ್ಯ ಕಡಿಮೆ. ಹೀಗಾಗಿ ಈ ಕಲ್ಲುಗಳು ಸುಲಭವಾಗಿ ಮುರಿದು ಬೀಳುವ ಮತ್ತು ಒಡೆದುಹೋಗುವ ಅಪಾಯವಿರುತ್ತದೆ. ಈ ಕಾರಣದಿಂದಲೇ ಹೆಚ್ಚು ಭೂಕುಸಿತ ಸಂಭವಿಸುತ್ತದೆ

**ಸಡಿಲ ಮಣ್ಣು:** ಇಲ್ಲಿನ ಮಣ್ಣಿನಲ್ಲಿ ಒಡೆದ ಕಲ್ಲುಗಳ ಸಣ್ಣ ಹರಳುಗಳ ಪ್ರಮಾಣ ಹೆಚ್ಚು. ಮಣ್ಣಿನ ಕಣಗಳನ್ನು ಪರಸ್ಪರ ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವಂತಹ ರಚನೆ ಇಲ್ಲದ ಕಾರಣಕ್ಕೆ ಈ ಮಣ್ಣು ಬಹಳ ಸಡಿಲವಾಗಿರುತ್ತದೆ. ಈ ಕಾರಣದಿಂದಲೇ ಹೆಚ್ಚು ಭೂಕುಸಿತ ಸಂಭವಿಸುತ್ತದೆ

**ನೆಲದಡಿಯ ನೀರುಗಾಲುವೆಗಳು:** ಇಲ್ಲಿನ ಮಣ್ಣು ಬಹಳ ಸಡಿಲವಾಗಿರುವ ಕಾರಣದಿಂದ, ನೆಲದಡಿಯಲ್ಲೂ ನೀರು ಕಾಲುವೆಗಳಂತೆ ಹರಿಯುತ್ತವೆ. ನೀರಿನ ಅಪಾರ ಹರಿವಿನ ಕಾರಣದಿಂದ ಸವಕಳಿ ಉಂಟಾಗಿ, ನೆಲದ ಮೇಲ್ಮೈ ನೆಲದಾಳಕ್ಕೆ ಕುಸಿಯುತ್ತದೆ

## ಸುರಂಗ ಅಪಾಯಕಾರಿ?

- ಸದಾ ಭೂಮಿ ಕಂಪಿಸುವ ಕಾರಣದಿಂದ ಸುರಂಗದ ನೆಲದಡಿ ಸಡಿಲವಾಗುತ್ತದೆ. ಸುರಂಗದ ಆರ್‌ಸಿಸಿ ಸ್ಲ್ಯಾಬ್‌ಗಳು ಅತ್ತಿತ್ತ ಸರಿಯುವ ಕಾರಣ, ಅವು ದುರ್ಬಲವಾಗುವ ಸಾಧ್ಯತೆ ಇರುತ್ತದೆ. ಈ ಸ್ಲ್ಯಾಬ್‌ಗಳ ಮೇಲೆ ಮತ್ತು ಅಕ್ಕ–ಪಕ್ಕ ಬೀಳುವ ಒತ್ತಡ ಬದಲಾಗುವ ಕಾರಣ, ಅವು ಒಡೆಯುವ ಅಪಾಯವಿರುತ್ತದೆ
- ಈ ಪ್ರದೇಶದಲ್ಲಿ ಕೈಗೊಳ್ಳುತ್ತಿರುವ ಸುರಂಗ ನಿರ್ಮಾಣ ಯೋಜನೆಗಳಲ್ಲಿ, ಕೆಲವು ಸುರಂಗಗಳು ಪರ್ವತಗಳ ಮೇಲ್ಮೈನಿಂದ 1,000 ಮೀಟರ್‌ನಷ್ಟು ಆಳದಲ್ಲಿ ಸಾಗುತ್ತವೆ. ಪರ್ವತಗಳೇ ಅದುರುವ ಕಾರಣದಿಂದ, ಈ ಸುರಂಗದ ಮೇಲೆ ಬೀಳುವ ಭಾರದಲ್ಲೂ ಏರಿಳಿತವಾಗುತ್ತಿರುತ್ತದೆ. ಭೂಕುಸಿತದ ಕಾರಣದಿಂದ ಸುರಂಗದ ಮೇಲ್ಮೈನಲ್ಲಿನ ಭಾರ ಹೆಚ್ಚಾದರೆ, ಸುರಂಗಗಳು ಕುಸಿಯುವ ಅಪಾಯವಿರುತ್ತದೆ

## ಕೆಲವು ಅವಘಡಗಳು

**ಜೋಶಿಮಠ ಕುಸಿತ:** 2023ರ ಜನವರಿಯಲ್ಲಿ ಉತ್ತರಾಖಂಡದ ಜೋಶಿಮಠ ಪಟ್ಟಣವು ಭಾರಿ ಸುದ್ದಿಯಲ್ಲಿತ್ತು. ಕೆಲವೇ ವಾರಗಳಲ್ಲಿ ಜೋಶಿಮಠದ ಬಹುಭಾಗವು ಕೆಲವು ಇಂಚುಗಳಷ್ಟು ಕುಸಿದಿತ್ತು. ಪರ್ವತದ ಇಳಿಜಾರಿನಲ್ಲಿರುವ ಜೋಶಿಮಠವು, ಅಲಕನಂದಾ ನದಿ ಕಣಿವೆಯತ್ತ ಕುಸಿದಿತ್ತು.

ತಪೋವನ–ವಿಷ್ಣುಗಡ ಜಲವಿದ್ಯುತ್ ಯೋಜನೆಯ ಭಾಗವಾಗಿ ನಿರ್ಮಿಸಲಾಗುತ್ತಿರುವ 12 ಕಿ.ಮೀ. ಉದ್ದದ ಜಲ ಸುರಂಗವು ಜೋಶಿಮಠದ ಕೆಳಗೇ ಸಾಗುತ್ತದೆ. ಜೋಶಿಮಠ ಈಗ ಕುಸಿಯಲು ಈ ಸುರಂಗವೇ ಕಾರಣ ಎಂದು ಕೆಲವು ಅಧ್ಯಯನ ವರದಿಗಳು ಹೇಳುತ್ತವೆ

**ಚುಂಗ್ರಿ–ಬಡೇತಿ ಸುರಂಗ ದುರಂತ:** ಚಾರ್‌ಧಾಮ್ ಯೋಜನೆಯ ಭಾಗವಾಗಿ ಉತ್ತರಕಾಶಿಯ ಬಳಿ ನಿರ್ಮಿಸಲಾಗುತ್ತಿರುವ ಚುಂಗ್ರಿ–ಬಡೇತಿ ಸುರಂಗ ಮಾರ್ಗದಲ್ಲಿ ಭೂಕುಸಿತ ಸಂಭವಿಸಿತ್ತು. ಸುರಂಗ ಮಾರ್ಗವು ಸಾಗುವ ಪರ್ವತದ ಭಾಗವು ಇದೇ ಜುಲೈನಲ್ಲಿ ಕುಸಿದಿತ್ತು. ಸುರಂಗದಿಂದ ಕೆಲವೇ ಮೀಟರ್‌ಗಳಷ್ಟು ದೂರದಲ್ಲಿ ಈ ಕುಸಿತ ಸಂಭವಿಸಿತ್ತು. ಈ ಸುರಂಗ ಮಾರ್ಗವೂ ಸುರಕ್ಷಿತವಲ್ಲ ಎಂದು ಪರಿಸರವಾದಿಗಳು ಆತಂಕ ವ್ಯಕ್ತಪಡಿಸಿದ್ದರು. ಸುರಂಗ ಮಾರ್ಗದ ಸಮೀಪದ ಪರ್ವತದ ಇಳಿಜಾರಿನಲ್ಲಿ ಕಾಂಕ್ರೀಟ್ ತುಂಬಿಸಿ, ಅದನ್ನು ಬಲಪಡಿಸುವ ಕಾಮಗಾರಿ ನಡೆಸಲಾಗಿತ್ತು

ಆಧಾರ: ಪಿಟಿಐ, ಸುಪ್ರೀಂ ಕೋರ್ಟ್ ತೀರ್ಪು, ಟೊಲೆಡೊ ವಿಶ್ವವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿಗಳ ಅಧ್ಯಯನ ವರದಿ, ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗದ 'ಹಿಮಾಲಯದ ಸುರಂಗ ಹೆದ್ದಾರಿಗಳಲ್ಲಿ ಭೂಕಂಪನ ವಲಯಗಳು' ವರದಿ

## ಸಿನಿ ಬಿಟ್ಸ್

### ಹೊಸ ಧಾರಾವಾಹಿ 'ಗೌರಿಶಂಕರ'

**ಸ್ಟಾರ್ ಸುವರ್ಣ** ವಾಹಿನಿಯಲ್ಲಿ ಹೊಸ ಧಾರಾವಾಹಿ 'ಗೌರಿಶಂಕರ' ಸೋಮವಾರದಿಂದ ಪ್ರಸಾರವಾಗಲಿದೆ. ನಾಯಕನಾಗಿ ಯಶವಂತ್, ನಾಯಕಿಯಾಗಿ ಕೌಸ್ತುಭಮಣಿ ನಟಿಸುತ್ತಿದ್ದಾರೆ. 'ನನ್ನರಸಿ ರಾಧೆ' ಧಾರಾವಾಹಿಯಲ್ಲಿ ನಟಿಸಿದ್ದ ಕೌಸ್ತುಭಮಣಿ '45' ಚಿತ್ರದ ಮೂಲಕ ಹಿರಿತೆರೆಗೂ ಕಾಲಿಟ್ಟಿದ್ದರು.

'ಹಾಸನಾಂಬೆಯ ತವರೂರಾದ ಹಾಸನದಲ್ಲಿ ಈ ಕತೆಯು ಕೇಂದ್ರೀಕೃತವಾಗಿರುತ್ತದೆ. ಈ ಧಾರಾವಾಹಿಯ ನಾಯಕಿ 'ಗೌರಿ' ಯಾರನ್ನೂ ನೋಯಿಸದ ಮುಗ್ಧ ಮನಸ್ಸಿನ ಕಣ್ಮಣಿ. ಒಂದು ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದವಳು. ಆದರೆ ಸಮಯ ಬಂದಾಗ ತನ್ನ ನಿಲುವನ್ನು ಸ್ಪಷ್ಟವಾಗಿ ಹೇಳಬಲ್ಲ ಧೈರ್ಯವಂತೆ. ತಂದೆಯಂತೆ ತಾನೂ ಪ್ರೊಫೆಸರ್ ಆಗಬೇಕೆಂಬ ಕನಸನ್ನು ಹೊತ್ತಿರುವವಳು. ಕಥಾ ನಾಯಕ 'ಶಂಕರ' ಹೆಣ್ಣು ಮಕ್ಕಳು ನಾಲ್ಕುಗೋಡೆ ನಡುವೆ ಬದುಕಬೇಕು ಎಂದು ನಂಬಿರುವ ಮನೆತನದಲ್ಲಿ ಬೆಳೆದವ. ನೋಡಲು ಒರಟನಾದರೂ ಮಗುವಿನಂಥ ಮನಸ್ಸು. ಬೆಂಕಿ ಜೊತೆ ಬಿರುಗಾಳಿಯ ಹೊಸ ಪ್ರೇಮ ಕಥೆ ಈ ಧಾರಾವಾಹಿ' ಎಂದು ವಾಹಿನಿ ತಿಳಿಸಿದೆ.

'ಒಂದು ಕಡೆ ಶಾಂತಿ, ಸಹನೆ, ತಾಳ್ಮೆಯಿಂದ ಕೂಡಿದ ಗೌರಿ ಕುಟುಂಬ. ಮತ್ತೊಂದೆಡೆ ಅಧಿಕಾರ, ದರ್ಪ, ಹಣ ತುಂಬಿರುವ ಶಂಕರನ ಜಗತ್ತು. ಎರಡು ತದ್ವಿರುದ್ಧದ ಮನಸುಗಳು ಹೇಗೆ ಒಂದಾಗುತ್ತವೆ ಎಂಬ ಕುತೂಹಲ ಧಾರಾವಾಹಿಯುದ್ದಕ್ಕೂ ಇರಲಿದೆ' ಎಂದಿದೆ ಸ್ಟಾರ್ ಸುವರ್ಣ ವಾಹಿನಿ.

ವಿದ್ಯಾಮೂರ್ತಿ, ಮೋಹನ್, ಕೀರ್ತಿ ಭಾನು ಸೇರಿದಂತೆ ಇನ್ನು ಹಲವಾರು ಕಲಾವಿದರು ಅಭಿನಯಿಸುತ್ತಿದ್ದಾರೆ. ಇಂದಿನಿಂದ ರಾತ್ರಿ 7 ಗಂಟೆಗೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಧಾರಾವಾಹಿ ಪ್ರಸಾರಗೊಳ್ಳಲಿದೆ.



ಕೌಸ್ತುಭಮಣಿ

### ಥ್ರಿಲ್ಲರ್ ಜಗತ್ತಿನ 'ಕಣಂಜಾರು'

**ಈ ಹಿಂದೆ** 'ಮಹಾನುಭಾವರು' ಚಿತ್ರದಲ್ಲಿ ನಟಿಸಿದ್ದ ಆರ್. ಬಾಲಚಂದ್ರ ನಟಿಸಿ, ನಿರ್ದೇಶಿಸಿರುವ 'ಕಣಂಜಾರು' ಚಿತ್ರದ ಮೋಷನ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

''ಕಣಂಜಾರು' ಕಾರ್ಕಳ ಬಳಿಯ ಊರಿನ ಹೆಸರು. ಕಥೆ ಅಲ್ಲಿಯೇ ನಡೆಯುವುದರಿಂದ ಚಿತ್ರಕ್ಕೆ ಅದೇ ಶೀರ್ಷಿಕೆ ಇಡಲಾಗಿದೆ. ಕಾರ್ಕಳ, ಉಡುಪಿ, ಹೊನ್ನಾವರದಲ್ಲಿ 60 ದಿನಗಳ ಕಾಲ ಚಿತ್ರೀಕರಣ ಮಾಡಲಾಗಿದೆ. ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಶೀಘ್ರದಲ್ಲೇ ಬಿಡುಗಡೆ ದಿನಾಂಕ ಘೋಷಿಸುತ್ತೇವೆ'' ಎಂದರು ಆರ್.ಬಾಲಚಂದ್ರ.

ಆರ್‌ಪಿ ಫಿಲ್ಮ್ಸ್ ಅಡಿಯಲ್ಲಿ ನಾಯಕ ಬಾಲಚಂದ್ರ ಅವರೇ ಬಂಡವಾಳವನ್ನೂ ಹೂಡಿದ್ದಾರೆ. ಅಪೂರ್ವ, ಶರ್ಮಿತಾ ಗೌಡ, ಹಿರಿಯ ನಟ ರಾಮಕೃಷ್ಣ ಮೊದಲಾದವರು ಚಿತ್ರದಲ್ಲಿದ್ದಾರೆ. ಹರ್ಷವರ್ಧನ್ ರಾಜ್ ಸಂಗೀತ, ಶಶಾಂಕ್ ಶೇಷಗಿರಿ ಹಿನ್ನೆಲೆ ಸಂಗೀತ, ಮಂಜುನಾಥ್ ಹೆಗ್ಡೆ ಛಾಯಾಗ್ರಹಣ ಚಿತ್ರಕ್ಕಿದೆ.




ಆರ್.ಬಾಲಚಂದ್ರ, ಅಪೂರ್ವ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**'ಶೈಕ್ಷಣಿಕವಾಗಿ ನಾನು ಮುಸ್ಲಿಂ,** ಸಾಂಸ್ಕೃತಿಕವಾಗಿ ನಾನು ಕ್ರಿಶ್ಚಿಯನ್, ದುರಾದೃಷ್ಟವಶಾತ್ ನಾನು ಹಿಂದೂ' ಎಂದೂ ಜವಾಹರಲಾಲ್ ನೆಹರೂ ಅವರು ಹೇಳಿದ್ದರು ಎಂದು ಆರೋಪಿಸುವ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದರೊಂದಿಗೆ, 'ಶೈಕ್ಷಣಿಕವಾಗಿ ನಾನು ಕ್ರಿಶ್ಚಿಯನ್, ಸಾಂಸ್ಕೃತಿವಾಗಿ ನಾನು ಮುಸ್ಲಿಂ, ಹುಟ್ಟಿನ ಒಂದೇ ಕಾರಣಕ್ಕೆ ನಾನು ಹಿಂದೂ' ಎಂದು ನೆಹರೂ ಹೇಳಿದ್ದರು ಎಂದೂ ಪ್ರಚಾರವಾಗುತ್ತಲೇ ಇದೆ. 'ನಾನು ಇಂಗ್ಲಿಷ್ ಶಿಕ್ಷಣ ಪಡೆದವನು, ನಿಲುವುಗಳಲ್ಲಿ ಅಂತರರಾಷ್ಟ್ರೀಯವಾದಿ, ಸಂಸ್ಕೃತಿಯಲ್ಲಿ ಮುಸಲ್ಮಾನ, ಹುಟ್ಟಿನ ಒಂದೇ ಕಾರಣಕ್ಕೆ ನಾನು ಹಿಂದೂ: ನೆಹರೂ' ಎಂದು ಬಿಜೆಪಿ ಐಟಿ ಸೆಲ್‌ನ ಅಧ್ಯಕ್ಷ ಅಮಿತ್ ಮಾಳವೀಯ 2015ರಲ್ಲಿಯೇ ಟ್ವೀಟ್ ಮಾಡಿದ್ದಾರೆ. 'ನೆಹರೂ ಅವರು ತಮ್ಮ ಆತ್ಮಕಥೆಯಲ್ಲಿ ತಮ್ಮನ್ನು ತಾವು ಈ ರೀತಿ ಚಿತ್ರಿಸಿಕೊಂಡಿದ್ದಾರೆ. ನಾನು ಇಂಗ್ಲಿಷ್ ಶಿಕ್ಷಣ ಪಡೆದವನು, ನಿಲುವುಗಳಲ್ಲಿ ಅಂತರರಾಷ್ಟ್ರೀಯವಾದಿ, ಸಂಸ್ಕೃತಿಯಲ್ಲಿ ಮುಸಲ್ಮಾನ, ಹುಟ್ಟಿನ ಒಂದೇ ಕಾರಣಕ್ಕೆ ನಾನು ಹಿಂದೂ' ಎಂದು ನೆಹರೂ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ' ಎಂದು ಹಿಂದೂ ಮಹಾಸಭಾದ ನಾಯಕ ಎನ್.ಬಿ. ಖರೆ ಅವರು 'ದಿ ಆ್ಯಂಗ್ರಿ ಅರಿಸ್ಟೋಕ್ರಾಟ್'ನಲ್ಲಿ 1959ರಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ಬರೆದುಕೊಂಡಿದ್ದರು. ಆದರೆ, ಇವೆಲ್ಲವೂ ಸುಳ್ಳು ಮಾಹಿತಿ.





**ನೆಹರೂ ಅವರ** ಆತ್ಮಕಥೆಯಲ್ಲಿ ಎಲ್ಲಿಯೂ ಇಂಥ ಹೇಳಿಕೆ ದಾಖಲಾಗಿಲ್ಲ ಎಂದು 'ದಿ ಕ್ವಿಂಟ್', 'ಆಲ್ಟ್ ನ್ಯೂಸ್' ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

## ಗುಂಡಣ್ಣ




## ಇನ್ನೂ ಅತ್ಯುತ್ತಮವಾದದ್ದು ಹೊರಬರಲಿಕ್ಕಿದೆ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

**ಕನ್ನಡದ ಮೇರು ನಟ**, ಈ ನಾಡು ಕಂಡ ಅಪ್ರತಿಮ ಕಲಾವಿದ ರಾಜಕುಮಾರ್, ಸೌಜನ್ಯ ವಿನಯದ ಪ್ರತಿರೂಪ. 'ಏರಿದವನು ಚಿಕ್ಕವನಿರಬೇಕಲೆ' ಎಂಬ ಕವಿವಾಣಿಗೆ ಅವರ ವ್ಯಕ್ತಿತ್ವ ಜ್ವಲಂತ ಉದಾಹರಣೆ. ರಾಜಕುಮಾರ್ ಅವರಿಗೆ ಜನಪ್ರಿಯ ಟಿವಿ ವಾಹಿನಿಯೊಂದು 'ವರ್ಷದ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಆ ಸಂದರ್ಭದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿ, ರಾಜ್ ಅವರು ಆಡಿದ ನುಡಿಗಳು, ಯಾವುದೇ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬೇಕೆಂದಿರುವವರಿಗೆ ನಿಜಕ್ಕೂ ಮಾದರಿ ಹಾಗೂ ಪ್ರೇರಣಾದಾಯಕ.

'ನಿನ್ನಲ್ಲಿ ನೀನಾಗಬೇಕು ಎಂದು ನನ್ನ ತಂದೆಯವರು ಯಾವಾಗಲೂ ಹೇಳುತ್ತಿರುತ್ತಿದ್ದರು. ನಾನು ಇದುವರೆಗೂ ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಇದರಲ್ಲಿ ಯಾವ ಚಿತ್ರದ ಪಾತ್ರ ನನಗೆ ಸಂಪೂರ್ಣ ತೃಪ್ತಿ ಕೊಟ್ಟಿದೆ ಎಂದು ಕೇಳಿದರೆ ಯಾವುದೂ ಇಲ್ಲ ಎಂಬುದೇ ನನ್ನ ಉತ್ತರ. ಅದರಲ್ಲಿ ಒಂದು ಮಟ್ಟಿಗೆ ಸಮಾಧಾನ ತಂದು ಕೊಟ್ಟಿರುವ ಏಕೈಕ ಪಾತ್ರವೆಂದರೆ ಮಂತ್ರಾಲಯ ಮಹಾತ್ಮೆ ಚಿತ್ರದ ಗುರು ರಾಘವೇಂದ್ರ ಸ್ವಾಮಿಗಳ ಪಾತ್ರ. ನನ್ನ ಈ ಚಿತ್ರವನ್ನು ಮಾತ್ರ ನೋಡಿ ಎಂದು ಬೇರೆಯವರಿಗೆ ಹೇಳಿದ್ದೇನೆ. ಇತ್ತೀಚೆಗೆ ದೂರದರ್ಶನದಲ್ಲಿ ನಾನು ಅಭಿನಯಿಸಿದ ಚಿತ್ರಗಳನ್ನು ಹಾಕುತ್ತಿರುತ್ತಾರೆ. ಅವುಗಳನ್ನು ನೋಡುತ್ತಿರುವಾಗ ಅದರಲ್ಲಿ ನಾನು ಮಾಡಿದ ಪಾತ್ರಗಳಲ್ಲಿ ದೋಷಗಳೇ ಹೆಚ್ಚಾಗಿ ನನಗೆ ಕಾಣಿಸುತ್ತವೆ. ಹೀಗಾಗಿ ನನಗೇ ನಾಚಿಕೆಯಾಗಿ ಅರ್ಧಕ್ಕೇ ಸಿನಿಮಾ ನೋಡೋದನ್ನು ನಿಲ್ಲಿಸಿ ಒಳಗೆ ಹೋಗಿ ಬಿಡುತ್ತೇನೆ. ಆ ಪಾತ್ರಗಳಲ್ಲಿ ಇನ್ನಷ್ಟು ಒಳಹೊಕ್ಕು ಇನ್ನೂ ಚೆನ್ನಾಗಿ ಮಾಡಬಹುದಿತ್ತಲ್ಲಾ ಎಂಬ ಭಾವ ನನ್ನನ್ನು ಸದಾ ಕಾಡುತ್ತದೆ' ಎಂಬ ಅವರ ಮನದಾಳದಿಂದ ಮೂಡಿಬಂದ ಮಾತುಗಳು ಬಹಳ ದೊಡ್ಡ ಸಂದೇಶವನ್ನು ಹೊಂದಿದೆ.

ನಾವು ಮಾಡುತ್ತಿರುವ ಕೆಲಸದಲ್ಲಿ ನಾವೆಲ್ಲವನ್ನೂ ಸಾಧಿಸಿ ಬಿಟ್ಟಿದ್ದೇವೆ, ಅದೇ ಸರ್ವಶ್ರೇಷ್ಠ ಎಂಬ ಭಾವನೆ ಮೂಡಿದರೆ ನಮ್ಮ ಕಾಯಕ ನಿಂತ ನೀರಾಗಿ ಬಿಡುತ್ತದೆ. Best is yet to come ಅಂದರೆ ಇನ್ನೂ ಅತ್ಯುತ್ತಮವಾದದ್ದು ನಮ್ಮಿಂದ ಹೊರಬರಲಿಕ್ಕಿದೆ ಎಂಬ ಭಾವವೇ ಯಾವುದೇ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಯನ್ನು ಸಾಧಕನನ್ನಾಗಿಸಬಲ್ಲದು.

ನಮ್ಮ ದೇಶದ ಇನ್ನೊಬ್ಬ ಅತ್ಯಂತ ಶ್ರೇಷ್ಠ ನಟ ಕಮಲ್ ಹಾಸನ್ ರವರು 'ನಮ್ಮ ದೇಶದಲ್ಲಿರುವ ನಿಜವಾದ ನಟನೆಂದರೆ ರಾಜಕುಮಾರ್ ಮಾತ್ರ' ಎಂದಿದ್ದರು. ನಾವು ಮಾಡಿದ್ದೆ ಅತ್ಯುತ್ತಮ ಎಂಬಂತೆ ಅಹಂಕಾರದಿಂದ ವರ್ತಿಸುವ ಹಲವಾರು 'ಸೆಲೆಬ್ರಿಟಿ'ಗಳನ್ನು ನಾವು ಇಂದು ಬೇರೆ ಬೇರೆ ಕ್ಷೇತ್ರಗಳಲ್ಲಿ ನೋಡುತ್ತೇವೆ. ತಮ್ಮಂತೆ ಬೇರೆ ಯಾರೂ ಈ ಜಗತ್ತಿನಲ್ಲಿ ಇಲ್ಲ ಎಂಬಂತೆ ವರ್ತಿಸುವ ಇಂತಹ ಮಂದಿಯ ಮಧ್ಯೆ ಡಾ. ರಾಜ್ ಇಂದಿಗೂ ಧ್ರುವ ತಾರೆಯಂತೆ ಹೊಳೆಯುತ್ತಾರೆ. ಯಾವುದೇ ಹಂತಕ್ಕೆ ಏರಿದರೂ ನಾನು ಮಾಡುವ ಕಾಯಕವನ್ನು ಇನ್ನಷ್ಟು ಚೆನ್ನಾಗಿ ಮಾಡಬೇಕೆಂಬ ಹಂಬಲವೇ ಸಾಧಾರಣರನ್ನೂ ಸಾಧಕರನ್ನಾಗಿಸುತ್ತದೆ. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ನವೆಂಬರ್ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಅಮಾವಾಸ್ಯೆ ಗಂ. 14-57 ನಕ್ಷತ್ರ: ವಿಶಾಖಾ ಗಂ. 27-23 ಯೋಗ: ಸೌಭಾಗ್ಯ ಗಂ 15-23 ಕರಣ: ನಾಗ ಗಂ. 14-57, ತುಲಾ ಮಾಸದ 27 ನೇ ದಿನ, ಮಳೆನಕ್ಷತ್ರ: ವಿಶಾಖ 2.
**ರಾಹುಕಾಲ:** ಬೆಳಿಗ್ಗೆ 07-30 - 09-00
**ಸೂರ್ಯೋದಯ:** 06-32 ಸೂರ್ಯಾಸ್ತ : 05-57
**ಮುಸ್ಲಿಂ ದಿನಾಂಕ:** 28 ರಬಿಯುಸ್ಸಾನಿ ದಿನ ವಿಶೇಷ : ಕೇದಾರ ಗೌರಿ ವ್ರತ, ಗೋ ಪೂಜಾ, ಗೋವರ್ಧನ ಪೂಜಾ ಅದೃಷ್ಟ ಸಂಖ್ಯೆ : 7, 2

**ಮೇಷ:** ಕಾರ್ಯರಂಗದಲ್ಲಿ ನಿಮ್ಮ ಧೈರ್ಯ, ಪ್ರಯತ್ನ ಬಲ, ಆತ್ಮವಿಶ್ವಾಸದ ಪ್ರವೃತ್ತಿಯಿಂದಾಗಿ ಅಭಿವೃದ್ಧಿ ಹೊಂದಿದರೂ ಜನರ ಕೆಟ್ಟ ದೃಷ್ಟಿಗೆ ಸಿಲುಕಿಕೊಳ್ಳಬೇಕಾಗುತ್ತದೆ. ಮಾನಸಿಕ ವೇದನೆಯಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು.

**ವೃಷಭ:** ಕೌಟುಂಬಿಕವಾದ ಗೋಪ್ಯತೆ ವಿಚಾರ ನಿಮ್ಮಿಂದ ಇನ್ನೊಬ್ಬರಿಗೆ ತಿಳಿಯದಂತೆ ಜಾಗ್ರತೆ ವಹಿಸಬೇಕು. ಮನೆಗೆ ಮಕ್ಕಳು ಬರುವುದರಿಂದ ಹಬ್ಬದ ಸಡಗರ ದ್ವಿಗುಣಗೊಳ್ಳಲಿದೆ. ಸಿಹಿ ತಿಂಡಿ ಸೇವನೆಗೆ ಕಡಿವಾಣ ಹಾಕಿ.

**ಮಿಥುನ:** ಸ್ವತಂತ್ರ ವೃತ್ತಿಯವರಿಗೆ ಆದಾಯ ಬಂದರೂ ಖರ್ಚು-ವೆಚ್ಚಗಳಲ್ಲಿ ಜಾಗ್ರತೆ ಇರಬೇಕು. ಉದ್ಯೋಗದ ವಿಸ್ತರಣೆಯ ಉತ್ತಮ ಆಲೋಚನೆಗಳು ಗರಿಗೆದರಲಿವೆ. ಉದ್ಯೋಗ ಸ್ಥಳದಲ್ಲಿ ಹೊಂದಾಣಿಕೆ ಕೊರತೆ ಕಾಣಲಿದೆ.

**ಕರ್ಕಾಟಕ:** ವಿದೇಶಿ ವ್ಯವಹಾರಗಳು ಲಾಭದಾಯಕವಾಗಿರುತ್ತವೆ. ವಿದೇಶ ಯಾನ ಮಾಡುವ ಪರಿಸ್ಥಿತಿ ಬರಬಹುದು. ಬಂಧುಗಳೊಂದಿಗೆ ಮನಸ್ತಾಪ ಉಂಟಾಗಬಹುದು. ಆರೋಗ್ಯದ ಕಾಳಜಿ ಇರಲಿ.

**ಸಿಂಹ:** ಪ್ರತಿ ವರ್ಷ ಮಾಡಿಕೊಂಡು ಬಂದ ಧಾರ್ಮಿಕ ಕೆಲಸ ಮಾಡುವ ಬಗ್ಗೆ ತೀರ್ಮಾನಿಸುವುದರಿಂದ ಧರ್ಮ ಕಾರ್ಯದಲ್ಲಿ ಆಸಕ್ತಿ ಮೂಡುವುದು. ನೀವು ಇಂದು ಆಡಿದ ಮಾತುಗಳು ನಿಮಗೆ ಮುಳ್ಳಾಗುವ ಸಾಧ್ಯತೆ ಇದೆ.

**ಕನ್ಯಾ:** ಸಾಂಕ್ರಾಮಿಕ ರೋಗದಂತಹ ಅನಾರೋಗ್ಯ ನಿಮ್ಮನ್ನು ಬಾಧಿಸುವುದು. ಹೊಸ ವ್ಯಾಪಾರ ಅಥವಾ ಏಜೆನ್ಸಿ ಪ್ರಾರಂಭಿಸುವ ಯೋಚನೆ ಇರುವವರಿಗೆ ಪೂರ್ವ ತಯಾರಿ ನಡೆಸಲು ಸೂಕ್ತ ವ್ಯಕ್ತಿಗಳ ಮಾರ್ಗದರ್ಶನ ಸಿಗುವುದು.

**ತುಲಾ:** ವಾಸಸ್ಥಾನ ಬದಲಾವಣೆಯಿಂದ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಇಂದಿನ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯವಾಗುವುದು. ಮಕ್ಕಳಿಂದ ಸಂತೋಷ ನೆಮ್ಮದಿ ಇರಲಿದೆ.

**ವೃಶ್ಚಿಕ:** ಶ್ರೇಯಸ್ಸು ನಿಮ್ಮನ್ನು ಹುಡುಕಿಕೊಂಡು ಬರಲಿದ್ದು, ನಾಳೆಯ ಕಾರ್ಯಕ್ರಮಗಳಿಗೆ ಇಂದಿನಿಂದಲೇ ತಯಾರಿ ನಡೆಸಿ. ಸಾಲದ ಹಣ ಹಿಂದುರುಗಿಸುವ ಬಗ್ಗೆ ಗಮನವಿರಲಿ.

**ಧನು:** ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯ ವ್ಯವಹಾರಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ನಿಮ್ಮ ಕೆಲಸದಲ್ಲಿ ಹೊಸ ಅಭ್ಯಾಸದಿಂದ ಹೊಸ ಪರಿವರ್ತನೆ ಕಾಣುವಿರಿ.

**ಮಕರ:** ನಿಮ್ಮ ಸಮಯವನ್ನು ಇನ್ನೊಬ್ಬರಿಗಾಗಿ ಬಳಸಬೇಕಾದ ಪರಿಸ್ಥಿತಿ ಎದುರಾಗಲಿದೆ. ಹೀಗಾಗಿ ನಿಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ವೇಗವಾಗಿ ಮಾಡಬೇಕಾಗಲಿದೆ. ಪರಿವರ್ತನೆಗೆ ಸಕಾಲ.


**ಕುಂಭ:** ವಾಹನ ಮಾರಾಟದ ಯೋಚನೆಯನ್ನು ಸದ್ಯದ ಮಟ್ಟಿಗೆ ಕೈಬಿಡುವುದೇ ಸರಿ. ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಬಹಳ ದೊಡ್ಡ ಹೊಡೆತ ಬೀಳುವ ಸಂಭವವಿದೆ.

**ಮೀನ:** ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳು ಈ ದಿನ ನಡೆಸಬೇಕಿದ್ದರೆ, ಗಣಪತಿಯ ಸೇವೆ ಅಥವಾ ದರ್ಶನದ ನಂತರದಲ್ಲಿ ಕೈಗೊಳ್ಳುವುದು ಉತ್ತಮ. ಬಂಧುಗಳಿಂದ ದ್ರವ್ಯಲಾಭವಾಗುವುದು.

## ಪದಬಂಧ 5499 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
3.ಈತ ಗೆಲುವನ್ನು ಪಡೆದವನು (4)
5.ನಗ ತರಲು ಕೈಯಲ್ಲಿ ಇರುವ ಹಣ (3)
6.ತಾಯಿಯ ಮನೆ ಕಿಟಕಿ (4)
8.ಗರದಲ್ಲಿರುವ ಅನ್ಯಮಾರ್ಗವು ಈ ತರ ಕಾಣುತ್ತಿದೆ (4)
12.ನಡುವೆ ಕೈಯಿಟ್ಟಾಗ ಕಂಡ ಘಟನೆ (4)
14.ವಾದಕ್ಕೆ ಗ್ರಾಸವಾದ ತರ್ಜುಮೆ (4)
15.ಮನದಿಂದ ಮಾಡಿಕೊಂಡ ಅರಿಕೆ (3)
16.ಮಾನ ಹೊಂದಿದ ವಸ್ತುಸ್ಥಿತಿ (4)

**ಮೇಲಿನಿಂದ ಕೆಳಕ್ಕೆ**
1.ಮಂದಿಯ ಆದರಣೆ (5)
2.ಈತ ಲಗ್ನವಾಗುತ್ತಿರುವವ (4)
3.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
4.ಅಸಲಿಯ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (3)
7.ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡವನು (2)
9.ಕೆರೆಯನ್ನು ಹೀಗೂ ಹೇಳುವರು (3)
10.ವಿದ್ಯಾವಂತನಲ್ಲದವ ಉಲ್ಟಾ ನಿಂತಿಹನಲ್ಲಾ? (5)
11.ಸೂರ್ಯನ ಇನ್ನೊಂದು ಹೆಸರು (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13.ಹೂವಿನ ಶರವಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (4)
14.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)




### 5498ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**
1.ಹಸುಗೂಸು 3.ಜನಿವಾರ
5.ಮದನ 6.ಕನಕ
8.ಛನ 11.ಕರ
13.ಪುಕಾರು 15.ಮಾಮರ
16.ಕಾರ್ಮುಗಿಲು
17ಪಕ್ಷಪಾತ

**ಮೇಲಿಂದ ಕೆಳಕ್ಕೆ**
1.ಹರತಾಳ 2.ಸುಮಬಾಣ
3.ಜನಕ 7ಕನ್ನಡಕ
9.ನರುಗಂಪು 10.ಯಕೀರಪ
12 ರವಿಸುತ 14.ರುಮಾಲು

## ಸುಡೊಕು 5885

| | | | | | | | | |
|---|---|---|---|---|---|---|---|---|
| 9 | 6 | | 8 | | | | 1 | |
| 2 | | | | | | | 7 | |
| | | 4 | 9 | | 2 | 8 | 3 | 6 |
| 3 | | 6 | | | | 5 | | 9 |
| | 7 | | 3 | 2 | 4 | | | |
| | | 1 | | | | 3 | | 7 |
| 4 | | | 6 | | 1 | | 9 | |
| | 3 | | | | 5 | | | |
| 6 | | 8 | 2 | | | | 5 | |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ಇದೇ ನಿಯಮ ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನು ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

### 5884 ಸುಡೊಕು

| | | | | | | | | |
|---|---|---|---|---|---|---|---|---|
| 3 | 9 | 8 | 2 | 7 | 5 | 4 | 6 | 1 |
| 2 | 7 | 6 | 4 | 3 | 1 | 8 | 9 | 5 |
| 1 | 4 | 5 | 6 | 8 | 9 | 7 | 3 | 2 |
| 4 | 6 | 3 | 9 | 1 | 7 | 5 | 2 | 8 |
| 9 | 5 | 2 | 3 | 4 | 8 | 1 | 7 | 6 |
| 8 | 1 | 7 | 5 | 2 | 6 | 3 | 4 | 9 |
| 5 | 3 | 4 | 8 | 6 | 2 | 9 | 1 | 7 |
| 7 | 2 | 9 | 1 | 5 | 4 | 6 | 8 | 3 |
| 6 | 8 | 1 | 7 | 9 | 3 | 2 | 5 | 4 |

ಬಿ.ಎಸ್‌. ಯಡಿಯೂರಪ್ಪ ಬಗ್ಗೆ ಅತೃಪ್ತಿ ಹೊಂದಿರುವ ನಾಯಕರ ಭೇಟಿಗೆ ತೀರ್ಮಾನ

# ವಲಸೆ ತಡೆಗೆ ವಿಜಯೇಂದ್ರ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ಬಿಟ್ಟು ಕಾಂಗ್ರೆಸ್ ಕಡೆಗೆ ವಲಸೆ ಹೊರಟಿರುವವರನ್ನು ತಡೆಯುವ ಪ್ರಯತ್ನಕ್ಕೆ ಪಕ್ಷದ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕೈ ಹಾಕಿದ್ದಾರೆ. ಸುಮಾರು 25 ರಿಂದ 30 ಮಂದಿ ಮಾಜಿ ಮತ್ತು ಹಾಲಿ ಶಾಸಕರು ಹಾಗೂ ಇತರ ನಾಯಕರನ್ನು ಸಂಪರ್ಕಿಸಿ ಅವರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ಕಾರ್ಯತಂತ್ರ ಆರಂಭಿಸಿದ್ದಾರೆ.

ಕಾಂಗ್ರೆಸ್‌ನಿಂದ ಜಗದೀಶ ಶೆಟ್ಟರ್ ಮೂಲಕ ನಾಯಕರನ್ನು ಸೆಳೆದು ಬಿಜೆಪಿ ಬಲವನ್ನು ಕುಗ್ಗಿಸುವ ಪ್ರಯತ್ನ ಭರ್ಜರಿಯಾಗಿಯೇ ನಡೆದಿತ್ತು. ಈ ಮೂಲಕ ಲೋಕಸಭೆ ಚುನಾವಣೆಗೂ ಮೊದಲೇ ಬಿಜೆಪಿಗೆ ಪ್ರಬಲ ಹೊಡೆತ ನೀಡಲು ಕಾಂಗ್ರೆಸ್ ತಯಾರಿ ನಡೆಸಿತ್ತು.

ಎಂ.ಪಿ. ರೇಣುಕಾಚಾರ್ಯ, ಶಂಕರ ಪಾಟೀಲ ಮುನೇನಕೊಪ್ಪ ಸೇರಿದಂತೆ ಬಿಜೆಪಿ ಮೂಲದ ನಾಯಕರಿಗೆ ಕಾಂಗ್ರೆಸ್ ಗಾಳ ಹಾಕಿತ್ತು. ಅಧ್ಯಕ್ಷ ಸ್ಥಾನಕ್ಕೆ ವಿಜಯೇಂದ್ರ ಅವರ ಹೆಸರು ಘೋಷಣೆ ಆಗುತ್ತಿದ್ದಂತೆ, ರೇಣುಕಾಚಾರ್ಯ ಅವರು ಯಡಿಯೂರಪ್ಪ ಮನೆಯ ಪಡಸಾಲೆಯಲ್ಲಿ ಕಾಣಿಸಿಕೊಂಡರು. ಇದಕ್ಕೂ ಮೊದಲು ಇವರು ಕಾಂಗ್ರೆಸ್‌ನತ್ತ ಒಂದು ಹೆಜ್ಜೆ ಇಟ್ಟಿದ್ದೂ ಅಲ್ಲದೇ, ಪಕ್ಷದ ಹಲವು ನಾಯಕರ ಬಗ್ಗೆ ಆಗಿಂದಾಗ್ಗೆ ಅಸಮಾಧಾನ ತೋಡಿಕೊಂಡಿದ್ದರು.

ಪಕ್ಷದಲ್ಲಿ ಅಸಮಾಧಾನಗೊಂಡು ಕಾಂಗ್ರೆಸ್‌ನತ್ತ ಮುಖ ಮಾಡಿರುವವರನ್ನು ವಿಜಯೇಂದ್ರ ಅವರು ಶನಿವಾರವೇ ಸಂಪರ್ಕಿಸಿ, 'ಯಾವುದೇ ಕಾರಣಕ್ಕೂ ಪಕ್ಷ ಬಿಡುವ ನಿರ್ಧಾರ ತೆಗೆದುಕೊಳ್ಳಬಾರದು. ಯಾವುದೇ ಅನ್ಯಾಯ ಆಗಿದ್ದರೆ ಸರಿಪಡಿಸುತ್ತೇವೆ' ಎಂಬ ಭರವಸೆ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವಿಜಯೇಂದ್ರ ಅವರು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡಿದ್ದಾರೆ. ಕಾಂಗ್ರೆಸ್ ಸೇರಲು ತುದಿಗಾಲಿನಲ್ಲಿ ನಿಂತಿರುವ ಶಾಸಕ ಎಸ್‌.ಟಿ. ಸೋಮಶೇಖರ್ ಅವರನ್ನು ಇನ್ನೂ ಸಂಪರ್ಕಿಸಿಲ್ಲ. ಪಕ್ಷ ಬಿಡುವ ಬಗ್ಗೆ ಚಿಂತನೆ ನಡೆಸಿರುವ ನಾಯಕರನ್ನು ಸಂಪರ್ಕಿಸಿ ಮಾತನಾಡುವ ಕೆಲಸವನ್ನು ವಿಜಯೇಂದ್ರ ಅವರು ರೇಣುಕಾಚಾರ್ಯ ಅವರಿಗೆ ಒಪ್ಪಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಗೊಂದಲದಲ್ಲಿದ್ದ ಹಲವು ನಾಯಕರು ಈ ಪ್ರಯತ್ನದ ಫಲವಾಗಿ ಪಕ್ಷ ತೊರೆಯುವ ವಿಚಾರವನ್ನು ಸದ್ಯಕ್ಕೆ ಬದಿಗಿರಿಸಿದ್ದಾರೆ. ಈ ಪ್ರಯತ್ನ ಮುಂದುವರೆಯಲಿದೆ ಎಂದು ವಿಜಯೇಂದ್ರ ಅವರ ಆಪ್ತ ಮೂಲಗಳು ತಿಳಿಸಿವೆ.

**ಅತೃಪ್ತ ಹಿರಿಯರ ಭೇಟಿ:** ತಮ್ಮ ಮತ್ತು ತಮ್ಮ ತಂದೆ ಬಿ.ಎಸ್. ಯಡಿಯೂರಪ್ಪ ಅವರ ಬಗ್ಗೆ ಅತೃಪ್ತಿ ಹೊಂದಿರುವ ನಾಯಕರನ್ನು ಭೇಟಿ ಮಾಡಿ ಒಗ್ಗಟ್ಟಿನಿಂದ ಪಕ್ಷವನ್ನು ಮುನ್ನಡೆಸಲು ಸಹಕಾರ ಕೋರಲು ತೀರ್ಮಾನಿಸಿದ್ದಾರೆ. ಬಸನಗೌಡ ಪಾಟೀಲ ಯತ್ನಾಳ, ಸಿ.ಟಿ. ರವಿ, ಕೆ.ಎಸ್. ಈಶ್ವರಪ್ಪ, ವಿ. ಸೋಮಣ್ಣ ಸೇರಿದಂತೆ ಹಲವು ಹಿರಿಯರನ್ನು ಭೇಟಿ ಮಾಡಿ ಚರ್ಚಿಸಲು ವಿಜಯೇಂದ್ರ ಚಿಂತನೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಪಕ್ಷದ ಎಲ್ಲ ಹಿರಿಯರನ್ನು ಭೇಟಿ ಮಾಡಲಿದ್ದು, ತಮ್ಮ ಮೇಲೆ ಪಕ್ಷದ ವರಿಷ್ಠರು ಹೊರಿಸಿರುವ ಹೊಣೆಗಾರಿಕೆ ಈಡೇರಿಸಿ ಕೇಂದ್ರದಲ್ಲಿ ಮತ್ತೆ ಮೋದಿ ನೇತೃತ್ವದಲ್ಲಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಶ್ರಮಿಸುವುದು ಅಗತ್ಯ. ಎಲ್ಲರೂ ಕೈಜೋಡಿಸಿ ಈ ಕೆಲಸ ಮಾಡಬೇಕು ಎಂಬುದಾಗಿ ಮನವಿ ಮಾಡಲಿದ್ದಾರೆ. ಈ ಮೂಲಕ ತಮಗೆ ಪಕ್ಷದ ಕೆಲಸ ಮಾಡಲು ಮಾರ್ಗದರ್ಶನ ನೀಡಬೇಕು ಎಂದು ಅವರು ಕೋರಲಿದ್ದಾರೆ. ಈ ನಡೆಯ ಮೂಲಕ ಆರಂಭದಲ್ಲೇ ಅತೃಪ್ತಿಯನ್ನು ಶಮನಗೊಳಿಸುವ ಕಾರ್ಯಕ್ಕೆ ಕೈಹಾಕಲಿದ್ದಾರೆ ಎಂಬ ಸುಳಿವು ನೀಡಿದ್ದಾರೆ.

### 'ಯುವ ನಾಯಕತ್ವಕ್ಕೆ ಅವಕಾಶ'

**ಹುಬ್ಬಳ್ಳಿ:** 'ಜಾತಿ ಕಾರಣಕ್ಕೆ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಿಲ್ಲ. ಯುವ ನಾಯಕತ್ವಕ್ಕೆ ಅವಕಾಶ ನೀಡಲು, ಹೊಸ ಹುರುಪಿನಿಂದ ಪಕ್ಷ ಸಂಘಟನೆ ಮಾಡಲು ರಾಷ್ಟ್ರೀಯ ನಾಯಕರು ಸೂಕ್ತ ನಿರ್ಧಾರ ತೆಗೆದುಕೊಂಡಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ, ಸಚಿವರ ಪುತ್ರ ರಾಜಕಾರಣಕ್ಕೆ ಬರಬಾರದು ಎಂದು ಬಿಜೆಪಿಯಲ್ಲಿ ಎಲ್ಲಿಯೂ ಹೇಳಿಲ್ಲ. ಪಕ್ಷವನ್ನು ಕುಟುಂಬದ ಹಿಡಿತದಲ್ಲಿಟ್ಟು-ಕೊಳ್ಳುವುದು ವಂಶಪಾರಂಪರ್ಯ ಆಡಳಿತ. ಬಿಜೆಪಿಯಲ್ಲಿ ಎಂದೂ ಆ ರೀತಿ ಆಗಿಲ್ಲ' ಎಂದರು.

'ವಿಜಯೇಂದ್ರಗೆ ತನ್ನದೇ ಆದ ವ್ಯಕ್ತಿತ್ವ ಇದೆ. ಅವರು ಯುವ ಮೋರ್ಚಾ ಅಧ್ಯಕ್ಷರಾಗಿ, ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ಎಲ್ಲ ನಾಯಕರು ಸೇರಿ ಅವರಿಗೆ ಸಂಪೂರ್ಣ ಸಹಕಾರ ನೀಡಿ ಪಕ್ಷವನ್ನು ಬಲಪಡಿಸುತ್ತೇವೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 25ಕ್ಕಿಂತ ಹೆಚ್ಚು ಸೀಟು ಗೆಲ್ಲುತ್ತೇವೆ' ಎಂದರು.

### 15ರಂದು ಅಧಿಕಾರ ಸ್ವೀಕಾರ

**ತುಮಕೂರು:** 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿ ನ.15ರಂದು ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸುತ್ತೇನೆ. 16ರಂದು ಅರಮನೆ ಮೈದಾನದಲ್ಲಿ ಕಾರ್ಯಕರ್ತರ ಸಭೆ ಕೂಡ ಆಯೋಜಿಸಲಾಗಿದೆ' ಎಂದು ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದರು.

ನಗರದ ಸಿದ್ಧಗಂಗಾ ಮಠಕ್ಕೆ ಭಾನುವಾರ ಭೇಟಿ ನೀಡಿ ಶಿವಕುಮಾರ ಸ್ವಾಮೀಜಿಯ ಗದ್ದುಗೆ ದರ್ಶನ ಪಡೆದ ನಂತರ ಸುದ್ದಿಗಾರರ ಜತೆ ಮಾತನಾಡಿದರು.

'ಪಕ್ಷದ ಎಲ್ಲ ಹಿರಿಯರ ಸಮ್ಮುಖದಲ್ಲಿ ಜವಾಬ್ದಾರಿ ಸ್ವೀಕರಿಸಲಾಗುವುದು. ಐದು ರಾಜ್ಯಗಳ ಚುನಾವಣೆ ಇರುವುದರಿಂದ ರಾಷ್ಟ್ರೀಯ ನಾಯಕರು ಕಾರ್ಯಕ್ರಮಕ್ಕೆ ಬರುವುದಿಲ್ಲ. ನ.16 ಅಥವಾ 17ರಂದು ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಈ ಸಂದರ್ಭದಲ್ಲಿ ಕೇಂದ್ರದ ವೀಕ್ಷಕರು ಬರುವ ಸಾಧ್ಯತೆ ಇದೆ. ರೈತರಿಗೆ ಬರ ಪರಿಹಾರ ಕೊಡಿಸುವುದು ನನ್ನ ಮೊದಲ ಆದ್ಯತೆಯಾಗಿದೆ' ಎಂದರು.

### 'ಬಿಜೆಪಿಯವರೇ ವಿಪಕ್ಷದ ನಾಯಕರಾಗಲಿದ್ದಾರೆ'

**ವಿಜಯಪುರ:** 'ಬಿಜೆಪಿಯವರೇ ವಿರೋಧ ಪಕ್ಷದ ನಾಯಕ ಆಗುತ್ತಾರೆ. ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿರುವುದು ಲೋಕಸಭೆ ಚುನಾವಣೆಗೆ ಸೀಮಿತ. ವಿರೋಧ ಪಕ್ಷದ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟು ಕೊಡಲು ಬರುವುದಿಲ್ಲ' ಎಂದು ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಬಿಜೆಪಿಯವರೇ ಶೀಘ್ರದಲ್ಲೇ ವಿರೋಧ ಪಕ್ಷದ ನಾಯಕರಾಗಲಿದ್ದು, ಸಮರ್ಥ ವಿರೋಧ ಪಕ್ಷವಾಗಿ ಬಿಜೆಪಿ ಕೆಲಸ ಮಾಡಲಿದೆ' ಎಂದರು.

## ಸುದ್ದಿ 2 ನಿಮಿಷ

### ವಿಜಯಪುರದಲ್ಲಿ ಕಡಿಮೆ ತಾಪಮಾನ ದಾಖಲು

**ಬೆಂಗಳೂರು:** ರಾಜ್ಯದಲ್ಲಿ ಭಾನುವಾರ ಅತ್ಯಂತ ಕಡಿಮೆ ತಾಪಮಾನ ವಿಜಯಪುರ ಜಿಲ್ಲೆಯಲ್ಲಿ 15 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉಳಿದಂತೆ, ಮಲೆನಾಡು ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ರಾತ್ರಿ ಹಾಗೂ ಮುಂಜಾನೆಯಲ್ಲಿ ಚಳಿ ಅನುಭವ ಉಂಟಾಗುತ್ತಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಒಣಹವೆ ಮುಂದುವರಿದಿತ್ತು.

ಬೆಂಗಳೂರಿನಲ್ಲಿ ಸೋಮವಾರ ಮತ್ತು ಮಂಗಳವಾರ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

### ಇನ್‌ಸ್ಪೆಕ್ಟರ್‌ಗೆ ತರಾಟೆ ತೆಗೆದುಕೊಂಡ ಪ್ರಲ್ಹಾದ ಜೋಶಿ



**ಹುಬ್ಬಳ್ಳಿ:** ಯುವಕನನ್ನು ಠಾಣೆಗೆ ಕರೆಸಿ ಥಳಿಸಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಧಾರವಾಡ ಶಹರ ಠಾಣೆ ಇನ್‌ಸ್ಪೆಕ್ಟರ್ ಎನ್.ಸಿ.ಕಾಡದೇವರಮಠ ಅವರನ್ನು ಭಾನುವಾರ ತಮ್ಮ ನಿವಾಸದಲ್ಲಿ ತರಾಟೆಗೆ ತೆಗೆದುಕೊಂಡರು.

ಕೆಲ ದಿನಗಳ ಹಿಂದೆ, ಇಸ್ಪೀಟ್ ಆಡುತ್ತಿದ್ದ ಆರೋಪದ ಮೇಲೆ ಧಾರವಾಡದ ಗೊಲ್ಲರ ಓಣಿ ನಿವಾಸಿ, ಬಿಜೆಪಿ ಕಾರ್ಯಕರ್ತ ರವಿ ಗೊಲ್ಲರ ಅವರನ್ನು ಕಾಡದೇವರಮಠ ಅವರು ಠಾಣೆಗೆ ಕರೆಸಿ ಥಳಿಸಿದ್ದರು ಎನ್ನಲಾಗಿದೆ.

ದೀಪಾವಳಿ ಹಬ್ಬಕ್ಕೆ ಶುಭ ಕೋರಲು ಭಾನುವಾರ ಜೋಶಿ ಅವರ ನಿವಾಸಕ್ಕೆ ಬಂದಿದ್ದ ಕಾಡದೇವರಮಠ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಜೋಶಿ, 'ಇಸ್ಪೀಟ್ ಆಡುತ್ತಿದ್ದರೆ ದಾಳಿ ನಡೆಸಿ ಅವರನ್ನು ಬಂಧಿಸಬೇಕಿತ್ತು. ಅವರು ತಪ್ಪು ಮಾಡಿದ್ದರೆ ನಾನು ಪ್ರೋತ್ಸಾಹ ನೀಡುವುದಿಲ್ಲ. ಠಾಣೆಗೆ ಕರೆಸಿ ಹೊಡೆಯಲು ನಿಮಗೆ ಏನು ಅಧಿಕಾರ ಇದೆ?' ಎಂದು ಹರಿಹಾಯ್ದರು.

'ಯುವಕ ತಿದ್ದಿಕೊಳ್ಳಲಿ ಎಂದು ಗಲ್ಲಕ್ಕೆ ಹೊಡೆದಿದ್ದೆ' ಎಂದು ಇನ್‌ಸ್ಪೆಕ್ಟರ್ ಹೇಳಿದ್ದಕ್ಕೆ, 'ನಾನು ನಿಮಗೆ ನಾಲ್ಕು ಗುದ್ದಿದರೆ ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ ಎಂದು ಪ್ರಶ್ನಿಸಿದ ಅವರು, ಒಂದು ವೇಳೆ ಅವರು ತಪ್ಪು ಮಾಡಿದ್ದರೂ ನಿಮಗೆ ಹೊಡೆಯಲು ಏನು ಅಧಿಕಾರ ಇದೆ? ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಿತ್ತು' ಎಂದರು.

'ನೀವು ಹೊಡೆದಿದ್ದರ ಬಗ್ಗೆ ವಿಡಿಯೊ ರೆಕಾರ್ಡ್ ಇದೆ. ಈ ಬಗ್ಗೆ ಮಾನವ ಹಕ್ಕುಗಳ ಆಯೋಗ, ಆಯುಕ್ತರಿಗೆ ದೂರು ನೀಡುತ್ತೇನೆ. ಠಾಣೆ ಎದುರು ಬಂದು ಪ್ರತಿಭಟನೆ ಮಾಡುತ್ತೇನೆ. ಏನು ಆಗುತ್ತದೆ ನೋಡೋಣ' ಎಂದು ಏರುಧ್ವನಿಯಲ್ಲಿ ಹೇಳಿದರು.

'ಬಿಜೆಪಿ ಕಾರ್ಯಕರ್ತ ಎಂಬ ಕಾರಣಕ್ಕೆ ಕಾಂಗ್ರೆಸ್‌ನವರ ಮಾತು ಕೇಳಿಕೊಂಡು ಈ ರೀತಿ ಮಾಡುತ್ತಿದ್ದೀರಾ? ಅವರ ಮೇಲೆ ಯಾವ ಹಳೆ ಪ್ರಕರಣಗಳು ಇವೆ? ಅವರ ಬಳಿ ಬಂದೂಕು ಸಿಕ್ಕಿದ್ದರೆ ಅದನ್ನು ಹಾಜರುಪಡಿಸಿ. ನಾನೂ ಹೋರಾಟ ಮಾಡಿ ಬಂದಿದ್ದೇವೆ. ನಮ್ಮನ್ನು ಹೆದರಿಸಲು ಸಾಧ್ಯವಿಲ್ಲ' ಎಂದು ಜೋಶಿ ಹೇಳಿದರು.

# ಮಾಡಾಳ್ ಪ್ರಕರಣ: ಆರೋಪಪಟ್ಟಿಗೆ ಸಿಗದ ಅನುಮತಿ

• ವಿ.ಎಸ್. ಸುಬ್ರಹ್ಮಣ್ಯ



ಕೆ.ಮಾಡಾಳ್ ವಿರೂಪಾಕ್ಷಪ್ಪ

**ಬೆಂಗಳೂರು:** ಚನ್ನಗಿರಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ನಿಕಟ ಪೂರ್ವ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧದ ಬಹುಕೋಟಿ ರೂಪಾಯಿ ಲಂಚ ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಸಲು ಲೋಕಾಯುಕ್ತ ಪೊಲೀಸರು ಅನುಮತಿ ಕೋರಿರುವ ಪ್ರಸ್ತಾವಕ್ಕೆ ಮೂರು ತಿಂಗಳಾದರೂ ಒಪ್ಪಿಗೆ ದೊರಕಿಲ್ಲ.

ಶಾಸಕರು ಅಥವಾ ಮಾಜಿ ಶಾಸಕರ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ಅಭಿಯೋಜನಾ ಮಂಜೂರಾತಿ ನೀಡುವ ಅಧಿಕಾರ ವಿಧಾನಸಭೆಯ ಅಧ್ಯಕ್ಷರಿಗೆ ಇದೆಯೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಸ್ಪೀಕರ್ ಯು.ಟಿ. ಖಾದರ್ ಕಾನೂನು ತಜ್ಞರ ಮೊರೆ ಹೋಗಿದ್ದಾರೆ. ಹೀಗಾಗಿ ಪ್ರಕರಣದ ತನಿಖೆ ನಡೆದು ಮೂರು ತಿಂಗಳಾದರೂ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಲೋಕಾಯುಕ್ತ ಪೊಲೀಸರಿಗೆ ಸಾಧ್ಯವಾಗಿಲ್ಲ.

ಕೆಎಸ್‌ಡಿಎಲ್‌ಗೆ ಕಚ್ಚಾ ವಸ್ತು ಪೂರೈಕೆಯ ಟೆಂಡರ್ ಪಡೆದಿದ್ದ ಶ್ರೇಯಸ್ ಕಶ್ಯಪ್ ಎಂಬ ಗುತ್ತಿಗೆದಾರನಿಂದ ವಿರೂಪಾಕ್ಷಪ್ಪ ಅವರ ಮಗ, ಬೆಂಗಳೂರು ಜಲ ಮಂಡಳಿಯ ಹಿಂದಿನ ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ್ ಮಾಡಾಳ್ ಅಪ್ಪನ ಪರವಾಗಿ ₹40 ಲಕ್ಷ ಲಂಚ ಪಡೆಯುತ್ತಿದ್ದಾಗ ಮಾರ್ಚ್ 2ರಂದು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಪ್ರಕರಣ ನಡೆದ ಪ್ರಶಾಂತ್ ಅವರ ಖಾಸಗಿ ಕಚೇರಿಯಲ್ಲಿ ಒಟ್ಟು ₹1.62 ಕೋಟಿ ನಗದು ಪತ್ತೆಯಾಗಿತ್ತು.

ಮರುದಿನ ವಿರೂಪಾಕ್ಷಪ್ಪ ಮನೆಯಲ್ಲಿ ನಡೆಸಿದ್ದ ಶೋಧದಲ್ಲಿ ₹6.26 ಕೋಟಿ ನಗದು ಪತ್ತೆಯಾಗಿತ್ತು. ಮಗನ ಬಂಧನದ ಬಳಿಕ ತಲೆ-ಮರೆಸಿಕೊಂಡಿದ್ದ ಶಾಸಕ, ಹೈಕೋರ್ಟ್‌ನಿಂದ ಮಧ್ಯಂತರ ನಿರೀಕ್ಷಣಾ ಜಾಮೀನು ಪಡೆದಿದ್ದರು. ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ಮಾರ್ಚ್ 27ರಂದು ತಿರಸ್ಕರಿ-ಸಿತ್ತು. ಅದೇ ದಿನ ವಿರೂಪಾಕ್ಷಪ್ಪ ಅವರನ್ನು ಬಂಧಿಸಲಾಗಿತ್ತು.

ವಿಧಾನಸಭಾ ಚುನಾವಣೆಗೆ ಎರಡು ತಿಂಗಳಿರುವಾಗಲೇ ನಡೆದ ಈ ಪ್ರಕರಣವು ಕಾಂಗ್ರೆಸ್– ಬಿಜೆಪಿ ಮಧ್ಯೆ ಹಗ್ಗಜಗ್ಗಾಟಕ್ಕೆ ಕಾರಣವಾಗಿತ್ತು. ವಿರೂಪಾಕ್ಷಪ್ಪ ಅವರ ಮನೆಯಲ್ಲಿ ವಶಪಡಿಸಿಕೊಂಡ ನೋಟುಗಳ ರಾಶಿಯ ಚಿತ್ರವು ಚುನಾವಣಾ ಪ್ರಚಾರದ ಪ್ರಮುಖ ಅಸ್ತ್ರವಾಗಿ ಬಳಕೆಯಾಗಿತ್ತು.

**ನಿರ್ಧಾರ ಕೈಗೊಳ್ಳದ ಸ್ಪೀಕರ್:** ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕದ ಹಿಂದಿನ ಎಸ್‌ಪಿ ಕೆ.ವಿ. ಅಶೋಕ್ ನೇತೃತ್ವದಲ್ಲಿ ತನಿಖಾ ತಂಡವು ತ್ವರಿತವಾಗಿ ಪ್ರಕರಣದ ತನಿಖೆ ನಡೆಸಿತ್ತು. ಆಗಸ್ಟ್ ಅಂತ್ಯದಲ್ಲೇ ತನಿಖೆ ಪೂರ್ಣಗೊಳಿಸಿದ್ದ ತನಿಖಾಧಿಕಾರಿ, ವಿರೂಪಾಕ್ಷಪ್ಪ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡುವಂತೆ ಕೋರಿ ವಿಧಾನಸಭೆಯ ಅಧ್ಯಕ್ಷರಿಗೆ ಪ್ರಸ್ತಾವ ಸಲ್ಲಿಸಿದ್ದರು.

'ಪ್ರಕರಣಕ್ಕೆ ಸಂಬಂಧಿಸಿದ ದೂರು, ಎಫ್‌ಐಆರ್, ತನಿಖಾ ವರದಿ ಎಲ್ಲವನ್ನೂ ವಿಧಾನಸಭೆಯ ಅಧ್ಯಕ್ಷರಿಗೆ ಸಲ್ಲಿಸಲಾಗಿದೆ. ಆದರೆ, ಈವರೆಗೂ ಅಭಿಯೋಜನಾ ಮಂಜೂರಾತಿ ಕುರಿತು ಯಾವುದೇ ನಿರ್ಧಾರ ಕೈಗೊಂಡಿಲ್ಲ. ಈ ಕಾರಣದಿಂದ ವಿರೂಪಾಕ್ಷಪ್ಪ ವಿರುದ್ಧದ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸುವುದು ವಿಳಂಬವಾಗು-ತ್ತಿದೆ' ಎಂದು ಲೋಕಾಯುಕ್ತದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

### ಕಾನೂನು ತಜ್ಞರ ಸಲಹೆಗೆ ಮೊರೆ: ಯು.ಟಿ. ಖಾದರ್ ಸ್ಪಷ್ಟನೆ



ಯು ಟಿ ಖಾದರ್

'ಕ್ರಿಮಿನಲ್ ಪ್ರಕರಣವೊಂದರಲ್ಲಿ ಸರ್ಕಾರಿ ನೌಕರ ಅಥವಾ ಚುನಾಯಿತ ಪ್ರತಿನಿಧಿ ವಿರುದ್ಧ ಆತನನ್ನು ನೇಮಕಾತಿ ಮಾಡುವ ಹಾಗೂ ಹುದ್ದೆಯಿಂದ ತೆಗೆಯುವ ಅಧಿಕಾರ ಹೊಂದಿರುವ ಸಕ್ಷಮ ಪ್ರಾಧಿಕಾರವು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡುವ ಅಧಿಕಾರ ಹೊಂದಿರುತ್ತದೆ ಎಂಬ ಅಂಶ ಕಾನೂನಿನಲ್ಲಿದೆ. ಶಾಸಕರನ್ನು ನೇಮಿಸುವವರು ಸ್ಪೀಕರ್ ಅಲ್ಲ. ವಿಧಾನಸಭೆಯ ಅಧ್ಯಕ್ಷರಿಗೆ ಅಭಿಯೋಜನಾ ಮಂಜೂರಾತಿ ನೀಡುವ ಅಧಿಕಾರ ಇದೆಯೇ ಎಂಬುದರ ಕುರಿತು ಕಾನೂನು ತಜ್ಞರ ಸಲಹೆ ಕೋರಲಾಗಿದೆ' ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ 'ಪ್ರಜಾವಾಣಿ'ಗೆ ತಿಳಿಸಿದರು.

'ವಿರೂಪಾಕ್ಷಪ್ಪ ಈಗ ಮಾಜಿ ಶಾಸಕ. ಇಂತಹ ಸಂದರ್ಭದಲ್ಲಿ ಆರೋಪಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ಅಗತ್ಯವೇ ಎಂಬ ಪ್ರಶ್ನೆಯೂ ಇದೆ. ಎಲ್ಲದರ ಬಗ್ಗೆಯೂ ಸ್ಪಷ್ಟತೆ ಅಗತ್ಯವಿದೆ. ಈ ಕಾರಣದಿಂದ ಪ್ರಸ್ತಾವ ನಮ್ಮ ಕಚೇರಿಯಲ್ಲಿ ಬಾಕಿ ಉಳಿದಿದೆ' ಎಂದರು.

### 3 ತಿಂಗಳ ಗಡುವು

ಸರ್ಕಾರಿ ನೌಕರ ಅಥವಾ ಚುನಾಯಿತ ಪ್ರತಿನಿಧಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ಅಭಿಯೋಜನಾ ಮಂಜೂರಾತಿ ಕೋರಿ ತನಿಖಾಧಿಕಾರಿಯು ಪ್ರಸ್ತಾವ ಸಲ್ಲಿಸಿದಾಗ ಸಕ್ಷಮ ಪ್ರಾಧಿಕಾರವು ಮೂರು ತಿಂಗಳೊಳಗೆ ತನ್ನ ತೀರ್ಮಾನವನ್ನು ತಿಳಿಸಬೇಕು. ಹೆಚ್ಚಿನ ವಿವರಣೆ ಅಗತ್ಯವಿರುವ ಪ್ರಕರಣಗಳ-ಲ್ಲಿ ಮಾತ್ರ ಒಂದು ತಿಂಗಳ ಹೆಚ್ಚುವರಿ ಕಾಲಾವಕಾಶ ಇರುತ್ತದೆ ಎಂಬ ಉಲ್ಲೇಖ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಲ್ಲಿದೆ.

# ಒಂದೇ ಕುಟುಂಬದ ನಾಲ್ವರ ಹತ್ಯೆ

ಒಂದನೇ ಪುಟದಿಂದ...

ಮೃತ ಹಸೀನಾಳ ಪತಿ ನೂರ್ ಅಹಮದ್ ದುಬೈನಲ್ಲಿ ಕೆಲಸ ಮಾಡುತ್ತಿದ್ದು ಮಾಹಿತಿ ನೀಡಲಾಗಿದೆ. ವಿಧಿವಿಜ್ಞಾನ ತಜ್ಞರ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದೆ.

**ಆಟೊ ಚಾಲಕನ ಹೇಳಿಕೆ:** 'ಬೆಳಿಗ್ಗೆ 8.30ರ ಸುಮಾರಿಗೆ ಬೋಳು ತಲೆಯ, ಬಿಳಿ ಅಂಗಿ ಹಾಗೂ ಮಾಸ್ಕ್ ಧರಿಸಿದ್ದ ವ್ಯಕ್ತಿಯನ್ನು ಆಟೊ ರಿಕ್ಷಾದಲ್ಲಿ ಸಂತೆಕಟ್ಟೆಯಿಂದ ಕರೆತಂದು ಘಟನೆ ನಡೆದ ಮನೆಯ ಮುಂದೆ ಇಳಿಸಿ ಹೋಗಿದ್ದೆ. ಅರ್ಧತಾಸಿನ ಬಳಿಕ ಆತ ಮತ್ತೆ ಸಂತೆಕಟ್ಟೆಯ ಆಟೊ ನಿಲ್ದಾಣಕ್ಕೆ ಬಂದು ತುರ್ತಾಗಿ ಹೋಗಬೇಕು ಎಂದು ಬೇರೊಂದು ಆಟೊದಲ್ಲಿ ಉಡುಪಿ ಕಡೆಗೆ ತೆರಳಿದ. ಆತನ ವರ್ತನೆ ಅನುಮಾನಾಸ್ಪದವಾಗಿತ್ತು' ಎಂದು ಆಟೊ ಚಾಲಕ ಶ್ಯಾಂ ಮಾಹಿತಿ ನೀಡಿದ್ದಾರೆ.

**ಶೌಚಾಲಯದಲ್ಲಿ ಅವಿತು ಜೀವ ಉಳಿಸಿಕೊಂಡ ವೃದ್ಧೆ:** ಚೂರಿ ಇರಿತಕ್ಕೊಳಗಾದ ಹಾಜಿರಾ (70) ಹಂತಕನಿಂದ ತಪ್ಪಿಸಿಕೊಂಡು ಮನೆಯ ಶೌಚಾಲಯದೊಳಗೆ ಹೋಗಿ ಬಾಗಿಲು ಹಾಕಿಕೊಂಡು ಜೀವ ಉಳಿಸಿಕೊಂಡಿದ್ದಾರೆ. ಘಟನೆಯಿಂದ ತೀವ್ರ ಆಘಾತಕ್ಕೊಳಗಾಗಿದ್ದ ವೃದ್ಧೆ ಪೊಲೀಸರು ಬಂದು ಬಾಗಿಲು ಬಡಿದರೂ ತೆಗೆದಿರಲಿಲ್ಲ. ಬಳಿಕ ಬಾಗಿಲನ್ನು ದೂಡಿ ಗಂಭೀರ ಸ್ಥಿತಿಯಲ್ಲಿದ್ದ ವೃದ್ಧೆಯನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಬಾಲಕ ಅಸೀಮ್ ಬೆಳಿಗ್ಗೆ ಸ್ನೇಹಿತರ ಜತೆ ಆಟವಾಡಿ ಉಪಾಹಾರ ಸೇವಿಸಲು ಮನೆಗೆ ಬಂದಿದ್ದ. ಅಂಗಳದಲ್ಲಿ ಆಟವಾಡುತ್ತಿದ್ದಾಗ ತಾಯಿ ಹಾಗೂ ಅಕ್ಕಂದಿರ ಚೀರಾಟ ಕೇಳಿ ಮನೆಯೊಳಗೆ ಹೋಗಿದ್ದಾನೆ. ಈ ವೇಳೆ ಬಾಲಕನನ್ನೂ ಬರ್ಬರವಾಗಿ ಕೊಲೆ ಮಾಡಲಾಗಿದೆ.

ಕೊಲೆಯಾದ ಯುವತಿ ಅಫ್ನಾನ್ ಗಗನಸಖಿಯಾಗಿ ಕಾರ್ಯ ನಿರ್ವ-ಹಿಸುತ್ತಿದ್ದರು. ಅಯ್ನಾಜ್ ಬಿಕಾಂ ಓದುತ್ತಿದ್ದರು. ಅಸೀಮ್ ಜಿಎಂ ಶಾಲೆಯಲ್ಲಿ ಓದುತ್ತಿದ್ದ. ಕೊಲೆಯಾದ ಹಸೀನಾ ಅವರ ಮತ್ತೊಬ್ಬ ಪುತ್ರ ಬೆಂಗಳೂರಿನಲ್ಲಿ ಖಾಸಗಿ ವಿಮಾನಯಾನ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ.

### ಉತ್ತಮ ಬಾಂಧವ್ಯ

'ಮೃತ ಹಸೀನಾಳ ಕುಟುಂಬ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ ಹೊಂದಿತ್ತು. ಯಾರೊಂದಿಗೂ ದ್ವೇಷ ಇರಲಿಲ್ಲ. ಎಲ್ಲರೊಂದಿಗೆ ಈ ಕುಟುಂಬದವರು ಆತ್ಮೀಯತೆಯಿಂದ ಇದ್ದರು. ಹತ್ಯೆ ಘಟನೆ ಆಘಾತ ತಂದಿದೆ. ಇಂತಹ ಕೃತ್ಯ ಈ ಭಾಗದಲ್ಲಿ ನಡೆದಿರುವುದು ಇದೇ ಮೊದಲು' ಎಂದು ಅಕ್ಕಪಕ್ಕದ ಮನೆಯವರು ವಿಷಾದ ವ್ಯಕ್ತಪಡಿಸಿದರು.

# 'ಬ್ರೇಕ್ ಬದಲು ಆ್ಯಕ್ಸಲರೇಟರ್ ಒತ್ತಿದ್ದ ನಟ ನಾಗಭೂಷಣ್'

ಪ್ರಜಾವಾಣಿ ವಾರ್ತೆ



ನಾಗಭೂಷಣ್

**ಬೆಂಗಳೂರು:** ಉತ್ತರಹಳ್ಳಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಎಸ್.ಪ್ರೇಮಾ (48) ಮೃತಪಟ್ಟಿದ್ದ ಪ್ರಕರಣದಲ್ಲಿ ಆರೋಪಿ, ನಟ ಎನ್.ಎಸ್. ನಾಗಭೂಷಣ್ ವಿರುದ್ಧ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸರು ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದಾರೆ.

ಸೆ.30ರ ತಡರಾತ್ರಿ ಅಪಘಾತ ಸಂಭವಿಸಿತ್ತು. ಪ್ರೇಮಾ ಅವರ ಪತಿ ಕೃಷ್ಣ ತೀವ್ರ ಗಾಯಗೊಂಡಿದ್ದರು. ದಂಪತಿಯ ಮಗ ನೀಡಿದ್ದ ದೂರು ಆಧರಿಸಿ ನಟನ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಅಪಘಾತದ ತನಿಖೆ ನಡೆಸಿದ್ದ ಪೊಲೀಸರು ದೋಷಾರೋಪ ಪಟ್ಟಿ ಸಿದ್ಧ-ಪಡಿಸಿದ್ದು, ಸದ್ಯದಲ್ಲೇ ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ.

'ಜೆ.ಪಿ.ನಗರದ ನಿವಾಸಿ ಎನ್.ಎಸ್. ನಾಗಭೂಷಣ್, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರು. ವಸಂತಪುರ ಮುಖ್ಯರಸ್ತೆಯ ಸುಪ್ರಭಾತ್ ಡ್ರೀಮ್ ಬ್ರೀಜ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ಪ್ರೇಮಾ ಹಾಗೂ ಕೃಷ್ಣ ಅವರಿಗೆ ಕಾರು ಗುದ್ದಿತ್ತು. ಬಳಿಕ, ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಕಾರು ಜಖಂಗೊಂಡಿತ್ತು. ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳು, ಪ್ರತ್ಯಕ್ಷದರ್ಶಿಗಳ ಹೇಳಿಕೆ ಸೇರಿದಂತೆ 80 ಸಾಕ್ಷ್ಯಗಳ ಬಗ್ಗೆ ಉಲ್ಲೇಖಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

**ಪಾದಚಾರಿ ಮಾರ್ಗಕ್ಕೆ ನುಗ್ಗಿದ ಕಾರು:** 'ನಾಗಭೂಷಣ್ ಅತಿವೇಗವಾಗಿ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರು. ಬ್ರೇಕ್ ಬದಲು ಆ್ಯಕ್ಸಲರೇಟರ್ ಒತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

### 'ನಾಗಭೂಷಣ್ ಹೇಳಿಕೆ ಸುಳ್ಳು'

'ಪ್ರೇಮಾ ಹಾಗೂ ಕೃಷ್ಣ ಪಾದಚಾರಿ ಮಾರ್ಗದಿಂದ ದಿಢೀರ್ ರಸ್ತೆಗೆ ಇಳಿದಿದ್ದರು. ಹೀಗಾಗಿ, ಅಪಘಾತವಾಯಿತು ಎಂದು ನಾಗಭೂಷಣ್ ಹೇಳಿಕೆ ನೀಡಿದ್ದರು. ಆದರೆ, ಇವರ ಹೇಳಿಕೆಗೆ ಯಾವುದೇ ಪುರಾವೆಗಳು ಸಿಕ್ಕಿಲ್ಲ. ಇವರದ್ದು ಸುಳ್ಳು ಹೇಳಿಕೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ನಾಗಭೂಷಣ್ ಅವರು ಚಲಾಯಿಸುತ್ತಿದ್ದ ಕಾರು ಪಾದಚಾರಿ ಮಾರ್ಗಕ್ಕೆ ನುಗ್ಗಿದ್ದಕ್ಕೆ ಪುರಾವೆಗಳು ಸಿಕ್ಕಿವೆ. ಇದನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



**ನೂಕುನುಗ್ಗಲು**

ಚಿಕ್ಕಮಗಳೂರು ತಾಲ್ಲೂಕಿನ ಮಲ್ಲೇನಹಳ್ಳಿ ಬಳಿಯ ದೇವೀರಮ್ಮ ಬೆಟ್ಟದಲ್ಲಿ ನರಕ ಚತುರ್ದಶಿಯಂದು ಮಾತ್ರ ಬೆಟ್ಟದ ತುದಿಯಲ್ಲಿರುವ ದೇವಿಯ ದರ್ಶನ ಪಡೆಯಲು ಅವಕಾಶ ಇದೆ. ಭಾನುವಾರ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ಬರಿಗಾಲಿನಲ್ಲಿ ಬೆಟ್ಟ ಏರಿ ನೂಕುನುಗ್ಗಲಿನಲ್ಲಿ ದರ್ಶನ ಪಡೆದರು

## ಅಲ್ಲಮಪ್ರಭು ಸ್ವಾಮೀಜಿ ಲಿಂಗೈಕ್ಯ

ಪ್ರಜಾವಾಣಿ ವಾರ್ತೆ



**ಚಿಕ್ಕೋಡಿ (ಬೆಳಗಾವಿ ಜಿಲ್ಲೆ):** ಗಡಿನಾಡಿನಲ್ಲಿ ಧರ್ಮ ಪ್ರಸಾರ ದೊಂದಿಗೆ, ಕನ್ನಡದ ಅಸ್ಮಿತೆ ಉಳಿಸಿ ಬೆಳೆಸಿಕೊಂಡು ಬಂದಿದ್ದ 'ಕನ್ನಡದ ಸ್ವಾಮೀಜಿ' ಖ್ಯಾತಿಯ, ತಾಲ್ಲೂಕಿನ ಚಿಂಚಣಿಯ ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠದ ಅಲ್ಲಮಪ್ರಭು ಸ್ವಾಮೀಜಿ (63) ಅನಾರೋಗ್ಯದಿಂದ ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯಲ್ಲಿ ಭಾನುವಾರ ಲಿಂಗೈಕ್ಯರಾದರು.

ಕೆಲವು ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಶನಿವಾರ ಬೆಳಿಗ್ಗೆ ಬೆಳಗಾವಿಯ ಆಸ್ಪತ್ರೆಗೆ ದಾಖಲಿಸ-ಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಅವರ ಪಾರ್ಥಿವ ಶರೀರವನ್ನು ಮಧ್ಯಾಹ್ನ ಚಿಂಚಣಿಯ ಮಠಕ್ಕೆ ತರಲಾಯಿತು. ದೊಡ್ಡ ಸಂಖ್ಯೆಯಲ್ಲಿ ಭಕ್ತರು ಅಂತಿಮ ದರ್ಶನ ಪಡೆದರು. ನಂತರ ಗ್ರಾಮದಲ್ಲಿ ಮೆರವಣಿಗೆ ನಡೆಸಿ, ಅಂತ್ಯಕ್ರಿಯೆಗಾಗಿ ಪಾರ್ಥಿವ ಶರೀರವನ್ನು ಗದುಗಿನ ಶಿರೋಳದ ಮಠಕ್ಕೆ ಕಳುಹಿಸಲಾಯಿತು.

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಗಜೇಂದ್ರಗಡದಲ್ಲಿ ಬಸಮ್ಮ ಮತ್ತು ಗುರುಲಿಂಗಯ್ಯ ಹಿರೇಮಠ ದಂಪತಿ ಪುತ್ರನಾಗಿ 1961ರ ಜೂನ್ 22ರಂದು ಜನಿಸಿದ್ದರು. ಗಜೇಂದ್ರಗಡದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪಡೆದ ಅವರು, ಮನೆತನದ ವೈದಿಕ ಕಾರ್ಯಗಳಿಗೆ ನೆರವಾಗಲೆಂದು ಗದುಗಿನ ತೋಂಟದಾರ್ಯ ಶಾಲೆಗೆ ಸೇರಿದರು. ತೋಂಟದಾರ್ಯ ಶ್ರೀಗಳ ಕೃಪೆಗೆ ಪಾತ್ರರಾಗಿ ನಂತರ ಜಂಗಮವಟುವಾದರು. ನರಗುಂದ ತಾಲ್ಲೂಕಿನ ಶಿರೋಳ ಶಾಖಾ ಮಠದ ಪೀಠಾಧಿಪತಿಯಾಗಿ 1991ರಲ್ಲಿ ನೇಮಕಗೊಂಡರು. 1994ರ ಜುಲೈ 1ರಂದು ಚಿಂಚಣಿ ಸಿದ್ಧಸಂಸ್ಥಾನ ಮಠದ ಪೀಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಅವರು, ಬಸವ ಕಾಯಕ ಆರಂಭಿಸಿದರು.

ಮಠದ ಗಡಿ ಕನ್ನಡಿಗರ ಬಳಗದ ವತಿಯಿಂದ ಪ್ರತಿವರ್ಷ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸುತ್ತಿದ್ದರು. ಮಠದ ಕನ್ನಡ ಜಾಗೃತಿ ಪುಸ್ತಕಮಾಲೆ ಮೂಲಕ ಈವರೆಗೆ 51 ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿ-ಸಿದ್ದಾರೆ. ಮರಾಠಿ ಭಾಷೆಯಲ್ಲಿನ ಹಲವು ಕೃತಿಗಳನ್ನು ತರ್ಜುಮೆಗೊಳಿಸಿ ಕನ್ನಡಿಗರಿಗೆ ನೀಡಿದ್ದಾರೆ.

ಮಾತೃ ವಿ.ವಿ.ಗಳಿಂದ ಇನ್ನೂ ಸಿಬ್ಬಂದಿ ಹಂಚಿಕೆ ಇಲ್ಲ; ವಿದ್ಯಾರ್ಥಿಗಳಿಗೆ ಅತಿಥಿ ಪ್ರಾಧ್ಯಾಪಕರೇ ಗತಿ

# ಟೇಕಾಫ್ ಆಗದ ನೂತನ ವಿಶ್ವವಿದ್ಯಾಲಯಗಳು!

• ಮನೋಜಕುಮಾರ್ ಗುದ್ದಿ

ಪ್ರಜಾವಾಣಿ ವಿಶೇಷ

**ಕಲಬುರಗಿ:** ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಜ್ಯ ಸರ್ಕಾರ 2017ರಲ್ಲಿ ರಾಯಚೂರು ವಿಶ್ವ-ವಿದ್ಯಾಲಯ ಹಾಗೂ ಹಿಂದಿನ ಬಿಜೆಪಿ ಸರ್ಕಾರ ತನ್ನ ಅವಧಿ ಮುಗಿಯುವ ಕೊನೆ ಗಳಿಗೆಯಲ್ಲಿ ಕೊಪ್ಪಳ ಹಾಗೂ ಬೀದರ್ ವಿಶ್ವವಿದ್ಯಾಲಯಗಳನ್ನು ರಚಿಸಿ ಆದೇಶ ಹೊರಡಿಸಿದೆ. ಇವುಗಳಿಗೆ ಇನ್ನೂ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ಸುಸಜ್ಜಿತ ಕಟ್ಟಡ, ಹೊಸ ಕೋರ್ಸ್‌ಗಳು ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಪರದಾಡುವಂತಾಗಿದೆ.

ನಾಲ್ಕು ದಶಕಗಳ ಹಿಂದೆ ಕಲ್ಯಾಣ ಕರ್ನಾಟಕದ ಏಕೈಕ ವಿಶ್ವವಿದ್ಯಾಲಯವಾಗಿ ಗುಲಬರ್ಗಾ ವಿ.ವಿ. ಆರಂಭವಾಯಿತು. ಅದಾದ ಬಳಿಕ ಸಂಶೋಧನಾ ಚಟುವಟಿ-ಕೆಗಳಿಗೆಂದೇ ಹಂಪಿ ಕನ್ನಡ ವಿಶ್ವ ವಿದ್ಯಾಲಯ ಆರಂಭವಾಯಿತಾದರೂ ಪದವಿ ಕಾಲೇಜುಗಳ ಸಂಯೋಜನೆ ಹೊಂದಿರಲಿಲ್ಲ. ಹೀಗಾಗಿ, ಗುಲಬರ್ಗಾ ವಿ.ವಿ.ಯೇ ನಾಲ್ಕು ದಶಕಗಳ ಕಾಲ ಕಲ್ಯಾಣ ಕರ್ನಾಟಕದ ಸಾವಿರಾರು ಕಾಲೇಜುಗಳಿಗೆ ಸಂಯೋಜನೆಯನ್ನು ಹೊಂದಿತ್ತು. ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿ.ವಿ. ಹಾಗೂ ರಾಯಚೂರು ವಿಶ್ವವಿದ್ಯಾಲಯಗಳು ಆರಂಭಗೊಂಡ ಬಳಿಕ ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿ ಕಡಿಮೆಯಾಗುತ್ತ ಬಂತು. ಇತ್ತೀಚೆಗೆ ಹೊಸದಾಗಿ ಕೊಪ್ಪಳ, ಬೀದರ್ ವಿಶ್ವವಿದ್ಯಾಲಯಗಳು ಆರಂಭವಾಗಿದ್ದರಿಂದ ಗುಲ್ಬರ್ಗ ವಿ.ವಿ ವ್ಯಾಪ್ತಿ ಕಲಬುರಗಿ ಜಿಲ್ಲೆಗೆ ಮಾತ್ರ ಸೀಮಿತಗೊಂಡಂತಾಗಿದೆ.



ಕೊಪ್ಪಳ ವಿ.ವಿ ಆರಂಭವಾಗಿರುವ ಕುಕನೂರು ತಾಲ್ಲೂಕಿನ ತಳಕಲ್‌ನ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಕಟ್ಟಡ

> ಶ್ರೀಕೃಷ್ಣ ದೇವರಾಯ ವಿಶ್ವ ವಿದ್ಯಾಲಯದಿಂದ ಕೊಪ್ಪಳ ವಿ.ವಿ.ಗೆ ಕೆಲ ಸಿಬ್ಬಂದಿ ಹಂಚಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಖಾಲಿ ಹುದ್ದೆಗಳ ಭರ್ತಿಗೆ ಪ್ರಸ್ತಾವ ಸಲ್ಲಿಸಲಿದ್ದೇವೆ
>
> **ಪ್ರೊ.ಬಿ.ಕೆ. ರವಿ,** ಕುಲಪತಿ, ಕೊಪ್ಪಳ ವಿ.ವಿ.

ಗುಲಬರ್ಗಾ ವಿ.ವಿ.ಯಲ್ಲಿ ಶೇ 70ರಷ್ಟು ಕಾಯಂ ಸ್ವರೂಪದ ಬೋಧಕ, ಬೋಧಕೇತರ ಸಿಬ್ಬಂದಿಯ ಕೊರತೆ ಇದೆ. ಹೊಸ ಹುದ್ದೆಗಳನ್ನು ನೀಡುವಂತೆ ಸರ್ಕಾರಗಳಿಗೆ ಮನವಿ ಸಲ್ಲಿಸಲಾಗಿದೆ. ಇನ್ನೂ ಬೋಧಕ ಸಿಬ್ಬಂದಿ ನೇಮಕಕ್ಕೆ ಅನುಮೋದನೆ ಸಿಕ್ಕಿಲ್ಲ.

ಇದರ ಮಧ್ಯೆ ಹೊಸದಾಗಿ ಆರಂಭವಾದ ವಿ.ವಿ.ಗಳು ಹೆಸರಿಗೆ ಮಾತ್ರ ವಿ.ವಿ.ಗಳಾಗಿದ್ದು, ಇನ್ನೂ ಸ್ನಾತಕೋತ್ತರ ಕೇಂದ್ರಗಳ ಸ್ವರೂಪದಲ್ಲೇ ಕೆಲಸ ಮಾಡುತ್ತಿವೆ ಎಂಬ ಆರೋಪ ಶಿಕ್ಷಣ ಪ್ರೇಮಿಗಳಿಂದ ಕೇಳಿ ಬರುತ್ತಿದೆ.

ಕೊಪ್ಪಳ ವಿಶ್ವವಿದ್ಯಾಲಯವು ಜಿಲ್ಲೆಯ ಕುಕನೂರು ತಾಲ್ಲೂಕಿನ ತಳಕಲ್‌ನ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಕಟ್ಟಡದಲ್ಲಿ ಹಾಗೂ ಬೀದರ್ ವಿಶ್ವವಿದ್ಯಾಲಯವು ಸ್ನಾತಕೋತ್ತರ ಕೇಂದ್ರದ ಕಟ್ಟಡದಲ್ಲಿ ಕಳೆದ ಏಳು ತಿಂಗಳಿಂದ ಕಾರ್ಯನಿರ್ವಹಿಸುತ್ತಿವೆ.

**ಕುಲಸಚಿವರಿಲ್ಲ:** ವಿಶ್ವವಿದ್ಯಾಲಯದ ದೈನಂದಿನ ಆಡಳಿತವನ್ನು ನಡೆಸಿಕೊಂಡು ಹೋಗುವ ಆಡಳಿತ ಕುಲಸಚಿವರ ನೇಮಕ ಇನ್ನೂ ಆಗಿಲ್ಲ. ಕುಲಪತಿ ಹಾಗೂ ಮೌಲ್ಯಮಾಪನ ಕುಲಸಚಿವರ ನೇಮಕ ಮಾತ್ರ ಆಗಿದೆ. ಮೂಲ ವಿಶ್ವವಿದ್ಯಾಲಯದಲ್ಲಿದ್ದ ಆಯಾ ಜಿಲ್ಲೆಗಳ ಕಾಲೇಜುಗಳ ಸಂಯೋಜನೆಯನ್ನು ಬೀದರ್ ಹಾಗೂ ಕೊಪ್ಪಳ ವಿ.ವಿ.ಗಳಿಗೆ ನೀಡಲಾಗಿದೆ. ಪರೀಕ್ಷೆ, ಮೌಲ್ಯಮಾಪನ ಕೆಲಸಗಳು ಮೂಲ ವಿ.ವಿ.ಯ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಯ ನೆರವಿನಿಂದಲೇ ನಡೆಯಬೇಕಿದೆ.

ರಾಯಚೂರು, ಬೀದರ್ ಹಾಗೂ ಕೊಪ್ಪಳ ವಿ.ವಿ.ಗಳಿಗೆ ಗುಲಬರ್ಗಾ ವಿ.ವಿ.ಗೆ ಮಂಜೂರಾಗಿದ್ದ ಹುದ್ದೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಕೊಪ್ಪಳ ವಿ.ವಿ.ಗೆ ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿ.ವಿ.ಯ ಕೆಲ ಹುದ್ದೆಗಳು ವರ್ಗಾವಣೆ-ಯಾಗಲಿವೆ. ಆದರೆ, ಆ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ.

ಹೊಸ ವಿ.ವಿ.ಗೆ ಸದ್ಯಕ್ಕೆ ತಲಾ ₹ 2 ಕೋಟಿ ಮಾತ್ರ ಆಡಳಿತ ವೆಚ್ಚವೆಂದು ಹಂಚಿಕೆ ಮಾಡಲಾಗಿದೆ. ಉಳಿದಂತೆ ಹೊಸ ಹುದ್ದೆಗಳ ಸೃಜನೆ, ಹೊಸ ಕೋರ್ಸ್‌ಗಳ ಆರಂಭಕ್ಕೆ ಅನುಮತಿ ನೀಡಿಲ್ಲ ಎಂದು ವಿ.ವಿ.ಯ ಮೂಲಗಳು ತಿಳಿಸಿವೆ.

### ರಾಜ್ಯ ಸರ್ಕಾರ ನಿರಾಸಕ್ತಿ

ಹಿಂದಿನ ಬಿಜೆಪಿ ಸರ್ಕಾರ ಕೊನೆ ಗಳಿಗೆಯಲ್ಲಿ ಹೊಸದಾಗಿ ಏಳು ವಿ.ವಿ.ಗಳನ್ನು ರಚಿಸಿ ಆದೇಶ ಹೊರಡಿಸಿದ್ದರಿಂದ ಹೊಸದಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರಕ್ಕೆ ಇವುಗಳ ಅಭಿವೃದ್ಧಿಗೆ ನೆರವು ನೀಡಲು ಯಾವುದೇ ಆಸಕ್ತಿ ಇಲ್ಲ ಎಂಬ ಆರೋಪಗಳು ಕೇಳಿ ಬಂದಿವೆ. ಇತ್ತೀಚೆಗೆ ಗುಲಬರ್ಗಾ ವಿ.ವಿ.ಗೆ ಭೇಟಿ ನೀಡಿದ್ದ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು, 'ಹಿಂದಿನ ಸರ್ಕಾರದ ಅವಧಿಯಲ್ಲಿ ಹಲವು ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳಿಗೆ ಅಗತ್ಯವಾದ ಹಣಕಾಸಿನ ನೆರವು, ಮೂಲಸೌಕರ್ಯ ಕಲ್ಪಿಸುವಲ್ಲಿ ಆಸಕ್ತಿ ತೋರಿಲ್ಲ. ಇದರಿಂದ ಹೊಸ ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟದಲ್ಲಿವೆ' ಎಂದಿದ್ದರು. ಅವುಗಳಿಗೆ ಮೂಲಸೌಕರ್ಯ ಕಲ್ಪಿಸುವ ಬಗ್ಗೆಯೂ ನಿರ್ದಿಷ್ಟ ಭರವಸೆ ನೀಡಿರಲಿಲ್ಲ.

ಒಂದು ಸ್ನಾತಕೋತ್ತರ ವಿಭಾಗ ಪೂರ್ಣಪ್ರಮಾ-ಣದಲ್ಲಿ ಶುರುವಾಗಬೇಕಾದರೆ ಒಬ್ಬ ಪ್ರಾಧ್ಯಾಪಕರು, ಇಬ್ಬರು ಸಹ ಪ್ರಾಧ್ಯಾಪಕರು, ನಾಲ್ವರು ಸಹಾಯಕ ಪ್ರಾಧ್ಯಾಪಕರ ಅಗತ್ಯವಿದೆ. ಈ ಲೆಕ್ಕದಲ್ಲಿ ಸುಮಾರು 15 ವಿಭಾಗಗಳಿಗೆ 105 ಬೋಧಕ ಸಿಬ್ಬಂದಿ ಹಾಗೂ 200 ಬೋಧಕೇತರ ಸಿಬ್ಬಂದಿ ಅಗತ್ಯವಿದೆ. ಆರು ವರ್ಷಗಳ ಹಿಂದೆ ಆರಂಭವಾದ ರಾಯಚೂರು ವಿ.ವಿ.ಗೂ ಇಷ್ಟು ಪ್ರಮಾಣದ ಸಿಬ್ಬಂದಿಯನ್ನು ಒದಗಿಸಿಲ್ಲ. ಇನ್ನು ಹೊಸ ವಿ.ವಿ.ಗಳಿಗೆ ಯಾವುದೇ ಹೊಸ ಹುದ್ದೆಗಳ ಸೃಜನೆಯಾಗಿಲ್ಲ. ಹೀಗಾಗಿ, ವಿದ್ಯಾರ್ಥಿಗಳ ಕಲಿಕೆಗೆ ಸಾಕಷ್ಟು ಪೆಟ್ಟು ಬೀಳಲಿದೆ ಎನ್ನುತ್ತಾರೆ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ಮುಖಂಡ, ರಾಯಚೂರಿನ ರಜಾಕ್ ಉಸ್ತಾದ್.

# ದಿಮಾನಿ: ‘ಕಮಲ’ ಅರಳಿಸುವರೇ ತೋಮರ್?



ಚುನಾವಣಾ ಪಯಣ
ಮಧ್ಯಪ್ರದೇಶ
ಮಂಜುನಾಥ ಹೆಬ್ಬಾರ್


ದಿಮಾನಿ (ಮಧ್ಯಪ್ರದೇಶ): ಲೋಕಸಭಾ ಚುನಾವಣೆಗೆ ನಾಲ್ಕೈದು ತಿಂಗಳು ಇರುವ ಹೊತ್ತಿನಲ್ಲಿ ರಾಜ್ಯ ರಾಜಕಾರಣದಲ್ಲಿ ಬಡಿದಾಡುವ ರಿಸ್ಕ್ ತೆಗೆದುಕೊಳ್ಳಲು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಗೆ ಸುತಾರಾಂ ಇಷ್ಟ ಇರಲಿಲ್ಲ. ರಾಜ್ಯದಲ್ಲಿ 19 ವರ್ಷಗಳ ಸುದೀರ್ಘ ಆಡಳಿತದಿಂದ ಎದುರಾದ ಆಡಳಿತ ವಿರೋಧಿ ಅಲೆಯನ್ನು ತಗ್ಗಿಸಲು ಬಿಜೆಪಿಯ ‘ಅಮಿತ’ ತಂತ್ರಗಾರರು ನೆಚ್ಚಿಕೊಂಡಿದ್ದು ತೋಮರ್ ಅವರಂತಹ ‘ಮಹಾರಥಿ’ಗಳನ್ನು. ದಿಮಾನಿಯ ಕಣಕ್ಕೆ ತೋಮರ್ ಅವರನ್ನು ಒತ್ತಾಯಪೂರ್ವಕವಾಗಿ ತಳ್ಳಿರುವ ವರಿಷ್ಠರು ಪದ್ಮದ ‘ಬೆಳೆ’ ತೆಗೆದುಕೊಂಡು ಬರಲು ಕಟ್ಟಪ್ಪಣೆ ಮಾಡಿದ್ದಾರೆ. 15 ವರ್ಷಗಳಿಂದ ಪಕ್ಷಕ್ಕೆ ಗೆಲುವು ಮರೀಚಿಕೆಯಾಗಿರುವ ಕಣದಲ್ಲಿ ತೋಮರ್ ಕಮಲ ಅರಳಿಸಲು ಏದುಸಿರು ಬಿಡುತ್ತಿದ್ದಾರೆ.

ಗ್ವಾಲಿಯರ್–ಚಂಬಲ್ ಭಾಗದಲ್ಲಿರುವ ದಿಮಾನಿ ಕ್ಷೇತ್ರವು ಬಿಜೆಪಿಗೆ ಕಷ್ಟದ ಕ್ಷೇತ್ರಗಳಲ್ಲಿ ಒಂದು. ರಾಜ್ಯದ ಮುಖ್ಯಮಂತ್ರಿಯಾಗಲು ನಾಲ್ಕೈದು ವರ್ಷಗಳಿಂದ ಹವಣಿಸುತ್ತಿರುವ ನರೇಂದ್ರ ಸಿಂಗ್ ಅವರಿಗೆ ಹೈಕಮಾಂಡ್ ಕಷ್ಟದ ಟಾಸ್ಕ್ ನೀಡಿದೆ. ತೋಮರ್ ಸ್ಪರ್ಧೆಯಿಂದ ಆಸುಪಾಸಿನ ಕ್ಷೇತ್ರಗಳಲ್ಲೂ ಪಕ್ಷಕ್ಕೆ ಅನುಕೂಲವಾಗಬಹುದು ಎಂಬುದು ಬಿಜೆಪಿ ವರಿಷ್ಠರ ಅಂದಾಜು. ಆದರೆ, ತೋಮರ್ ಅವರನ್ನು ಹಣಿಯಲು ಬಿಜೆಪಿಯ ಒಂದು ಗುಂಪು ಸದ್ದಿಲ್ಲದೆ ಕೆಲಸ ಮಾಡುತ್ತಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಸ್ಥಾನಕ್ಕೆ ತೋಮರ್ ಮೊದಲ ಆಯ್ಕೆಯಾಗುತ್ತಾರೆ ಎಂಬುದು ಈ ಬಣದ ಆತಂಕ.

2020ರಲ್ಲಿ ಇಲ್ಲಿ ಕಾಂಗ್ರೆಸ್ ಶಾಸಕರನ್ನು ಬಿಜೆಪಿ ‘ಆಪರೇಷನ್’ ಮಾಡಿತ್ತು. ಆ ಬಳಿಕ ನಡೆದ ಚುನಾವಣೆಯಲ್ಲಿ ಗೆಲುವು ಸಿಕ್ಕಿದ್ದು ಕಾಂಗ್ರೆಸ್‌ನ ರವೀಂದ್ರ ಸಿಂಗ್ ತೋಮರ್ ಅವರಿಗೆ. ಈ ಸಲವೂ ನರೇಂದ್ರನಿಗೆ ರವೀಂದ್ರ ಸವಾಲು ಒಡ್ಡಲು ಸಜ್ಜಾಗಿದ್ದಾರೆ. ಇಲ್ಲಿ ಬಹುಜನ ಸಮಾಜವಾದಿ ಪಕ್ಷ ಭದ್ರ ನೆಲೆ ಹೊಂದಿದೆ. 2013ರಲ್ಲಿ ಬಿಎಸ್‌ಪಿ ಗೆಲುವು ಸಾಧಿಸಿತ್ತು. ಆಗ ಗೆದ್ದಿದ್ದ ಬಲ್ವೀರ್ ಸಿಂಗ್ ದಂಡೋಟಿಯಾ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಠಾಕೂರರು ಕ್ಷೇತ್ರದಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಸುಮಾರು 60 ಸಾವಿರ ಮತದಾರರು ಇದ್ದಾರೆ. ನಂತರದ ಸ್ಥಾನದಲ್ಲಿರುವುದು ಬ್ರಾಹ್ಮಣರು ಹಾಗೂ ಪರಿಶಿಷ್ಟ ಜಾತಿಯವರು. ಬಿಎಸ್‌ಪಿ ಅಭ್ಯರ್ಥಿ ಬ್ರಾಹ್ಮಣ ಸಮುದಾಯದವರು. ‘ಕಾಂಗ್ರೆಸ್‌ನ ಒಂದಷ್ಟು ಮತಗಳನ್ನು ಬಿಎಸ್‌ಪಿ ಅಭ್ಯರ್ಥಿ ಕಿತ್ತು ಕೊಳ್ಳುತ್ತಾರೆ. ಬಿಎಸ್‌ಪಿ ಅಭ್ಯರ್ಥಿ ಹೆಚ್ಚು ಮತ ಪಡೆದಷ್ಟು ಬಿಜೆಪಿಗೆ ಅನುಕೂಲ. ಆಗ ತೋಮರ್ ಅವರು ಸುಲಭದಲ್ಲಿ ಗೆಲುವಿನ ದಡ ಮುಟ್ಟುತ್ತಾರೆ’ ಎಂಬುದು ಸ್ಥಳೀಯ ಬಿಜೆಪಿ ಮುಖಂಡ ಪ್ರಹ್ಲಾದ್ ಸಿಂಗ್ ತೋಮರ್ ವಿಶ್ವಾಸದಿಂದ ಹೇಳುತ್ತಾರೆ.

‘2018ರ ವಿಧಾನಸಭಾ ಚುನಾವಣೆಯಲ್ಲಿ ಗ್ವಾಲಿಯರ್–ಚಂಚಲ್ ಭಾಗದ 34 ಸ್ಥಾನಗಳ ಪೈಕಿ 26ರಲ್ಲಿ ಕಾಂಗ್ರೆಸ್ ಗೆದ್ದಿತ್ತು. ಬಿಜೆಪಿಗೆ ಹೆಚ್ಚು ಆಡಳಿತ ವಿರೋಧಿ ಅಲೆಯ ಬಿಸಿ ತಟ್ಟಿದ್ದು ಈ ಭಾಗದಲ್ಲೇ. ಈ ಸಲವೂ ಬಿಜೆಪಿ ಪರವಾದ ವಾತಾವರಣ ಇಲ್ಲ. ಬಿಜೆಪಿ ಹೈಕಮಾಂಡ್‌ಗೆ ಈ ಸುಳಿವು ಸಿಕ್ಕಿಯೇ ತೋಮರ್ ಸೇರಿದಂತೆ ಹಲವು ಸಂಸದರನ್ನು ರಾಜ್ಯ ರಾಜಕಾರಣಕ್ಕೆ ಕಳುಹಿಸಿದೆ. ಹಲವು ಶಾಸಕರಿಗೆ ಮುಲಾಜಿಲ್ಲದೆ ಟಿಕೆಟ್ ನಿರಾಕರಿಸಿದೆ. ಟಿಕೆಟ್ ಸಿಕ್ಕ ಮೇಲೆ 15 ದಿನ ಬಿಜೆಪಿ ಅಭ್ಯರ್ಥಿ ಕ್ಷೇತ್ರದತ್ತ ತಲೆ ಹಾಕಲೇ ಇಲ್ಲ. ಆ ಸಮಯದಲ್ಲಿ ಕಾಂಗ್ರೆಸ್ ಹಾಗೂ ಬಿಎಸ್‌ಪಿ ಅಭ್ಯರ್ಥಿಗಳು ಒಂದು ಸುತ್ತಿನ ಪ್ರಚಾರ ಮುಗಿಸಿದ್ದರು. ನಾಮಪತ್ರ ಸಲ್ಲಿಸಿದ ಬಳಿಕ ಸಚಿವರು ದಂಡು ಕಟ್ಟಿಕೊಂಡು ಬಿರುಸಿನ ಪ್ರಚಾರ ಮಾಡುತ್ತಿದ್ದಾರೆ’ ಎಂದು ಉಪನ್ಯಾಸಕ ಭುವನೇಶ್ ಸಿಂಗ್ ತೋಮರ್ ವಿಶ್ಲೇಷಿಸುತ್ತಾರೆ.



ನರೇಂದ್ರ ಸಿಂಗ್ ತೋಮರ್

ದಿಮಾನಿಯ ಹೋಟೆಲೊಂದರಲ್ಲಿ ಮಾತಿಗೆ ಸಿಕ್ಕ ಯುವಕ ದಿನೇಶ್ ಯಾದವ್, ‘ತೋಮರ್ ಅವರು ಮೂರು ಅವಧಿಗೆ ಶಾಸಕ ಆಗಿದ್ದರು. ರಾಜ್ಯದಲ್ಲಿ ಸಚಿವರೂ ಆಗಿದ್ದರು. ಕೇಂದ್ರ ಸಚಿವರೂ ಆಗಿದ್ದಾರೆ. ಆದರೆ, ಬಹುಕಾಲದಲ್ಲಿ ನೆನಪಿನಲ್ಲಿ ಉಳಿಯುವಂತಹ ಯೋಜನೆಗಳನ್ನು ಈ ಭಾಗಕ್ಕೆ ತಂದಿಲ್ಲ. ರಸ್ತೆಗಳ ಅಭಿವೃದ್ಧಿ ಮಾಡಿಸಿದ್ದಾರೆ. ಸಣ್ಣ ಅಣೆಕಟ್ಟುಗಳನ್ನು ಕಟ್ಟಿಸಿದ್ದಾರೆ. ಇಷ್ಟು ಮಾಡಿದರೆ ಸಾಕೇ’ ಎಂದು ಕೇಳುತ್ತಾರೆ.

ಅವರ ಜತೆಗಿದ್ದ ದಯಾಳ್ ಶರ್ಮಾ, ‘ಶಿವರಾಜ್ ಸಿಂಗ್ ಚೌಹಾಣ್ ಹಾಗೂ ನರೇಂದ್ರ ಸಿಂಗ್ ತೋಮರ್ ಅವರಿಗೆ ದೂರದೃಷ್ಟಿ ಇಲ್ಲ. ನರೇಂದ್ರ ಮೋದಿ ಅವರು 12 ವರ್ಷಗಳಲ್ಲೇ ಗುಜರಾತ್‌ನ ಸಮಗ್ರ ಅಭಿವೃದ್ಧಿ ಮಾಡಿದರು. ಪ್ರಧಾನಿಯಾಗಿ 9 ವರ್ಷಗಳಲ್ಲಿ ದೇಶದ ಚಹರೆ ಬದಲಿಸಿದ್ದಾರೆ. ಪಕ್ಕದ ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಎಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ’ ಎಂದರು. ‘ಯಾವ ಅಭಿವೃದ್ಧಿ’ ಎಂದು ಪ್ರಶ್ನಿಸಿದರೆ, ‘ನೂರಾರು ಎನ್‌ಕೌಂಟರ್ ಮಾಡಿಸಿದ್ದಾರಲ್ಲ’ ಎಂದು ಮಾರುತ್ತರ ನೀಡಿದರು. ‘ಅದು ಅಭಿವೃದ್ಧಿಯೇ’ ಎಂದು ಕೇಳಿದರೆ, ‘ಅಪರಾಧ ಕಡಿಮೆಯಾದರೆ ಅಭಿವೃದ್ಧಿ ತಂತಾನೆ ಆಗುತ್ತದೆ’ ಎಂದರು.

ಭೋಲರಾಂಪುರದ ಕೃಷಿಕ ಮಲ್ಖಾನ್ ಸಿಂಗ್, ‘ಕಳೆದ 10 ವರ್ಷಗಳಿಂದ ಇಲ್ಲಿ ಭಾರಿ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಕಾಂಗ್ರೆಸ್ ಹಾಗೂ ಬಿಎಸ್‌ಪಿ ಶಾಸಕರಿಗೆ ಅನುದಾನ ಸಿಕ್ಕಿದ್ದೇ ಕಡಿಮೆ. ಇಲ್ಲಿ ಬಿಜೆಪಿ ಶಾಸಕರು ಬಂದರೆ ಅಭಿವೃದ್ಧಿಗೆ ವೇಗ ಸಿಗಲಿದೆ’ ಎಂದು ಹೇಳುತ್ತಾರೆ. ‘ಮೊರೆನಾ ಕ್ಷೇತ್ರದಲ್ಲಿ ಗೆದ್ದು ನರೇಂದ್ರ ಸಿಂಗ್ ಅವರು ದೇಶದ ದೊಡ್ಡ ಮಂತ್ರಿ ಆಗಿದ್ದಾರೆ. ಅವರು ರಾಜ್ಯದಲ್ಲಿ ಉನ್ನತ ಸ್ಥಾನಕ್ಕೆ ಹೋಗಬೇಕು. ಅದಕ್ಕಾಗಿ ಅವರನ್ನು ಗೆಲ್ಲಿಸುತ್ತೇವೆ’ ಎಂದೂ ಹೇಳುತ್ತಾರೆ.

## ಚುನಾವಣಾ ಕಣದಲ್ಲಿ

- **‘ಮೋದಿ ಅವರದ್ದು ಕಣ್ಣೊರೆಸುವ ತಂತ್ರ’:** ಪರಿಶಿಷ್ಟ ಜಾತಿಗಳಲ್ಲಿ ವರ್ಗೀಕರಣ ಬೇಕು ಎಂದು ಮಾದಿಗ ಸಮುದಾಯ ಇಟ್ಟಿರುವ ಬೇಡಿಕೆಗೆ ಸಂಬಂಧಿಸಿದಂತೆ, ಆ ಸಮುದಾಯದ ಸಬಲೀಕರಣಕ್ಕೆ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ನೀಡಿರುವ ಭರವಸೆಯು ಕೇವಲ ಕಣ್ಣೊರೆಸುವ ತಂತ್ರ ಎಂದು ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ, ತೆಲಂಗಾಣ ಸಚಿವ ಕೆ.ಟಿ. ರಾಮರಾವ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ‘ಪರಿಶಿಷ್ಟ ಜಾತಿಗಳ ವರ್ಗೀಕರಣ ಕುರಿತು ನಾವು ಈಗಾಗಲೇ ವಿಧಾನಭೆಯಲ್ಲಿ ನಿರ್ಣಯ ಮಂಡಿಸಿದ್ದೇವೆ. ಮೋದಿ ಅವರು ಪ್ರಾಮಾಣಿಕರಾಗಿದ್ದರೆ ಅದನ್ನು ಜಾರಿಗೊಳಿಸಲಿ. ಈಗ ಸಮಿತಿ ರಚಿಸುವುದು ಎಂದರೆ ನ್ಯಾಯ ಇನ್ನಷ್ಟು ವಿಳಂಬವಾಗಲಿದೆ ಎಂದು ಅರ್ಥ’ ಎಂದರು.
- **‘ಚೌಹಾಣ್ ಉತ್ತಮ ನಟ’:** ‘ಈ ಬಾರಿಯ ವಿಧಾನಸಭೆಯಲ್ಲಿ ಜನರು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಬೀಳ್ಕೊಡುಗೆ ನೀಡಲಿದ್ದಾರೆ. ಆದರೆ, ಅವರೊಬ್ಬರು ಉತ್ತಮ ನಟರಾಗಿರುವ ಕಾರಣ ನಿರುದ್ಯೋಗಿ ಆಗಿ ಉಳಿಯುವುದಿಲ್ಲ’ ಎಂದು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ ಅವರು ವ್ಯಂಗ್ಯವಾಡಿದ್ದಾರೆ. ಸಾಗರ್ ಜಿಲ್ಲೆಯ ರಲ್ಲಿ ವಿಧಾನಸಭೆ ಕ್ಷೇತ್ರದಲ್ಲಿ ಭಾನುವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು. ಪೊಲೀಸರು, ಹಣ ಮತ್ತು ಅಧಿಕಾರದ ಮೂಲಕ ನಡೆಯುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ಇನ್ನು ನಾಲ್ಕು ದಿನಗಳು ಮಾತ್ರ ಇರುತ್ತದೆ ಎಂದರು.
- **‘ತೆಲಂಗಾಣದಲ್ಲಿ ಬಿಜೆಪಿಗೆ ಗೆಲುವು’:** ತೆಲಂಗಾಣದ ಘೋಶಾಮಹಲ್ ವಿಧಾನಸಭೆ ಕ್ಷೇತ್ರದಿಂದ ಮೂರನೇ ಬಾರಿಗೆ ಕಣಕ್ಕಿಳಿದಿರುವ ಬಿಜೆಪಿ ಶಾಸಕ ರಾಜಾ ಸಿಂಗ್ ಅವರು ರಾಜ್ಯದಲ್ಲಿ ಬಿಜೆಪಿ ಗೆದ್ದು ಸರ್ಕಾರ ರಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಜೊತೆಗೆ, ತಾವು ಮೂರನೇ ಬಾರಿಯೂ ಗೆಲ್ಲುವ ಭರವಸೆ ವ್ಯಕ್ತಪಡಿಸಿದ್ದಾರೆ. ರಾಜಾ ಸಿಂಗ್ ಅವರ ಎದುರು ನಂದ ಕಿಶೋರ್ ವ್ಯಾಸ್ ಅವರನ್ನು ಬಿಆರ್‌ಎಸ್ ಕಣಕ್ಕಿಳಿಸಿದೆ.

## ನುಡಿ–ಕಿಡಿ



ಜನರಿಗೆ ನೀಡಿರುವ ಯಾವ ಭರವಸೆಯನ್ನೂ ಕಾಂಗ್ರೆಸ್ ಈಡೇರಿಸುವುದಿಲ್ಲ. ಕಮಲ್ ನಾಥ್ ಅವರನ್ನು ನಂಬಲು ಸಾಧ್ಯವಿಲ್ಲ. ಜನರಲ್ಲಿ ಗೊಂದಲ ಮೂಡಿಸಲು ಕಮಲ್ ನಾಥ್ ಪ್ರಯತ್ನಿಸುತ್ತಿದ್ದಾರೆ

**ಶಿವರಾಜ್ ಸಿಂಗ್ ಚೌಹಾಣ್,** ಮಧ್ಯಪ್ರದೇಶ ಮುಖ್ಯಮಂತ್ರಿ



ದೇಶದಲ್ಲಿ ಹಣದುಬ್ಬರ ಹೆಚ್ಚಾಗಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕಾರಣ. ಛತ್ತೀಸಗಢದಲ್ಲಿ ಕಾಂಗ್ರೆಸ್ ಪುನಃ ಅಧಿಕಾರಕ್ಕೇರಿದರೆ ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ನೆರವು ಸಿಗಲಿದೆ. ಇದು ಕಾಂಗ್ರೆಸ್‌ನ ಗ್ಯಾರಂಟಿ. ಬಿಜೆಪಿಯಂತೆ ಕಾಂಗ್ರೆಸ್ ಹುಸಿ ಭರವಸೆಗಳನ್ನು ನೀಡುವುದಿಲ್ಲ.

**ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)



ಝಾಬುಆ ವಿಧಾನಸಭಾ ಕ್ಷೇತ್ರದಲ್ಲಿ ಮತ ಯಾಚಿಸುವ ಸಲುವಾಗಿ ಅಭ್ಯರ್ಥಿಗಳು ಖಾಟ್ಲಾ ಬೈಠಕ್ ನಡೆಸಿದರು–ಪಿಟಿಐ ಚಿತ್ರ

# ಮತದಾರರ ಸೆಳೆಯಲು ಖಾಟ್ಲಾ ಸಭೆ

ಝಾಬುಆ (ಪಿಟಿಐ): ಬುಡಕಟ್ಟು ಸಮುದಾಯಗಳ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಮಧ್ಯಪ್ರದೇಶದ ಝಾಬುಆ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಗಳು ಸ್ಥಳೀಯ ಮಾರುಕಟ್ಟೆ ಪ್ರದೇಶಗಳಲ್ಲಿ ಮೆರವಣಿಗೆ, ಜನರ ನಡುವೆ ಖಾಟ್ಲಾ ಸಭೆ ಮೂಲಕವೇ ಈಗಲೂ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ನಗರ ಪ್ರದೇಶಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸಿ ಚುನಾವಣಾ ಪ್ರಚಾರ ನಡೆಸುವ ಪರಿಪಾಠ ಹೆಚ್ಚಾಗುತ್ತಿರುವ ಈ ಕಾಲಘಟ್ಟದಲ್ಲಿ ಇಲ್ಲಿ ಈ ಸಂಪ್ರದಾಯ ಇನ್ನೂ ಜಾರಿಯಲ್ಲಿದೆ.

ಖಾಟ್ಲಾ ಸಭೆಗಳು (ಗ್ರಾಮಸ್ಥರ ಜೊತೆ ನಡೆಸುವ ಸಭೆ) ಮತ್ತು ಹಾಟ್ ಮೆರವಣಿಗೆಗಳು (ಸ್ಥಳೀಯ ಮಾರುಕಟ್ಟೆ ಪ್ರದೇಶದಲ್ಲಿ ನಡೆಸುವ ಮೆರವಣಿಗೆಗಳು) ಹೆಚ್ಚು ಪರಿಣಾಮಕಾರಿ ಆಗಿರುತ್ತವೆ. ಝಾಬುಆ ಕ್ಷೇತ್ರದಲ್ಲಿ ಚದುರಿಹೋಗಿರುವ ಮತದಾರರ ಜೊತೆ ಸಂಪರ್ಕ ಸಾಧಿಸಲು ಅನುಕೂಲ ಆಗುತ್ತದೆ ಎಂಬುದು ಇಲ್ಲಿನ ಅಭ್ಯರ್ಥಿಗಳ ಅಭಿಪ್ರಾಯವಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ವಿಕ್ರಾಂತ್ ಭೂರಿಯಾ ಅವರು ಈಚೆಗಷ್ಟೇ ಈ ಕ್ಷೇತ್ರದಲ್ಲಿ ಖಾಟ್ಲಾ ಸಭೆ ನಡೆಸಿದ್ದರು. ‘ಖಾಟ್ಲಾ ಸಭೆಗಳು ಆದಿವಾಸಿ ಸಮುದಾಯಗಳ ಸಂಸ್ಕೃತಿಯ ಜೊತೆ ಮಿಳಿತಗೊಂಡಿವೆ. ಚುನಾವಣೆಯಷ್ಟೇ ಅಲ್ಲದೆ, ಬೇರೆ ಸಮಯದಲ್ಲೂ ಜನರು ಖಾಟ್ಲಾ ಸಭೆಗಳ ಮೂಲಕ ಸಮಸ್ಯೆಗಳನ್ನು ಇತ್ಯರ್ಥ ಮಾಡಿಕೊಳ್ಳುತ್ತಾರೆ’ ಎಂದು ಭೂರಿಯಾ ಹೇಳುತ್ತಾರೆ.

ಬೋರಿ ಗ್ರಾಮದಲ್ಲಿ ಹಾಟ್ ಮೆರವಣಿಗೆ ನಡೆಸಿದ ಬಿಜೆಪಿ ಅಭ್ಯರ್ಥಿ ಭಾನು ಭೂರಿಯಾ, ‘ನಗರ ಪ್ರದೇಶಗಳಲ್ಲಿ ಸಾಮಾಜಿಕ ಜಾಲತಾಣಗಳು ಪ್ರಸಿದ್ಧಿ ಪಡೆದಿರಬಹುದು. ಆದರೆ ಖಾಟ್ಲಾ ಸಭೆಗಳು ಮತ್ತು ಹಾಟ್ ಮೆರವಣಿಗೆಗಳು ಇಲ್ಲಿ ತಮ್ಮದೇ ಆದ ಸೊಬಗು ಹೊಂದಿವೆ’ ಎಂದರು.

# ಬಂಡಾಯ ಶಮನಕ್ಕೆ ಯತ್ನ

## ತೆಲಂಗಾಣ: ಬಿಆರ್‌ಎಸ್ ಸೋಲಿಸುವ ವಿಶ್ವಾಸದಲ್ಲಿ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಅಚ್ಚರಿಯ ಗೆಲುವು ದಾಖಲಿಸುವ ಸಾಧ್ಯತೆ ತನಗೆ ಇದೆ ಎಂಬ ಅಂದಾಜು ಸಿಕ್ಕ ನಂತರದಲ್ಲಿ ಕಾಂಗ್ರೆಸ್ ಪಕ್ಷವು, ಆಂತರಿಕ ಭಿನ್ನಮತ ಶಮನ ಮಾಡುವ ಪ್ರಯತ್ನಕ್ಕೆ ಮುಂದಾಗಿದೆ.



ರೇವಂತ್ ರೆಡ್ಡಿ

ಟಿಕೆಟ್ ಹಂಚಿಕೆ ವಿಚಾರವಾಗಿ ಅಸಮಾಧಾನ ಹೊಂದಿರುವ ಹಿರಿಯ ನಾಯಕರ ಪೈಕಿ ಹಲವರ ಮನವೊಲಿಸಲು ಪ್ರಯತ್ನಿಸುತ್ತಿದೆ.

ಟಿಕೆಟ್ ವಂಚಿತರು ಪಕ್ಷದ ವಿರುದ್ಧ ಬಂಡಾಯ ಏಳುವುದರಿಂದ ಉಂಟಾಗಬಹುದಾದ ಹಾನಿಯನ್ನು ತಡೆಯಲು ರಾಜ್ಯ ನಾಯಕರು ನಡೆಸುತ್ತಿರುವ ಪ್ರಯತ್ನವು ಯಶಸ್ಸು ಕಾಣುತ್ತಿಲ್ಲ ಎಂದು ಹಿರಿಯ ನಾಯಕರಿಗೆ ಅನಿಸಿದೆ. ಹೀಗಾಗಿ ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಕಳೆದ ವಾರ ಹೈದರಾಬಾದ್‌ಗೆ ತೆರಳಿ ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದ್ದಾರೆ.

15 ಮಂದಿ ಹಿರಿಯ ನಾಯಕರು, ಟಿಕೆಟ್ ವಂಚಿತರ ಜೊತೆ ವೇಣುಗೋಪಾಲ್ ಅವರು ಗುರುವಾರ ರಾತ್ರಿ ಸಭೆ ನಡೆಸಿದ್ದಾರೆ. ಇದರಿಂದಾಗಿ ಪರಿಸ್ಥಿತಿ ಸ್ವಲ್ಪಮಟ್ಟಿಗೆ ತಿಳಿಯಾಗಿದೆ. ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರ ವಿರುದ್ಧ ಹಲವು ಮುಖಂಡರು ಅಸಮಾಧಾನ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಭಾಗಿಯಾಗಿದ್ದ ಪ್ರಮುಖರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಅಧ್ಯಕ್ಷ ಟಿ. ಜಗ್ಗಾ ರೆಡ್ಡಿ, ಪರಿಶಿಷ್ಟ ವರ್ಗಗಳ ರಾಷ್ಟ್ರೀಯ ಉಪಾಧ್ಯಕ್ಷ ಬೆಳ್ಳಯ್ಯ ನಾಯ್ಕ್, ಮಾಜಿ ಸಚಿವ ಬಲರಾಮ್ ನಾಯ್ಕ್ ಅವರೂ ಸೇರಿದ್ದಾರೆ. ಇವರು ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವಷ್ಟು ಶಕ್ತರು ಎಂದು ಮನಗಂಡ ಕಾಂಗ್ರೆಸ್, ಇವರ ಸಮಸ್ಯೆಗಳನ್ನು ಆಲಿಸಲು ತ್ವರಿತಗತಿಯಲ್ಲಿ ಮುಂದಡಿ ಇಟ್ಟಿತು. ತೆಲಂಗಾಣ ಕಾಂಗ್ರೆಸ್‌ನ ಭಿನ್ನಮತ ಶಮನ ಮಾಡುವ ಕೆಲಸವನ್ನು ವೇಣುಗೋಪಾಲ್ ಅವರಿಗೆ ವಹಿಸಲಾಗಿತ್ತು.

‘ಪಕ್ಷ ಅಧಿಕಾರಕ್ಕೆ ಬಂದರೆ, ನಿಮ್ಮ ಹಿತಾಸಕ್ತಿಗಳನ್ನು ರಕ್ಷಿಸಲಾಗುತ್ತದೆ. ನಿಮ್ಮ ರಾಜಕೀಯ ಜೀವನದ ಹಿತ ಕಾಯಲಾಗುತ್ತದೆ. ಆದರೆ ಪಕ್ಷ ವಿರೋಧಿ ಚಟುವಟಿಕೆ ಸಹಿಸಲಾಗದು’ ಎಂದು ವೇಣುಗೋಪಾಲ್ ಅವರು ಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

2014ರಲ್ಲಿ ತೆಲಂಗಾಣ ರಚನೆಯಾದ ಬಳಿಕ ಇದೇ ಮೊದಲ ಬಾರಿಗೆ ಬಿಆರ್‌ಎಸ್ ಪಕ್ಷವನ್ನು ಸೋಲಿಸುವ ಅವಕಾಶ ಕಾಂಗ್ರೆಸ್‌ಗೆ ದೊರಕಿದೆ. 2024ರ ಲೋಕಸಭೆ ಚುನಾವಣೆ ಸನ್ನಿಹಿತವಾಗುತ್ತಿರುವುದರಿಂದ ಈ ಗೆಲುವು ಪಕ್ಷಕ್ಕೆ ಹುರುಪು ತುಂಬಲಿದೆ ಎಂದು ವೇಣುಗೋಪಾಲ್ ಅವರು ಬಂಡಾಯ ನಾಯಕರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎನ್ನಲಾಗಿದೆ.

ಬಂಡಾಯವೆದ್ದಿದ್ದ ನಾಯಕರಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ. ಪಕ್ಷವು ಬಹುಮತ ಪಡೆಯುವ ವಿಶ್ವಾಸವು ಇನ್ನಷ್ಟು ಹೆಚ್ಚಾಗಿದೆ ಎಂದು ಮೂಲಗಳು ಹೇಳಿವೆ.

ಆಕ್ರಮಣಕಾರಿ ಧೋರಣೆಯೊಂದಿಗೆ ಚುನಾವಣಾ ಕಣದಲ್ಲಿರುವ ಕಾಂಗ್ರೆಸ್, ಬಿಆರ್‌ಎಸ್ ಮುಖ್ಯಸ್ಥ, ರಾಜ್ಯದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರೆದುರು ಕಾಮಾರೆಡ್ಡಿ ಕ್ಷೇತ್ರದಲ್ಲಿ ರೇವಂತ್ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ. ಪಕ್ಷದ ನಾಯಕ, ತಾರಾ ಪ್ರಚಾರಕ ರಾಹುಲ್ ಗಾಂಧಿ ಅವರು ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ಹತ್ತಕ್ಕೂ ಹೆಚ್ಚು ರ‍್ಯಾಲಿಗಳನ್ನು ನಡೆಸಿದ್ದಾರೆ. 119 ಸದಸ್ಯಬಲದ ತೆಲಂಗಾಣ ವಿಧಾನಸಭೆಗೆ ನವಂಬರ್ 30ರಂದು ಚುನಾವಣೆ ನಡೆಯಲಿದೆ.

# ಶಾಸಕನ ಮೇಲೆ ಹಲ್ಲೆ

ಹೈದರಾಬಾದ್ (ಪಿಟಿಐ): ನಾಗರ ಕರ್ನೂಲ್ ಜಿಲ್ಲೆಯ ಅಚಂಪೇಟ್ ಪಟ್ಟಣದಲ್ಲಿ ಕಾಂಗ್ರೆಸ್ ಹಾಗೂ ಬಿಆರ್‌ಎಸ್ ಕಾರ್ಯಕರ್ತರ ನಡುವೆ ನಡೆದ ಘರ್ಷಣೆಯಲ್ಲಿ ಆಡಳಿತಾರೂಢ ಬಿಆರ್‌ಎಸ್ ಶಾಸಕ ಗುವ್ವಲ ಬಾಲರಾಜು ಮೇಲೆ ಹಲ್ಲೆ ನಡೆದಿರುವ ದೂರು ದಾಖಲಿಸಿಕೊಂಡಿರುವುದಾಗಿ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಅಚಂಪೇಟ್ ಕ್ಷೇತ್ರದಿಂದ ಸ್ಪರ್ಧಿಸಿರುವ ಬಾಲರಾಜು ಅವರ ಮೇಲೆ ಶನಿವಾರ ರಾತ್ರಿ ದಾಳಿ ನಡೆಸಲಾಗಿದೆ. ಅವರು ಗಾಯಗೊಂಡಿದ್ದಾರೆ ಎಂದು ಬಿಆರ್‌ಎಸ್ ದೂರು ನೀಡಿದೆ.

ಗಾಯಗೊಂಡಿರುವ ಬಾಲರಾಜು ಅವರನ್ನು ಹೈದರಾಬಾದ್ ಆಸ್ಪತ್ರೆಗೆ ಕರೆದೊಯ್ದು, ನಂತರ ಅಲ್ಲಿಂದ ಬಿಡುಗಡೆ ಮಾಡಲಾಗಿದೆ. ಘರ್ಷಣೆಯಲ್ಲಿ ತಮ್ಮ ಕೆಲವು ಸದಸ್ಯರು ಗಾಯಗೊಂಡಿದ್ದಾರೆ ಎಂದು ಕಾಂಗ್ರೆಸ್ ಕಾರ್ಯಕರ್ತರೂ ಪೊಲೀಸರಿಗೆ ದೂರು ನೀಡಿದ್ದಾರೆ. ಶನಿವಾರ ರಾತ್ರಿ ಘರ್ಷಣೆ ನಡೆದಿದ್ದು, ಈ ಸಂದರ್ಭದಲ್ಲಿ ಕಲ್ಲು ತೂರಾಟವೂ ವರದಿಯಾಗಿದೆ.

ಪೊಲೀಸರು ಮಧ್ಯಪ್ರವೇಶಿಸಿ ಉದ್ರಿಕ್ತ ಗುಂಪನ್ನು ಚದುರಿಸಿದರು. ಪ್ರಚಾರ ಮುಗಿಸಿ ಹಿಂದಿರುಗುತ್ತಿದ್ದಾಗ ಶಾಸಕರ ಬೆಂಗಾವಲು ವಾಹನವನ್ನು ಕೆಲವು ಕಾಂಗ್ರೆಸ್ ಕಾರ್ಯಕರ್ತರು ತಡೆದು, ಶಾಸಕರು ವಿತರಿಸಲು ಹಣವನ್ನು ಸಾಗಿಸುತ್ತಿದ್ದಾರೆ ಎಂದು ಆರೋಪಿಸಿದ ಸಂದರ್ಭದಲ್ಲಿ ಘರ್ಷಣೆ ನಡೆದಿದೆ.

# ಕಮಲ್ ನಾಥ್ ಹೊರಗಿನವರು: ಚೌಹಾಣ್

ಭೋಪಾಲ್ (ಪಿಟಿಐ): ‘ಕಾಂಗ್ರೆಸ್ ನಾಯಕ ಕಮಲ್ ನಾಥ್ ಹೊರಗಿನವರು. ಹಾಗಾಗಿ ಅವರನ್ನು ನಂಬಲು ಸಾಧ್ಯವಿಲ್ಲ’ ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಭಾನುವಾರ ಹೇಳಿದ್ದಾರೆ.

ಬೆರಾಸಿಯಾ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಪ್ರತಿಪಕ್ಷ ಕಾಂಗ್ರೆಸ್ ಗೊಂದಲ ಸೃಷ್ಟಿಸುತ್ತದೆ ಮತ್ತು ಸುಳ್ಳು ಭರವಸೆಗಳನ್ನು ನೀಡುತ್ತದೆ. ಹೀಗಾಗಿ ಜನ ತಪ್ಪು ಮಾಡಬಾರದು’ ಎಂದು ಎಚ್ಚರಿಕೆ ನೀಡಿದರು.

‘ಜನರೊಂದಿಗೆ ಯಾವುದೇ ಸಂಬಂಧವಿಲ್ಲದ ಕಾರಣ ಕಾಂಗ್ರೆಸ್ ತನ್ನ ಭರವಸೆಗಳನ್ನು ಈಡೇರಿಸುವುದಿಲ್ಲ. ಅದೇನೇ ಇದ್ದರೂ, ಕಮಲ್ ನಾಥ್ ಅವರು ಮಧ್ಯಪ್ರದೇಶದವರಲ್ಲ. ನಾವು ಇಲ್ಲಿಯೇ ಜನಿಸಿದ್ದೇವೆ. ಅವರು (ನಾಥ್) ಎಲ್ಲಿ ಜನಿಸಿದರು, ನನಗೆ ಹೇಳಿ’ ಎಂದು ಪ್ರಶ್ನಿಸಿದರು.

# ಶಿವಸೇನಾ ಬಣ ಸಮರ ಉಲ್ಬಣ

ಪ್ರಜಾವಾಣಿ ವಾರ್ತೆ

ಮುಂಬೈ: 2024ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಂತೆ ಹಾಗೂ ಅನರ್ಹತೆ ಪ್ರಕ್ರಿಯೆ ವೇಗ ಪಡೆಯುತ್ತಿದ್ದಂತೆ, ಉದ್ಧವ್ ಠಾಕ್ರೆ ಮತ್ತು ಏಕನಾಥ್ ಶಿಂದೆ ನೇತೃತ್ವದ ಉಭಯ ಶಿವಸೇನಾ ಬಣಗಳ ನಡುವಿನ ವಾಕ್ಸಮರ ಮಹಾರಾಷ್ಟ್ರದಲ್ಲಿ ಉಲ್ಬಣಗೊಳ್ಳುತ್ತಿದೆ.

2022ರ ಜೂನ್ ತಿಂಗಳಲ್ಲಿ ಶಿಂದೆ ಅವರು ಠಾಕ್ರೆ ನೇತೃತ್ವದ ಮಹಾ ವಿಕಾಸ್ ಆಘಾಡಿ ಸರ್ಕಾರ ಉರುಳಿಸಿ ಬಿಜೆಪಿ ಬೆಂಬಲದೊಂದಿಗೆ ಮುಖ್ಯಮಂತ್ರಿಯಾದರು. ಈಗ ಪಕ್ಷದ ಹೆಸರು ‘ಶಿವಸೇನಾ’ ಮತ್ತು ಪಕ್ಷದ ‘ಬಿಲ್ಲು-ಬಾಣ’ ಚಿಹ್ನೆಯ ಮೇಲೆ ಹಿಡಿತ ಹೊಂದಿದ್ದಾರೆ.

ಮುಖ್ಯಮಂತ್ರಿ ಶಿಂದೆ ಹಾಗೂ ಅವರ ಬಣದ ಶಾಸಕರ ಅನರ್ಹತೆ ಸಂಬಂಧ ಸಲ್ಲಿಸಿರುವ ಅರ್ಜಿಗಳನ್ನು ಡಿಸೆಂಬರ್ 31ರೊಳಗೆ ಇತ್ಯರ್ಥಪಡಿಸುವಂತೆ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ಸುಪ್ರೀಂ ಕೋರ್ಟ್ ತಾಕೀತು ಮಾಡಿದೆ. ಈಗ ಶಿಂದೆ ಪ್ರಮುಖ ಸವಾಲು ಎದುರಿಸುತ್ತಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಯ ನಾಗಪುರ ಅಧಿವೇಶನವು ಡಿಸೆಂಬರ್ 7ರಿಂದ ಪ್ರಾರಂಭ ವಾಗಲಿದೆ. ರಾಜ್ಯದಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸುಗೊಂಡಿರುವ ಕಾರಣ ಉಭಯ ಬಣಗಳು ಸಕ್ರಿಯವಾಗಿವೆ.

ಕಳೆದ 25ರಿಂದ 30 ವರ್ಷಗಳಿಂದ ಇದ್ದ ‘ಶಾಖಾ’ (ಪಕ್ಷದ ಸ್ಥಳೀಯ ಕಚೇರಿ) ಕಟ್ಟಡ ನೆಲಸಮಗೊಳಿಸುವ ವಿಚಾರದಲ್ಲಿ ಕೆಲ ದಿನಗಳಿಂದ ಮುಂಬ್ರಾದಲ್ಲಿ ಉದ್ವಿಗ್ನತೆ ಉಂಟಾಗಿದೆ. ಕಚೇರಿಯನ್ನು ನವೆಂಬರ್ 3ರಂದು ಕೆಡವಲಾಯಿತು. ಶಿಂದೆ ಬಣದ ಸದಸ್ಯರು ಅದರ ನಿಯಂತ್ರಣ ತೆಗೆದುಕೊಂಡರು.

ಈ ಘಟನೆಯು ಠಾಕ್ರೆ ಅವರು ಸ್ಥಳಕ್ಕೆ ಭೇಟಿ ನೀಡುವಂತೆ ಮಾಡಿತು. ಆದರೆ, ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದ ಕಾರಣ ಅವರಿಗೆ ಒಳಗೆ ಹೋಗಲು ಆಗಲಿಲ್ಲ.

‘ನೀವು ಪೋಸ್ಟರ್‌ಗಳನ್ನು ಹರಿದು ಹಾಕಿದ ರೀತಿಯಲ್ಲಿ, ಮುಂದಿನ ಚುನಾವಣೆಯಲ್ಲಿ ನಾವು ನಿಮ್ಮನ್ನು ಹರಿದುಹಾಕುತ್ತೇವೆ. ಅಧಿಕಾರದಲ್ಲಿ ಉನ್ನತ ಸ್ಥಾನದಲ್ಲಿರುವ ಗದ್ದರ್‌ಗಳಿಗೆ (ದ್ರೋಹಿಗಳಿಗೆ) ಪಾಠ ಕಲಿಸಲಾಗುವುದು. ಸ್ಥಳೀಯ ಆಡಳಿತ ಮತ್ತು ಪೊಲೀಸರು ಅಸಹಾಯಕರಾಗಿದ್ದಾರೆ ಎಂದು ತೋರುತ್ತದೆ’ ಎಂದು ಠಾಕ್ರೆ ಆಕ್ರೋಶ ವ್ಯಕ್ತಪಡಿಸಿದರು.

ಮುಂಬ್ರಾದ ಜನರು ಅವರ (ಠಾಕ್ರೆ) ಭೇಟಿ ಸಮಯದಲ್ಲಿ ತಮ್ಮ ಶಕ್ತಿ ತೋರಿಸಿದರು. ಜನರ ಶಕ್ತಿಯ ಮುಂದೆ ಅವರ ಆಟ ಏನೂ ನಡೆಯುವುದಿಲ್ಲ ಎಂದು ಉದ್ದವ್ ಠಾಕ್ರೆ ವಿರುದ್ಧ ಶಿಂದೆ ವಾಗ್ದಾಳಿ ನಡೆಸಿದರು.

# ತೆಲಂಗಾಣ: 119 ಸ್ಥಾನಗಳಿಗೆ 4,798 ಅಭ್ಯರ್ಥಿಗಳ ನಾಮಪತ್ರ

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆಗೆ ನವೆಂಬರ್ 30ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ 119 ಸ್ಥಾನಗಳಿಗೆ ಒಟ್ಟು 4,798 ಅಭ್ಯರ್ಥಿಗಳು 5,716 ಸೆಟ್ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ನವೆಂಬರ್ 13ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ನವೆಂಬರ್ 15 ಕೊನೆಯ ದಿನ.

ಗಜ್ವೇಲ್ ವಿಧಾನಸಭಾ ಕ್ಷೇತ್ರದಲ್ಲಿ ಗರಿಷ್ಠ 145 ಅಭ್ಯರ್ಥಿಗಳು ಇದ್ದಾರೆ. ಬಿಆರ್‌ಎಸ್ ಅಧ್ಯಕ್ಷ ಮತ್ತು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಗಜ್ವೇಲ್ ಕ್ಷೇತ್ರದಿಂದ ಮರು ಆಯ್ಕೆ ಬಯಸಿದ್ದಾರೆ. ಬಿಜೆಪಿ ಮುಖಂಡ ಈಟೆಲ ರಾಜೇಂದ್ರ ಅಲ್ಲಿಂದ ನಾಮಪತ್ರ ಸಲ್ಲಿಸಿದ ಪ್ರಮುಖರ ಪೈಕಿ ಒಬ್ಬರು.

ರಾವ್ ಸ್ಪರ್ಧಿಸುತ್ತಿರುವ ಮತ್ತೊಂದು ಕ್ಷೇತ್ರವಾದ ಕಾಮಾರೆಡ್ಡಿಯಲ್ಲಿ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ಎ. ರೇವಂತ್ ರೆಡ್ಡಿ ಸೇರಿದಂತೆ 92 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮೆಡ್ಚಾಲ್ ಕ್ಷೇತ್ರದಲ್ಲಿ 116 ಅಭ್ಯರ್ಥಿಗಳು ಹಾಗೂ ನಾರಾಯಣಪೇಟ್‌ನಲ್ಲಿ 13 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ, ಸಚಿವ ಕೆ.ಟಿ.ರಾಮರಾವ್ ಪ್ರತಿನಿಧಿಸುವ ಸಿರಿಸಿಲ್ಲ ಕ್ಷೇತ್ರದಲ್ಲಿ 36 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರೆ, ಸಿದ್ದಿಪೇಟೆಯಲ್ಲಿ ಹಣಕಾಸು ಸಚಿವ ಟಿ.ಹರೀಶ್ ರಾವ್ ಸೇರಿದಂತೆ 62 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಆಡಳಿತಾರೂಢ ಬಿಆರ್‌ಎಸ್ ಎಲ್ಲ 119 ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ಕಾಂಗ್ರೆಸ್ 118 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ ಮತ್ತು ಉಭಯ ಪಕ್ಷಗಳ ನಡುವಿನ ಹೊಂದಾಣಿಕೆಯ ಭಾಗವಾಗಿ ಸಿಪಿಐಗೆ ಒಂದು ಸ್ಥಾನ ಬಿಟ್ಟುಕೊಟ್ಟಿದೆ. ತೆಲಂಗಾಣದಲ್ಲಿ ಬಿಆರ್‌ಎಸ್ ಮಿತ್ರ ಪಕ್ಷವಾದ ಆಲ್ ಇಂಡಿಯಾ ಮಜ್ಲಿಸ್-ಇ-ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಒಂಬತ್ತು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಬಿಜೆಪಿ 111 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದು, ಎಂಟು ಸ್ಥಾನಗಳನ್ನು ತನ್ನ ಎನ್‌ಡಿಎ ಮಿತ್ರ ಪಕ್ಷ ಪವನ್ ಕಲ್ಯಾಣ್ ಅವರ ಜನಸೇನಾಗೆ ಬಿಟ್ಟುಕೊಟ್ಟಿದೆ. ಚುನಾವಣೆಗೆ ಸಂಬಂಧಿಸಿದಂತೆ ಈವರೆಗೆ ನಗದು ಸೇರಿದಂತೆ ₹544 ಕೋಟಿ ಮೌಲ್ಯದ ವಸ್ತುಗಳನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

# ಶಿಫಾ ಆಸ್ಪತ್ರೆ ಮೇಲೆ ದಾಳಿ?

ಖಾನ್ ಯೂನಿಸ್ (ಎಪಿ/ ಎಎಫ್‌ಪಿ): ಗಾಜಾ ಪಟ್ಟಿಯಲ್ಲಿ ಇರುವ ಅಲ್ ಶಿಫಾ ಆಸ್ಪತ್ರೆಯ ಸುತ್ತಮುತ್ತ ಇಸ್ರೇಲ್ ಸೇನಾ ಪಡೆಯು ಭಾನುವಾರ ವಾಯು ಹಾಗೂ ಕ್ಷಿಪಣಿ ದಾಳಿ ನಡೆಸಿದ್ದು, ಆಸ್ಪತ್ರೆಯಲ್ಲಿರುವ ರೋಗಿಗಳು, ವೈದ್ಯಕೀಯ ಸಿಬ್ಬಂದಿ ಹಾಗೂ ಆಶ್ರಯ ಪಡೆದಿರುವ ಜನರು ಆತಂಕಗೊಂಡಿದ್ದಾರೆ.

**ಹೃದಯ ಚಿಕಿತ್ಸೆ ವಾರ್ಡ್ ಧ್ವಂಸ:** ಆಸ್ಪತ್ರೆಯ ಹೃದಯ ಚಿಕಿತ್ಸೆ ವಿಭಾಗದ ವಾರ್ಡ್‌ವೊಂದು ಇಸ್ರೇಲ್ ದಾಳಿಗೆ ಧ್ವಂಸವಾಗಿದೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ. ಆಸ್ಪತ್ರೆ ಮೇಲೆ ನಡೆದಿರುವ ದಾಳಿಯನ್ನು ಪ್ರತ್ಯಕ್ಷದರ್ಶಿಯೊಬ್ಬರು ಖಚಿತಪಡಿಸಿದ್ದಾರೆ. ಆದರೆ, ಖುದ್ದಾಗಿ ಪರಿಶೀಲಿಸಲು ಸಾಧ್ಯವಾಗಿಲ್ಲ ಎಂದು ಎಎಫ್‌ಪಿ ಸುದ್ದಿಸಂಸ್ಥೆ ತಿಳಿಸಿದೆ.

ಉದ್ದೇಶಪೂರ್ವಕವಾಗಿ ಆಸ್ಪತ್ರೆ ಮೇಲೆ ದಾಳಿ ನಡೆಸಿಲ್ಲ ಎಂದು ಇಸ್ರೇಲ್ ಸೇನೆ ಹೇಳಿದೆ.

ಇನ್‌ಕ್ಯೂಬೇಟರ್‌ನಲ್ಲಿರುವ 40 ಮಕ್ಕಳು ಸೇರಿದಂತೆ ಆಸ್ಪತ್ರೆಯಲ್ಲಿ 650ಕ್ಕೂ ಹೆಚ್ಚು ರೋಗಿಗಳು ಇದ್ದಾರೆ. 15 ಸಾವಿರಕ್ಕೂ ಹೆಚ್ಚು ನಿರಾಶ್ರಿತರು ವಾಸ್ತವ್ಯ ಹೂಡಿದ್ದಾರೆ. ಎಲ್ಲರೂ ಈಗ ಜೀವನ್ಮರಣ ಪರಿಸ್ಥಿತಿ ಎದುರಿಸುತ್ತಿದ್ದಾರೆ.

‘ಆಸ್ಪತ್ರೆಯ ಸುತ್ತ ಇಸ್ರೇಲ್ ಸೇನಾ ಯೋಧರು ಮೊಕ್ಕಾಂ ಹೂಡಿದ್ದಾರೆ. ಆವರಣದೊಳಗೆ ಯಾವ ಕ್ಷಣದಲ್ಲಾದರೂ ದಾಳಿ ನಡೆಸಬಹುದು’ ಎಂದು ಆರೋಗ್ಯ ಸಚಿವಾಲಯದ ಅಧೀನ ಕಾರ್ಯದರ್ಶಿ ಮುನೀರ್ ಅಲ್-ಬೋರ್ಷ್ ಆತಂಕ ವ್ಯಕ್ತಪಡಿಸಿದ್ದಾರೆ.



ದಕ್ಷಿಣ ಗಾಜಾ ಪಟ್ಟಿಯ ಖಾನ್ ಯೂನಿಸ್ ನಗರದಲ್ಲಿ ಇಸ್ರೇಲ್ ಪಡೆ ಭಾನುವಾರ ನಡೆಸಿದ ಬಾಂಬ್ ದಾಳಿಯ ನಂತರ ಧ್ವಂಸಗೊಂಡ ಕಟ್ಟಡದ ಅವಶೇಷಗಳಡಿ ಬದುಕುಳಿದವರಿಗಾಗಿ ನಾಗರಿಕರು ಹುಡುಕಾಟ ನಡೆಸಿದರು– ಎಎಫ್‌ಪಿ ಚಿತ್ರ



ಇಸ್ರೇಲ್–ಹಮಾಸ್ ಸಮರ

# ಇಸ್ರೇಲ್ ನಡೆಗೆ ಖಂಡನೆ: ವಿಶ್ವಸಂಸ್ಥೆ ನಿರ್ಣಯವನ್ನು ಬೆಂಬಲಿಸಿದ ಭಾರತ

ಒಂದನೇ ಪುಟದಿಂದ

ಒಟ್ಟು 193 ರಾಷ್ಟ್ರಗಳು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸದಸ್ಯತ್ವ ಪಡೆದಿವೆ. ಅಕ್ಟೋಬರ್‌ನಲ್ಲಿ ನಡೆದ ವಿಶ್ವಸಂಸ್ಥೆಯ 10ನೇ ತುರ್ತು ವಿಶೇಷ ಅಧಿವೇಶನದಲ್ಲಿ ಗಾಜಾ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಜೋರ್ಡಾನ್ ನಿರ್ಣಯ ಮಂಡಿಸಿತ್ತು. ಬಾಂಗ್ಲಾದೇಶ, ಮಾಲ್ದೀವ್ಸ್, ಪಾಕಿಸ್ತಾನ, ರಷ್ಯಾ, ದಕ್ಷಿಣ ಆಫ್ರಿಕಾ ಸೇರಿದಂತೆ 40ಕ್ಕೂ ಹೆಚ್ಚು ರಾಷ್ಟ್ರಗಳು ಜೋರ್ಡಾನ್ ನಿರ್ಧಾರಕ್ಕೆ ಸಹಮತ ಸೂಚಿಸಿದ್ದವು.

ಗಾಜಾ ಪಟ್ಟಿ ಜನರ ರಕ್ಷಣೆ ಹಾಗೂ ಮಾನವೀಯ ಕಟ್ಟುಪಾಡುಗಳನ್ನು ಕಾಪಾಡುವುದಕ್ಕೆ ಸಂಬಂಧಿಸಿದ ಈ ನಿರ್ಣಯದ ಪರ 120 ದೇಶಗಳು ಮತ ಚಲಾಯಿಸಿದ್ದವು. 14 ದೇಶಗಳು ವಿರೋಧಿಸಿದ್ದರೆ, 45 ರಾಷ್ಟ್ರಗಳು ದೂರ ಉಳಿದಿದ್ದವು.

ಇಸ್ರೇಲ್ ವಿರುದ್ಧ ಹಮಾಸ್ ನಡೆಸಿದ ದಾಳಿ ಬಗ್ಗೆ ನಿರ್ಣಯದಲ್ಲಿ ಪ್ರಸ್ತಾಪಿಸಿಲ್ಲ ಎಂದು ಭಾರತವು ದೂರ ಉಳಿದಿತ್ತು.

ಇಸ್ರೇಲ್ ಹಾಗೂ ಹಮಾಸ್ ನಡುವಿನ ಯುದ್ಧದಿಂದಾಗಿ ಗಾಜಾಪಟ್ಟಿನಲ್ಲಿ ಜನಜೀವನ ಸಂಕಷ್ಟಕ್ಕೆ ಸಿಲುಕಿದೆ. ಹಾಗಾಗಿ, ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕು ಎಂಬುದು ವಿಶ್ವಸಂಸ್ಥೆಯ ಒತ್ತಾಯವಾಗಿದೆ. ವಿಶ್ವದ ಹಲವು ರಾಷ್ಟ್ರಗಳು ಹಾಗೂ ಮಾನವ ಹಕ್ಕು ಸಂಘಟನೆಗಳ ಆಗ್ರಹವಾಗಿದೆ. ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿರುವ ಇಸ್ರೇಲ್ ಪ್ರಜೆಗಳನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಬೇಕು. ಅಲ್ಲಿಯವರೆಗೂ ಹಮಾಸ್ ವಿರುದ್ಧದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವುದಿಲ್ಲ ಹಾಗೂ ಕದನ ವಿರಾಮ ಘೋಷಿಸುವ ಪ್ರಶ್ನೆಯೇ ಇಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪುನರುಚ್ಚರಿಸಿದ್ದಾರೆ.

18 ಸಾವಿರ ಕುಟುಂಬಕ್ಕೆ ಆಧಾರವಾಗಿರುವ ಜವಳಿ ಉದ್ಯಮ

# ರಾಮರಾವ್ ಭವಿಷ್ಯ ನಿರ್ಧರಿಸಲಿರುವ ಸಿರಿಸಿಲ್ಲ

ಹೈದರಾಬಾದ್ (ಪಿಟಿಐ); ತೆಲಂಗಾಣದ ಸಿರಿಸಿಲ್ಲ ಕ್ಷೇತ್ರದಲ್ಲಿ 18 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಆಧಾರವಾದ, ಒಂದು ಸಾವಿರ ಕೋಟಿ ರೂಪಾಯಿ ವಹಿವಾಟಿನ ಜವಳಿ ಉದ್ಯಮವು ನ.30ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ, ಸಚಿವ ಕೆ.ಟಿ.ರಾಮರಾವ್ ಸೇರಿದಂತೆ ಹಲವರ ಭವಿಷ್ಯ ನಿರ್ಧರಿಸಲಿದೆ.

**ಮುಖ್ಯಾಂಶಗಳು**

- **ಬೀಡಿ ಕಾರ್ಮಿಕರಿಗೆ ಜೀವನೋಪಾಯ ಒದಗಿಸುವ ಯತ್ನ**
- **ನಾಲ್ಕು ಬಾರಿ ಶಾಸಕರಾಗಿರುವ ರಾಮರಾವ್**

ಉದ್ಯೋಗವಿಲ್ಲದೆ ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಆದರೆ, ಈಗ ಪರಿಸ್ಥಿತಿ ಸುಧಾರಿಸಿದೆ. ಬತುಕಮ್ಮ ಹಬ್ಬದ ಸಂದರ್ಭದಲ್ಲಿ ವಿತರಿಸಿದ ಉಚಿತ ಸೀರೆಗಳನ್ನು ತಯಾರಿಸಲು ಇಲ್ಲಿನ ಮಗ್ಗಗಳಿಗೆ ಕಾರ್ಯಾದೇಶ ನೀಡಿದ್ದು ಸೇರಿದಂತೆ ರಾಜ್ಯ ಸರ್ಕಾರದ ನಿರಂತರ ಸಹಕಾರವು ಇಲ್ಲಿನ ಪರಿಸ್ಥಿತಿಯ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ತಜ್ಞರು ಹೇಳುತ್ತಾರೆ.

ಮನೇರು ನದಿ ದಡದಲ್ಲಿರುವ ಸಿರಿಸಿಲ್ಲ, ಇಲ್ಲಿಂದ ಸುಮಾರು 170 ಕಿ.ಮೀ. ದೂರದಲ್ಲಿದೆ. ಹೆಚ್ಚಿನ ಸಂಖ್ಯೆಯ ವಿದ್ಯುತ್ ಮಗ್ಗಗಳು, ಜವಳಿ ಸಂಸ್ಕರಣೆ ಮತ್ತು ಬಣ್ಣ ಹಾಕುವ ಘಟಕಗಳ ಸ್ಥಾಪನೆಯಿಂದಾಗಿ ಜವಳಿ ಪಟ್ಟಣ ಎಂದು ಜನಪ್ರಿಯವಾಗಿದೆ.

ಸಿರಿಸಿಲ್ಲದಿಂದ ಜನರು ಉದ್ಯೋಗದ ಕೊರತೆಯಿಂದಾಗಿ ಇತರ ಸ್ಥಳಗಳಿಗೆ ವಲಸೆ ಹೋಗುತ್ತಿದ್ದರು. ತೆಲಂಗಾಣ ರಾಜ್ಯ ರಚನೆಯಾದ ನಂತರ ಪರಿಸ್ಥಿತಿ ಬದಲಾಯಿತು. ರಾಮರಾವ್ ಈ ಕ್ಷೇತ್ರದಿಂದ ಶಾಸಕರಾದರು. ಕೊಂಡೂರು ರವೀಂದರ್ ರಾವ್ ಅವರು ಈ ವಿಭಾಗದಲ್ಲಿ ಬಿಆರ್‌ಎಸ್ ಅಭಿಯಾನದ ಉಸ್ತುವಾರಿ ವಹಿಸಿದ್ದಾರೆ.

'ಈಗ ನೇಕಾರ ಸಮುದಾಯಕ್ಕೆ ಹೇರಳವಾದ ಕೆಲಸವಿದೆ. ಇತರ ರಾಜ್ಯಗಳಿಂದ ಕಾರ್ಮಿಕರು ಬಂದು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಸಂಪೂರ್ಣ ಶ್ರೇಯಸ್ಸು ಕೆ.ಟಿ. ರಾಮರಾವ್ ಅವರಿಗೆ ಸಲ್ಲುತ್ತದೆ. ಅವರು ನಾಲ್ಕು ಬಾರಿ ಶಾಸಕರಾಗಿದ್ದಾರೆ’ ಎಂದು ರವೀಂದರ್ ರಾವ್ ತಿಳಿಸುತ್ತಾರೆ.

ಸಿರಿಸಿಲ್ಲದಲ್ಲಿ ಹೊಸದಾಗಿ ಸ್ಥಾಪಿಸಲಾದ ಅಪೆರಲ್ ಪಾರ್ಕ್ ಮೂಲಕ ಸುಮಾರು 10,000 ಬೀಡಿ ಕಾರ್ಮಿಕರಿಗೆ ಜೀವನೋಪಾಯ ಒದಗಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಹೇಳುತ್ತಾರೆ.

ಸಿರಿಸಿಲ್ಲ ಕ್ಷೇತ್ರದಿಂದ 2009ರಲ್ಲಿ ಮೊದಲ ಬಾರಿಗೆ ಆಯ್ಕೆಯಾದ ರಾಮರಾವ್, 2010 ರಲ್ಲಿ ಪ್ರತ್ಯೇಕ ತೆಲಂಗಾಣ ಚಳವಳಿಯ ಸಮಯದಲ್ಲಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆದರೆ ಅದೇ ಪ್ರತಿಸ್ಪರ್ಧಿಯ ವಿರುದ್ಧ ಉಪಚುನಾವಣೆಯಲ್ಲಿ ಭಾರಿ ಅಂತರದಿಂದ ಗೆದ್ದರು. 2014 ಮತ್ತು 2018 ರಲ್ಲಿ ಕೂಡ ರಾಮರಾವ್ ಆಯ್ಕೆಯಾದರು.


ಈ ಬಾರಿ ಕಾಂಗ್ರೆಸ್‌ನಿಂದ ಕೆ.ಕೆ.ಮಹೇಂದರ್ ರೆಡ್ಡಿ ಸ್ಪರ್ಧಿಸಿದ್ದರೆ, ಬಿಜೆಪಿಯಿಂದ ರಾಣಿ ರುದ್ರಮಾ ಕಣಕ್ಕಿಳಿದಿದ್ದಾರೆ.

ಚುನಾವಣೆ ಘೋಷಣೆಯಾದಾಗ ಮಾತ್ರ ಕಾಂಗ್ರೆಸ್ ಪ್ರತಿಸ್ಪರ್ಧಿ ಮಹೇಂದರ್ ರೆಡ್ಡಿ ಕ್ಷೇತ್ರಕ್ಕೆ ಬರುತ್ತಾರೆ ಎಂದು ರಾಮರಾವ್ ಆರೋಪಿಸಿದ್ದಾರೆ.

ಸಿರಿಸಿಲ್ಲಗೆ ರೈಲ್ವೆ ಮಾರ್ಗ ತರುವುದು ಮತ್ತು ನಾಗರಿಕ ಮೂಲಸೌಕರ್ಯ ಒದಗಿಸುವಂತಹ ಭರವಸೆಗಳನ್ನು ಈಡೇರಿಸುವಲ್ಲಿ ರಾಮರಾವ್ ವಿಫಲರಾಗಿದ್ದಾರೆ ಎಂದು ಮಹೇಂದರ್ ರೆಡ್ಡಿ ದೂರಿದ್ದಾರೆ. ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದು ಹೇಳುವ ಬಿಜೆಪಿ ಅಭ್ಯರ್ಥಿ ರಾಣಿ ರುದ್ರಮಾ, ಕ್ಷೇತ್ರದಲ್ಲಿ ಮೂಲಸೌಕರ್ಯ ಒದಗಿಸುವಲ್ಲಿ ರಾಮರಾವ್ ವಿಫಲರಾಗಿದ್ದಾರೆ. 14 ವರ್ಷ ಶಾಸಕರಾಗಿದ್ದರೂ 14 ದಿನವೂ ಕ್ಷೇತ್ರಕ್ಕೆ ಹಾಜರಾಗಿಲ್ಲ ಎಂದು ಆರೋಪಿಸುತ್ತಾರೆ.

# ಮಹಿಳೆಯರಿಗೆ ವಾರ್ಷಿಕ ₹15 ಸಾವಿರ: ಬಘೇಲ್ ಭರವಸೆ


ರಾಯಪುರ (ಪಿಟಿಐ): ಛತ್ತೀಸಗಢದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಉಳಿಸಿಕೊಂಡರೆ, ರಾಜ್ಯದ ಮಹಿಳೆಯರಿಗೆ ಪ್ರತಿ ವರ್ಷ ₹15 ಸಾವಿರ ನೆರವು ಒದಗಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹೇಳಿದ್ದಾರೆ.



ನವೆಂಬರ್ 17ರಂದು ಛತ್ತೀಸಗಢದ ವಿಧಾನಸಭಾ ಚುನಾವಣೆಯ ಎರಡನೆಯ ಹಂತದ ಮತದಾನ ನಡೆಯಲಿದೆ. ಈ ಸಂದರ್ಭದಲ್ಲಿ ಬಘೇಲ್ ಅವರು ಈ ಘೋಷಣೆ ಮಾಡಿದ್ದಾರೆ. ಅಲ್ಲದೆ, ಬಿಜೆಪಿಯು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ, ಅಧಿಕಾರಕ್ಕೆ ಬಂದರೆ ವಿವಾಹಿತ ಮಹಿಳೆಯರಿಗೆ ವರ್ಷಕ್ಕೆ ₹12 ಸಾವಿರ ನೀಡುವುದಾಗಿ ಭರವಸೆ ನೀಡಿದೆ.

ಬಘೇಲ್ ಘೋಷಣೆಯು ಬಿಜೆಪಿ ನೀಡಿರುವ ಭರವಸೆಗೆ ಪ್ರತಿಯಾಗಿ ಬಂದಿದೆ ಎನ್ನಲಾಗಿದೆ. ರಾಜ್ಯದ ವಿಧಾನ ಸಭೆಗೆ ಮೊದಲ ಸುತ್ತಿನ ಮತದಾನವು ನವೆಂಬರ್ 7ರಂದು ನಡೆದಿದೆ.

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 19,425 |
| ಇಂದಿನ ಅಂತ್ಯ | 19,525 |
| ▲ | 100 |
| ದಿನದ ಗರಿಷ್ಠ | 19,547 |

## ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹243-465

ದ್ವಿತಳಿ (ಬಿ.ವಿ) ₹345-556

# ಎಐ ಆಧಾರಿತ ಡಿಜಿಟಲ್ ಹೆಲ್ತ್ ಕಿಯೋಸ್ಕ್ ಬಿಡುಗಡೆ

ತಿರುವನಂತಪುರ (ಪಿಟಿಐ): ಕೇರಳದ ನವೋದ್ಯಮ ವರ್ಸಿಕಲ್ಸ್ ಟೆಕ್ನಾಲಜೀಸ್ 'ಡಿಜಿಟಲ್ ಹೆಲ್ತ್ ಕಿಯೋಸ್ಕ್'ಗೆ ಚಾಲನೆ ನೀಡಿದೆ. ಇದು ರಕ್ತದೊತ್ತಡ, ಮಧುಮೇಹ ಮತ್ತು ಹೃದಯದ ಸ್ಥಿತಿಯನ್ನು ತ್ವರಿತವಾಗಿ ಬಹು ಭಾಷೆಗಳಲ್ಲಿ ಅತ್ಯಂತ ನಿಖರವಾಗಿ ತಿಳಿಸುತ್ತದೆ ಮತ್ತು ಶುಲ್ಕವು ಅತ್ಯಂತ ಕಡಿಮೆ. ಇಂತಹ ಕಿಯೋಸ್ಕ್ ಅನ್ನು ಇದೇ ಮೊದಲ ಬಾರಿಗೆ ಅಭಿವೃದ್ಧಿಪಡಿಸಲಾಗಿದೆ ಎಂದು ನವೋದ್ಯಮವು ಹೇಳಿಕೊಂಡಿದೆ.

ಪ್ರಾಗ್ನಾಸಿಸ್ ಎಂಬ ಹೆಸರಿನ ಈ ಕಿಯೋಸ್ಕ್, ಬಳಕೆದಾರರಿಗೆ ಕೃತಕ ಬುದ್ಧಿಮತ್ತೆ ಹಾಗೂ ಧ್ವನಿ ಆಧಾರಿತ ವಿಡಿಯೊ ಸೂಚನೆ ನೀಡುವ ಟಚ್ ಸ್ಕ್ರೀನ್ ಅನ್ನು ಹೊಂದಿದೆ. ಕಿಯೋಸ್ಕ್‌ನಲ್ಲಿ ಬಳಕೆದಾರರ ರಕ್ತದೊತ್ತಡ, ಮಧುಮೇಹ, ಇಸಿಜಿ, ತಾಪಮಾನ ಮತ್ತು ತೂಕವನ್ನು ಅಳೆಯುವ ಯಂತ್ರಗಳಿವೆ ಎಂದು ಕಂಪನಿಯು ತಿಳಿಸಿದೆ.

ಕಿಯೋಸ್ಕ್ ಒಂದೇ ನಿಮಿಷದಲ್ಲಿ ಫಲಿತಾಂಶ ಒದಗಿಸುತ್ತದೆ ಹಾಗೂ ಆರೋಗ್ಯ ಸ್ಥಿತಿಯಲ್ಲಿ ಏರುಪೇರಿದ್ದರೆ ಅಗತ್ಯ ಸೂಚನೆಗಳನ್ನೂ ನೀಡುತ್ತದೆ. ಆಸ್ಪತ್ರೆ, ಕಚೇರಿ, ಮಾಲ್ ಮತ್ತು ಜಿಮ್‌ನಂತಹ ಸ್ಥಳಗಳಲ್ಲಿ ಡಿಜಿಟಲ್ ಕಿಯೋಸ್ಕ್ ಅನ್ನು ಅಳವಡಿಸಬಹುದಾಗಿದೆ ಎಂದು ಕಂಪನಿ ಮಾಹಿತಿ ನೀಡಿದೆ.

ವರ್ಸಿಕಲ್ಸ್ ಟೆಕ್ನಾಲಜೀಸ್ ಸಂಸ್ಥಾಪಕ ಕಿರಣ್ ಕರುಣಾಕರನ್ ಮಾತನಾಡಿ, ಈ ತಂತ್ರಜ್ಞಾನವು ಜನರ ಮೂಲಭೂತ ಆರೋಗ್ಯ ತಪಾಸಣೆಯ ವಿಧಾನದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದೆ. ಹೃದಯಬಡಿತ, ಡಯಾಬಿಟಿಸ್ ಅನ್ನು ಸುಲಭ ಮತ್ತು ನಿಖರವಾಗಿ ಗುರುತಿಸಲಿದೆ. ವೈದ್ಯಕೀಯ ಸವಲತ್ತನ್ನು ಸರಿಯಾದ ಸಮಯದಲ್ಲಿ ದೊರೆಯುವಂತೆ ಮಾಡಲಿದೆ ಎಂದು ತಿಳಿಸಿದರು.

# ಗಳಿಕೆಯಲ್ಲಿ ಅಂತ್ಯವಾದ ಮುಹೂರ್ತದ ವಹಿವಾಟು

ಮುಂಬೈ (ಪಿಟಿಐ): ದೀಪಾವಳಿ ಪ್ರಯುಕ್ತ ದೇಶದ ಷೇರುಮಾರುಕಟ್ಟೆಗಳಲ್ಲಿ ಭಾನುವಾರ ನಡೆದ ವಿಶೇಷ ಮುಹೂರ್ತ ವಹಿವಾಟು ಸಕಾರಾತ್ಮಕ ಅಂತ್ಯ ಕಂಡಿದೆ. ಮುಂಬೈ ಷೇರುಪೇಟೆ (ಬಿಎಸ್‌ಇ) ಸಂವೇದಿ ಸೂಚ್ಯಂಕ ಮತ್ತು ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಸೂಚ್ಯಂಕವು ಶೇ 0.50ಕ್ಕಿಂತಲೂ ಹೆಚ್ಚು ಗಳಿಕೆ ಕಂಡಿವೆ. ಭಾನುವಾರ ಸಂಜೆ 6ರಿಂದ 7.15ರವರೆಗೆ ಮುಹೂರ್ತದ ವಹಿವಾಟು ನಡೆಯಿತು.

ಬಿಎಸ್‌ಇ ಸಂವೇದಿ ಸೂಚ್ಯಂಕವು ವಿಶೇಷ ವಹಿವಾಟು ಅವಧಿಯಲ್ಲಿ 354.77 ಅಂಶಗಳಷ್ಟು (ಶೇ 0.55) ಏರಿಕೆಯಾಗಿ, 65,259.45ಕ್ಕೆ ತಲುಪಿತು. ಎನ್‌ಎಸ್‌ಇಯ ನಿಫ್ಟಿ50 ಸೂಚ್ಯಂಕವು 100.20 ಅಂಶಗಳಷ್ಟು (ಶೇ0.52) ಏರಿಕೆ ಕಂಡು, 19,525.55ರಲ್ಲಿ ವಹಿವಾಟು ಅಂತ್ಯಗೊಂಡಿತು. ಐ.ಟಿ., ಮೂಲಸೌಕರ್ಯ ಮತ್ತು ಇಂಧನಕ್ಕೆ ಸಂಬಂಧಿಸಿದ ಷೇರುಗಳು ಹೆಚ್ಚು ಗಳಿಕೆ ಕಂಡಿವೆ. ಈ ವಹಿವಾಟು ಷೇರುದಾರರ ಏಳಿಗೆಗೆ ಮತ್ತು ಹಣಕಾಸು ವೃದ್ಧಿಗೆ ಕಾರಣವಾಗುತ್ತದೆ ಎನ್ನುವ ನಂಬಿಕೆ ಇದೆ. ಈ ವೇಳೆ ವಹಿವಾಟು ನಡೆಸುವುದರಿಂದ ಹೂಡಿಕೆದಾರರಿಗೆ ವರ್ಷವಿಡೀ ಅನುಕೂಲ ಆಗುತ್ತದೆ. ಹೊಸ ಕೆಲಸ ಆರಂಭಿಸಲು ದೀಪಾವಳಿಯು ಹೆಚ್ಚು ಸೂಕ್ತ ಎಂದು ಪರಿಗಣಿಸಲಾಗುತ್ತದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

# ಏನಿದು ಲಿಕ್ವಿಡ್ ಫಂಡ್? ಯಾರಿಗೆ ಸೂಕ್ತ ?



**ಹಣಕಾಸು ಸಾಕ್ಷರತೆ**

**ರಾಜೇಶ್ ಕುಮಾರ್ ಟಿ.ಆರ್.**

ಏನಿದು ಲಿಕ್ವಿಡ್ ಫಂಡ್? ಡೆಟ್ ಫಂಡ್ ಮಾದರಿಯಲ್ಲಿ ಬರುವ ಪ್ರಮುಖ ಫಂಡ್‌ಗಳಲ್ಲಿ ಲಿಕ್ವಿಡ್ ಮ್ಯೂಚುಯಲ್ ಫಂಡ್ ಕೂಡ ಒಂದು. 7 ದಿನಗಳಿಂದ ಒಂದು ವರ್ಷದೊಳಗಿನ ಹೂಡಿಕೆಗೆ ಲಿಕ್ವಿಡ್ ಮ್ಯೂಚುಯಲ್ ಫಂಡ್‌ಗಳು ಸರಿ ಹೊಂದುತ್ತವೆ. ಲಿಕ್ವಿಡ್ ಫಂಡ್‌ಗಳಲ್ಲಿ ನಗದೀಕರಣ ಸುಲಭ. ಹಣ ಅಗತ್ಯ ಎನಿಸಿದಾಗ 24 ಗಂಟೆಗಳ ಒಳಗೆ ಹೂಡಿಕೆ ಹಿಂಪಡೆಯಬಹುದು. ಹಾಗಾಗಿ ತುರ್ತು ಅಗತ್ಯಗಳಿಗೆ ಬೇಕಾಗುವ ಹಣವನ್ನು ಲಿಕ್ವಿಡ್ ಫಂಡ್‌ನಲ್ಲಿ ಹೂಡಿಕೆ ಮಾಡಬಹುದು. ಇದು ಹೆಚ್ಚು ರಿಸ್ಕ್ ಇಲ್ಲದಿರುವ ಮಾದರಿಯ ಹೂಡಿಕೆಯಾಗಿದ್ದು ಬ್ಯಾಂಕ್ ಉಳಿತಾಯ ಖಾತೆ ಮತ್ತು ಅಲ್ಪಾವಧಿ ಫಿಕ್ಸೆಡ್ ಡೆಪಾಸಿಟ್‌ಗಿಂತ ಕೊಂಚ ಹೆಚ್ಚು ಲಾಭಾಂಶ ಕೊಡುವ ಸಾಮರ್ಥ್ಯವಿದೆ.

**ಲಿಕ್ವಿಡ್ ಫಂಡ್‌ಗಳು ಎಲ್ಲಿ ಹಣ ತೊಡಗಿಸುತ್ತವೆ:** ಹೂಡಿಕೆದಾರನಿಗೆ ಅಗತ್ಯ ಬಿದ್ದಾಗ ಲಿಕ್ವಿಡ್ ಫಂಡ್ ಗಳಲ್ಲಿ ಹೂಡಿಕೆ ಮಾಡಿರುವ ಹಣ ಹಿಂಪಡೆಯುವ ಅವಕಾಶ ಇರುವುದರಿಂದ ಷೇರು ಮಾರುಕಟ್ಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮದ ಪ್ರಕಾರ, ಹೆಚ್ಚು ರಿಸ್ಕ್ ಇರುವ ಕಡೆ ಲಿಕ್ವಿಡ್ ಫಂಡ್‌ಗಳು ಹೂಡಿಕೆ ಮಾಡುವಂತಿಲ್ಲ. ಲಿಕ್ವಿಡ್ ಫಂಡ್‌ಗಳು ಹೂಡಿಕೆದಾರರ ಹಣವನ್ನು ನಿಶ್ಚಿತ ಆದಾಯ ತಂದುಕೊಡುವ, 91 ದಿನಗಳಲ್ಲಿ ಮೆಚ್ಯೂರಿಟಿ ಹೊಂದುವಂತಹ ಸರ್ಕಾರಿ ಬಾಂಡ್‌ಗಳು, ಟ್ರಷರಿ ಬಿಲ್ ಗಳು, ಕಮರ್ಶಿಯಲ್ ಪೇಪರ್‌ಗಳಲ್ಲಿ ತೊಡಗಿಸಬಹುದು. ಇಷ್ಟೇ ಅಲ್ಲ, ಒಂದು ನಿರ್ದಿಷ್ಟ ವಲಯದಲ್ಲಿ ಶೇ 25 ಕ್ಕಿಂತ ಹೆಚ್ಚಿಗೆ ತೊಡಗಿಸುವಂತಿಲ್ಲ.

**ಲಿಕ್ವಿಡ್ ಫಂಡ್‌ಗಳಲ್ಲಿ ಲಾಭ ಎಷ್ಟು:** ಲಿಕ್ವಿಡ್ ಫಂಡ್‌ಗಳು ಹೂಡಿಕೆದಾರರಿಂದ ಪಡೆದ ಹಣವನ್ನು ಸಾಲದ ರೂಪದಲ್ಲಿ ಬೇರೆಯವರಿಗೆ ನೀಡಿ ಅದರಿಂದ ಬರುವ ಬಡ್ಡಿಯಿಂದ ಆದಾಯ ಗಳಿಸುತ್ತವೆ. ಲಿಕ್ವಿಡ್ ಮ್ಯೂಚುಯಲ್ ಫಂಡ್‌ಗಳು ಕಳೆದ ಒಂದು ವರ್ಷದ ಅವಧಿಯಲ್ಲಿ ಸರಾಸರಿ ಶೇ 6.94 ರಷ್ಟು ಲಾಭಾಂಶ ಕೊಟ್ಟಿವೆ.

3 ವರ್ಷಗಳ ಸರಾಸರಿ ಲೆಕ್ಕಾಚಾರದಲ್ಲಿ ಶೇ 4.84 ರಷ್ಟು ಲಾಭಾಂಶ ಕೊಟ್ಟಿವೆ. 5 ವರ್ಷಗಳ ಸರಾಸರಿ ಅಂದಾಜು ಮಾಡಿದಾಗ ಶೇ 5.25 ರಷ್ಟು ಲಾಭ ಒದಗಿಸಿವೆ. ಹಾಗಾಗಿ ಬ್ಯಾಂಕ್ ಉಳಿತಾಯ ಖಾತೆಯಲ್ಲಿ ಸಿಗುವ ಶೇ 3 ರಿಂದ ಶೇ 3.5 ರಷ್ಟು ಬಡ್ಡಿಗಿಂತ ಹೆಚ್ಚು ಲಾಭ ಇಲ್ಲಿ ದಕ್ಕುತ್ತದೆ.

**ಎಸ್‌ಐಪಿ ಹೂಡಿಕೆ ಸಾಧ್ಯವೇ , ಶುಲ್ಕ ಎಷ್ಟು, ಯಾರು ಹೂಡಿಕೆ ಮಾಡಬಹುದು:** ಲಿಕ್ವಿಡ್ ಫಂಡ್‌ಗಳಲ್ಲಿ ಎಸ್‌ಐಪಿ ಮತ್ತು ಲಮ್‌ಸಮ್ (ದೊಡ್ಡ ಮೊತ್ತದ) ಹೂಡಿಕೆ ಮಾಡಬಹುದು. ಈ ಫಂಡ್‌ಗಳ ನಿರ್ವಹಣೆಗೆ ಫಂಡ್ ಹೌಸ್‌ಗಳು ಶೇ 0.25 ರಿಂದ ಶೇ 1 ರಷ್ಟು ಶುಲ್ಕ ಪಡೆಯುತ್ತವೆ. ಉಳಿತಾಯ ಖಾತೆಯಲ್ಲಿ ಹೆಚ್ಚುವರಿ ಹಣ ಹೊಂದಿರುವವರು, ತುರ್ತು ನಿಧಿಗೆ ಅವಶ್ಯಕವಿರುವ ಹಣ ಇಟ್ಟುಕೊಳ್ಳಬೇಕು ಎನ್ನುವವರು, ತಾತ್ಕಾಲಿಕವಾಗಿ ಅಂದರೆ ಒಂದು ವಾರದಿಂದ ಒಂದೆರಡು ತಿಂಗಳ ಕಾಲ ದೊಡ್ಡ ಮೊತ್ತದ ಹಣವನ್ನು ಸುರಕ್ಷಿತವಾಗಿ ಇಡಬೇಕು ಎನ್ನುವವರು, ಅಲ್ಪಾವಧಿ ಫಿಕ್ಸೆಡ್ ಡೆಪಾಸಿಟ್ ಮಾಡುವ ಆಲೋಚನೆ ಇರುವವರು ಲಿಕ್ವಿಡ್ ಮ್ಯೂಚುಯಲ್ ಫಂಡ್ ಪರಿಗಣಿಸಬಹುದು. ಹೂಡಿಕೆ ಮಾಡಿದ ಏಳು ದಿನಗಳ ಒಳಗಾಗಿ ಮೊತ್ತ ವಾಪಸ್ ಪಡೆಯಬೇಕಾದರೆ ಎಕ್ಸಿಟ್ ಲೋಡ್ ಶುಲ್ಕ ಕಟ್ಟಬೇಕಾಗುತ್ತದೆ. 7 ದಿನಗಳ ನಂತರದಲ್ಲಿ ಹೂಡಿಕೆ ಹಣ ಹಿಂಪಡೆದರೆ ಯಾವುದೇ ಶುಲ್ಕವಿರುವುದಿಲ್ಲ.

**ಲಿಕ್ವಿಡ್ ನೈಟ್ ಫಂಡ್‌ಗೆ ತೆರಿಗೆ ಹೇಗೆ:** ಲಿಕ್ವಿಡ್ ಫಂಡ್‌ನಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಅವಧಿಯ ಹೂಡಿಕೆಗೆ ನಿರ್ದಿಷ್ಟ ವ್ಯಕ್ತಿಯ ಆದಾಯ ತೆರಿಗೆ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಪಾವತಿಸಬೇಕಾಗುತ್ತದೆ. ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಯ ಹೂಡಿಕೆಗೆ ದೀರ್ಘಾವಧಿ ಬಂಡವಾಳ ತೆರಿಗೆ (ಎಲ್‌ಟಿಸಿಜಿ) ಅನ್ವಯಿಸುತ್ತದೆ. ಈ ಬೆಲೆ ಏರಿಕೆಯನ್ನು ಗಣನೆಗೆ ತೆಗೆದುಕೊಂಡು (ಇಂಡೆಕ್ಸೇಷನ್) ಇಲ್ಲಿ ಶೇ 20 ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

## ಎರಡನೇ ವಾರವೂ ಗಳಿಕೆ ಕಂಡ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಗಳಿಕೆ ದಾಖಲಿಸಿವೆ. 64,904 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.84 ರಷ್ಟು ಗಳಿಕೆ ಕಂಡಿದೆ. 19,425 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1 ರಷ್ಟು ಹೆಚ್ಚಳವಾಗಿದೆ. ತೈಲ ಬೆಲೆ ಇಳಿಕೆ, ಹಬ್ಬದ ಖರೀದಿ ಭರಾಟೆ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಹೆಲ್ತ್‌ಕೇರ್ ಸೂಚ್ಯಂಕ ಶೇ 4, ಬಿಎಸ್‌ಇ ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 3, ಬಿಎಸ್‌ಇ ಮೆಟಲ್ ಸೂಚ್ಯಂಕ ಶೇ 3 ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 2.6 ರಷ್ಟು ಗಳಿಕೆ ಕಂಡಿವೆ.

**ಏರಿಕೆ ಇಳಿಕೆ:** ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಹಿಂದೂಸ್ಥಾನ್ ಏರೊನಾಟಿಕ್ಸ್, ನೈಕಾ, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ಇನ್ಫೊ ಎಡ್ಜ್, ಜೈಡಸ್ ಲೈಫ್ ಸೈನ್ಸಸ್ ಮತ್ತು ವರುಣ್ ಬಿವರೇಜಸ್ ಗಳಿಕೆ ದಾಖಲಿಸಿವೆ. ಮಿಡ್ ಕ್ಯಾಪ್‌ನಲ್ಲಿ ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಅರಬಿಂದೊ ಫಾರ್ಮಾ, ಆಲ್ಕೆಂ ಲ್ಯಾಬೊರೇಟರಿಸ್, ಆರತಿ ಇಂಡಸ್ಟ್ರೀಸ್, ಪವರ್ ಫೈನಾನ್ಸ್ ಕಾರ್ಪೊರೇಷನ್, ಸೋಲಾರ್ ಇಂಡಸ್ಟ್ರೀಸ್ ಗಳಿಕೆ ಕಂಡಿವೆ. ಜೀ ಎಂಟರ್‌ಟೇನ್ಮೆಂಟ್ ಎಂಟರ್ ಪ್ರೈಸಸ್, ಪಿರಾಮಲ್ ಎಂಟರ್ ಪ್ರೈಸಸ್, ಮುತ್ತೋಟ್ ಫೈನಾನ್ಸ್, ಇಂಡಿಯನ್ ಬ್ಯಾಂಕ್ ಮತ್ತು ಶ್ರೀರಾಮ್ ಫೈನಾನ್ಸ್ ಕುಸಿತ ಕಂಡಿವೆ.

**ಮುನ್ನೋಟ:** ಈ ವಾರ ಅಡ್ವಾನಿ ಹೊಟೇಲ್ಸ್ ಅಂಡ್ ರೆಸಾರ್ಟ್ಸ್ ಲಿ., ಕೊನಾರ್ಕ್ ಇಂಜಿನಿಯರ್ಸ್ ಲಿ., ಎಕ್ಸಿಕಾನ್ ಈವೆಂಟ್ಸ್ ಅಂಡ್ ಮೀಡಿಯಾ ಸೊಲ್ಯೂಷನ್ಸ್, ಫ್ಲೆಕ್ಸ್ ಫುಡ್ಸ್ ಲಿ., ಗ್ರಾಸಿಮ್ ಇಂಡಸ್ಟ್ರೀಸ್ ಲಿ., ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

# ನಾಲ್ಕು ಕಂಪನಿಗಳ ಎಂಕ್ಯಾಪ್ ₹23,417 ಕೋಟಿಯಷ್ಟು ಇಳಿಕೆ

ನವದೆಹಲಿ (ಪಿಟಿಐ): ಅತಿ ದೊಡ್ಡ 10 ಕಂಪನಿಗಳ ಪೈಕಿ 4 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂಕ್ಯಾಪ್) ಕಳೆದ ವಾರ ₹23,417 ಕೋಟಿಯಷ್ಟು ಇಳಿಕೆ ಕಂಡಿದೆ.

ಇನ್ಫೊಸಿಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ಸ್ (ಟಿಸಿಎಸ್), ಹಿಂದೂಸ್ತಾನ್ ಯೂನಿಲಿವರ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಎಂಕ್ಯಾಪ್ ಇಳಿಕೆಯಾಗಿವೆ.

ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಐಟಿಸಿ, ಭಾರ್ತಿ ಏರ್‌ಟೆಲ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬಜಾಜ್ ಫೈನಾನ್ಸ್ ₹17,386 ಕೋಟಿಯಷ್ಟು ಏರಿಕೆ ಕಂಡಿವೆ.

ಇನ್ಫೊಸಿಸ್ ಮಾರುಕಟ್ಟೆ ಮೌಲ್ಯ ₹8,465 ಕೋಟಿ, ಟಿಸಿಎಸ್ ₹6,604 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ಎಂಕ್ಯಾಪ್ ₹5,133 ಕೋಟಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ₹3,213 ಕೋಟಿಯಷ್ಟು ಇಳಿಕೆ ಕಂಡಿವೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮೌಲ್ಯ ₹5,236 ಕೋಟಿ, ಐಸಿಐಸಿಐ ಬ್ಯಾಂಕ್ ₹3,520 ಕೋಟಿ, ಐಟಿಸಿ ₹3,304 ಕೋಟಿ, ಭಾರ್ತಿ ಏರ್‌ಟೆಲ್ ₹2,669 ಕೋಟಿ, ಬಜಾಜ್ ಫೈನಾನ್ಸ್ ₹1,539 ಕೋಟಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎಂಕ್ಯಾಪ್ ₹1,115 ಕೋಟಿಯಷ್ಟು ಹೆಚ್ಚಳ ಕಂಡಿವೆ.

ಪ್ರಮುಖ 10 ಸಂಸ್ಥೆಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಮುಂಚೂಣಿ ಸ್ಥಾನ ಗಳಿಸಿದೆ.

# ಎಫ್‌ಪಿಐ: ₹5,800 ಕೋಟಿ ವಾಪಸ್

## ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಬಿಕ್ಕಟ್ಟು, ಬಡ್ಡಿ ದರ ಹೆಚ್ಚಳದಿಂದ ಹಿಂತೆಗೆತ

ನವದೆಹಲಿ (ಪಿಟಿಐ): ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಮತ್ತು ಬಡ್ಡಿ ದರ ಹೆಚ್ಚಳದಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಷೇರು ಮಾರುಕಟ್ಟೆಯಿಂದ ₹5,800 ಕೋಟಿಗೂ ಹೆಚ್ಚು ಮೌಲ್ಯದ ಷೇರುಗಳನ್ನು ಈ ತಿಂಗಳಲ್ಲಿ ಹಿಂದಕ್ಕೆ ಪಡೆದಿದ್ದಾರೆ.

ಅಕ್ಟೋಬರ್‌ನಲ್ಲಿ ₹24,548 ಕೋಟಿ ಮತ್ತು ಸೆಪ್ಟೆಂಬರ್‌ನಲ್ಲಿ ₹14,767 ಕೋಟಿ ಹಣವನ್ನು ಹೂಡಿಕೆದಾರರು ವಾಪಸ್ ಪಡೆದಿದ್ದರು.

ಕಳೆದ ಆರು ತಿಂಗಳಲ್ಲಿ (ಮಾರ್ಚ್‌ನಿಂದ ಆಗಸ್ಟ್)



ಹೊರಹರಿವಿಗಿಂತ ಮುಂಚೆ ಎಫ್‌ಪಿಐ ₹1.74 ಲಕ್ಷ ಕೋಟಿ ಭಾರತದಲ್ಲಿ ಹೂಡಿಕೆಯಾಗಿತ್ತು. ಅಂಕಿ ಅಂಶಗಳ ಪ್ರಕಾರ ನವೆಂಬರ್ 1ರಿಂದ 10ರವರೆಗೆ ₹5,805 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಲಾಗಿದೆ. ಸೆಪ್ಟೆಂಬರ್‌ನಿಂದ ಆರಂಭವಾದ ಎಫ್‌ಪಿಐ ಮಾರಾಟ ಪ್ರಕ್ರಿಯೆ ನವೆಂಬರ್‌ನಲ್ಲಿ ಇಳಿಕೆಯಾಗುವ ಲಕ್ಷಣ ಕಾಣಿಸುತ್ತಿಲ್ಲ.

**ಅಂಕಿ-ಅಂಶಗಳು**

**₹90,161** ಕೋಟಿ, ಷೇರುಪೇಟೆಯಲ್ಲಿನ ಒಟ್ಟು ಹೂಡಿಕೆ

**₹41,554** ಬಾಂಡ್ ಮಾರುಕಟ್ಟೆಯಲ್ಲಿ ಒಟ್ಟು ಹೂಡಿಕೆ

ಇಸ್ರೇಲ್ ಮತ್ತು ಹಮಾಸ್ ಸಂಘರ್ಷದಿಂದಾಗಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಮತ್ತು ಅಮೆರಿಕದಲ್ಲಿ ಬಾಂಡ್ ಲಾಭ ಏರಿಕೆಯಾಗಿರುವುದು ಇದಕ್ಕೆ ಕಾರಣವಾಗಿರಬಹುದು ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ ಅಡ್ವೈಸರ್ ಇಂಡಿಯಾದ ಸಹ ನಿರ್ದೇಶಕ ಹಿಮಾಂಶು ಶ್ರೀವಾಸ್ತವ್ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರಸ್ತುತ ಸನ್ನಿವೇಶದಲ್ಲಿ ಚಿನ್ನ ಮತ್ತು ಅಮೆರಿಕ ಡಾಲರ್ ಕಡೆ ಗಮನ ಹರಿಸುವುದು ಸುರಕ್ಷಿತ ಎಂದು ತಜ್ಞರು ನಂಬಿದ್ದಾರೆ ಎಂದು ಶ್ರೀವಾಸ್ತವ್ ಹೇಳಿದ್ದಾರೆ.

# ವಿಚಾರಣೆಗೆ ಗಡುವು ಬೇಡ: 'ಸುಪ್ರೀಂ'

ನವದೆಹಲಿ (ಪಿಟಿಐ): ತೀರಾ ಅಸಾಮಾನ್ಯ ಸಂದರ್ಭಗಳನ್ನು ಹೊರತುಪಡಿಸಿ ಬೇರೆ ಸಂದರ್ಭಗಳಲ್ಲಿ ಯಾವುದೇ ಪ್ರಕರಣಗಳನ್ನು ಇತ್ಯರ್ಥಪಡಿಸಲು ಯಾವುದೇ ನ್ಯಾಯಾಲಯಕ್ಕೆ ಸಮಯಮಿತಿಯನ್ನು ನಿಗದಿ ಮಾಡಲು ಸಾಂವಿಧಾನಿಕ ನ್ಯಾಯಾಲಯಗಳು ಮುಂದಾಗಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕ್ರಿಮಿನಲ್ ಪ್ರಕರಣವೊಂದನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿದ್ದ ಅರ್ಜಿಯೊಂದನ್ನು ವಜಾಗೊಳಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠವು, ಹೈಕೋರ್ಟ್‌ಗಳಲ್ಲಿ ಜಾಮೀನು ಅರ್ಜಿಗಳ ಸಂಖ್ಯೆಯು ದೊಡ್ಡದಿರುವ ಕಾರಣ ಇಂತಹ ಅರ್ಜಿಗಳನ್ನು ಇತ್ಯರ್ಥಪಡಿಸುವಾಗ ಒಂದಿಷ್ಟು ವಿಳಂಬ ಆಗುತ್ತದೆ ಎಂದು ಹೇಳಿದೆ.

'ಪ್ರತಿ ಹೈಕೋರ್ಟ್‌ನಲ್ಲಿ, ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳ ಸಂಖ್ಯೆಯು ದೊಡ್ಡದಿದೆ. ಹೀಗಾಗಿ, ಪರಿಸ್ಥಿತಿಯು ತೀರಾ ಅಸಾಮಾನ್ಯ ಅಲ್ಲ ಎಂದಾದರೆ, ಸಾಂವಿಧಾನಿಕ ನ್ಯಾಯಾಲಯಗಳು ಯಾವುದೇ ನ್ಯಾಯಾಲಯದ ಮುಂದಿರುವ ಯಾವುದೇ ಪ್ರಕರಣದ ಇತ್ಯರ್ಥಕ್ಕೆ ಕಾಲಮಿತಿ ನಿಗದಿ ಮಾಡುವುದರಿಂದ ದೂರವಿರಬೇಕು' ಎಂದು ಹೇಳಿದೆ.

ತಾವು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸುವಂತೆ ಬಾಂಬೆ ಹೈಕೋರ್ಟ್‌ಗೆ ಸೂಚಿಸುವಂತೆ ಕೋರಿ ಶೇಖ್ ಉಜ್ಮಾ ಫಿರೋಜ್ ಹುಸೇನ್ ಎನ್ನುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.



## ದೀಪೋತ್ಸವ

ಉತ್ತರ ಪ್ರದೇಶದ ವಾರಾಣಸಿಯಲ್ಲಿರುವ ಧರ್ಮಸಂಘದ ಭಗವಾನ್ ಶ್ರೀರಾಮ ಮಂದಿರದಲ್ಲಿ ಭಾನುವಾರ ದೀಪಾವಳಿ ಆಚರಣೆ ಪ್ರಯುಕ್ತ ದೀಪಗಳನ್ನು ಬೆಳಗಿಸಲಾಯಿತು – ಪಿಟಿಐ ಚಿತ್ರ

### ಗಡಿಯಲ್ಲಿ ಭದ್ರತಾ ಪಡೆಗಳೊಂದಿಗೆ ದೀಪಾವಳಿ ಆಚರಿಸಿದ ಪ್ರಧಾನಿ

# ರಕ್ಷಣಾ ಕ್ಷೇತ್ರದಲ್ಲಿ ಭಾರತ ಬಲಿಷ್ಠ: ಮೋದಿ

ಲೆಪ್ಚಾ (ಹಿಮಾಚಲಪ್ರದೇಶ) (ಪಿಟಿಐ): 'ರಕ್ಷಣಾ ವಲಯದಲ್ಲಿ ಭಾರತವು ಜಾಗತಿಕ ಬಲಿಷ್ಠ ರಾಷ್ಟ್ರವಾಗಿ ವೇಗದಲ್ಲಿ ಹೊರಹೊಮ್ಮುತ್ತಿದೆ ಮತ್ತು ರಾಷ್ಟ್ರದ ಭದ್ರತಾ ಪಡೆಗಳ ಸಾಮರ್ಥ್ಯ ನಿರಂತರ ಹೆಚ್ಚುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಇಲ್ಲಿ ಹೇಳಿದರು.

ಇಂಡೊ-ಟಿಬೆಟಿಯನ್ ಬಾರ್ಡರ್ ಪೊಲೀಸರ (ಐಟಿಬಿಪಿ) ಸಮವಸ್ತ್ರ ಧರಿಸಿದ್ದ ಮೋದಿ ಅವರು ಗಡಿಯಲ್ಲಿ ಭದ್ರತಾ ಪಡೆಗಳ ಸಿಬ್ಬಂದಿಯೊಂದಿಗೆ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಿ, ಯೋಧರಿಗೆ ಸಿಹಿ ತಿನಿಸಿದರು.

ನಂತರ ಇಲ್ಲಿ ಯೋಧರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಒಂದು ಕಾಲದಲ್ಲಿ ನಾವು ಸಣ್ಣ ವಿಷಯಗಳಿಗೆ ಇತರರ ಮೇಲೆ ಅವಲಂಬಿತರಾಗಿದ್ದೆವು. ಆದರೆ, ಈಗ ನಾವು ನಮ್ಮ ಮಿತ್ರ ರಾಷ್ಟ್ರಗಳ ಅಗತ್ಯಗಳನ್ನು ಪೂರೈಸುತ್ತಿದ್ದೇವೆ' ಎಂದು ಬಣ್ಣಿಸಿದರು.

'ವಿಶ್ವದ ಸದ್ಯದ ಸನ್ನಿವೇಶಗಳಲ್ಲಿ ದೇಶದ ನಿರೀಕ್ಷೆಗಳು ನಿರಂತರ ಹೆಚ್ಚುತ್ತಲೇ ಇವೆ. ಇಂತಹ ಮಹತ್ವದ ಸಮಯದಲ್ಲಿ, ದೇಶದ ಗಡಿಗಳನ್ನು ರಕ್ಷಣೆ ಮಾಡುವುದು ಅವಶ್ಯ. ದೇಶದಲ್ಲಿ ಶಾಂತಿಯ ವಾತಾವರಣವಿದೆ.



ಹಿಮಾಚಲ ಪ್ರದೇಶದ ಲೆಪ್ಚಾ ಗಡಿಯಲ್ಲಿ ಪ್ರಧಾನಿ ಮೋದಿ ಅವರು ಭಾನುವಾರ ಭದ್ರತಾ ಪಡೆಗಳ ಯೋಧರೊಂದಿಗೆ ದೀಪಾವಳಿ ಆಚರಿಸಿದರು– ಪಿಟಿಐ ಚಿತ್ರ

ಇದರಲ್ಲಿ ನಿಮ್ಮ(ಯೋಧರ) ಪಾತ್ರ ದೊಡ್ಡದು. ದೇಶವು ತನ್ನ ಸಂಪೂರ್ಣ ಬಲದಿಂದ ಅಭಿವೃದ್ಧಿಯ ಉತ್ತುಂಗಕ್ಕೇರುತ್ತಿದ್ದರೆ ಅದರ ಶ್ರೇಯಸ್ಸು ನಿಮ್ಮ ಸಾಮರ್ಥ್ಯ, ಸಂಕಲ್ಪ ಮತ್ತು ತ್ಯಾಗಕ್ಕೆ ಸಲ್ಲುತ್ತದೆ. ನಮ್ಮ ಭದ್ರತಾ ಪಡೆಗಳು ಮತ್ತು ಯೋಧರ ಬಗ್ಗೆ ನಮಗೆ ಹೆಮ್ಮೆ ಇದೆ' ಎಂದು ಪ್ರಶಂಸಿಸಿದರು.

'ಹಿಮಾಲಯದಂತಹ ಗಡಿಗಳಲ್ಲಿ ನಮ್ಮ ಕೆಚ್ಚೆದೆಯ ಯೋಧರು ನಿಂತಿರುವುದರಿಂದ ಭಾರತವನ್ನು ರಕ್ಷಿಸಲಾಗಿದೆ. ವೀರ ಸೇನಾನಿಗಳು ಗಡಿಯಲ್ಲಿ ಇರುವವರೆಗೂ ದೇಶ ಸುರಕ್ಷಿತ. ಸ್ವಾತಂತ್ರ್ಯದ ನಂತರ, ಈ ಧೈರ್ಯಶಾಲಿಗಳು (ಸೇನಾ ಸಿಬ್ಬಂದಿ) ಹಲವು ಯುದ್ಧಗಳನ್ನು ಜಯಿಸಿ, ದೇಶದ ಜನತೆಯ ಹೃದಯವನ್ನು ಗೆದ್ದಿದ್ದಾರೆ. ನಮ್ಮ ಯೋಧರು ಎಲ್ಲ ಸವಾಲುಗಳನ್ನು ಮೆಟ್ಟಿ, ವಿಜಯಯವನ್ನು ತಂದುಕೊಟ್ಟಿದ್ದಾರೆ' ಎಂದು ಮೋದಿ ಶ್ಲಾಘಿಸಿದರು.

'ಪರಿವಾರ ಇರುವಲ್ಲಿ ಪರ್ವ ಎನ್ನುವ ಮಾತಿದೆ. ಹಬ್ಬಗಳಂದು ಕುಟುಂಬ, ಪ್ರೀತಿಪಾತ್ರರಿಂದ ದೂರವಿದ್ದು ಗಡಿಗಳಲ್ಲಿ ಕಾವಲು ಕಾಯುವುದು ಕರ್ತವ್ಯ ಬದ್ಧತೆಗೆ ಉದಾಹರಣೆ. ದೇಶವು ಸೈನಿಕರಿಗೆ ಸದಾ ಋಣಿಯಾಗಿದೆ. ಆದ್ದರಿಂದ, ದೀಪಾವಳಿಯಂದು, ಜನರು ನಿಮ್ಮ ಸುರಕ್ಷತೆಯನ್ನು ಬಯಸಿ ಪ್ರಾರ್ಥಿಸುತ್ತಾರೆ' ಎಂದು ಹೇಳಿದರು.

'ಸೈನಿಕರು ಯಾವಾಗಲೂ ತಮ್ಮ ಪ್ರಾಣ ಪಣಕ್ಕಿಟ್ಟು ಮುನ್ನಡೆದಿದ್ದಾರೆ. ಗಡಿಯಲ್ಲಿ ಅವರು ಅಚಲವಾದ ಗೋಡೆ ಎಂಬುದನ್ನು ಸದಾ ಸಾಬೀತುಪಡಿಸಿದ್ದಾರೆ. ನಮ್ಮ ಭದ್ರತಾ ಪಡೆಗಳ ಕರ್ತವ್ಯ ನಿಯೋಜಿತ ಸ್ಥಳವು ನನಗೆ ದೇವಸ್ಥಾನಕ್ಕಿಂತ ಕಡಿಮೆಯಿಲ್ಲ. ನಾನು ಮುಖ್ಯಮಂತ್ರಿ ಅಥವಾ ಪ್ರಧಾನಿಯಾಗಿ ಅಷ್ಟೇ ಅಲ್ಲ, ಕಳೆದ 30-35 ವರ್ಷಗಳಿಂದಲೂ ದೀಪಾವಳಿಯನ್ನು ಯೋಧರೊಂದಿಗೆ ಆಚರಿಸಿಕೊಂಡು ಬಂದಿದ್ದೇನೆ' ಎಂದು ತಿಳಿಸಿದರು.

ಮೋದಿ ಅವರು ಕಳೆದ ವರ್ಷ ದೀಪಾವಳಿಯನ್ನು ಕಾರ್ಗಿಲ್‌ನಲ್ಲಿ ಶಸಸ್ತ್ರ ಪಡೆ ಯೋಧರೊಂದಿಗೆ ಆಚರಿಸಿದ್ದರು.

## 'ವರ್ಷದಲ್ಲಿ ಅಭೂತಪೂರ್ವ ಸಾಧನೆ'

ಕಳೆದ ದೀಪಾವಳಿಯಿಂದ ಈ ನಡುವಿನ ಅವಧಿಯಲ್ಲಿ ದೇಶವು ಅಭೂತಪೂರ್ವ ಸಾಧನೆಗಳನ್ನು ಮಾಡಿದೆ ಎಂದು ಮೋದಿ ಹೇಳಿದರು.

2016ರ ದೀಪಾವಳಿಯ ಅವಧಿಗೆ ಹೋಲಿಸಿದರೆ ಈಗ ಭಾರತದ ರಕ್ಷಣಾ ಸಾಮಗ್ರಿಗಳ ರಫ್ತು ಎಂಟು ಪಟ್ಟು ಹೆಚ್ಚಾಗಿದೆ. ದೇಶೀಯ ರಕ್ಷಣಾ ಉತ್ಪಾದನೆ ಈಗ ₹1 ಲಕ್ಷ ಕೋಟಿಗೆ ತಲುಪಿದೆ ಎಂದು ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ 500ಕ್ಕೂ ಹೆಚ್ಚು ಮಹಿಳಾ ಅಧಿಕಾರಿಗಳಿಗೆ ಸೇನೆಯಲ್ಲಿ ಕಾಯಂ ಸೇವೆಯ ಅವಕಾಶ ಕಲ್ಪಿಸಲಾಗಿದೆ ಎಂದು ಮೋದಿ ಇದೇ ವೇಳೆ ತಿಳಿಸಿದರು.

ಚಂದ್ರಯಾನ 3, ಆದಿತ್ಯ ಎಲ್1 ಉಡಾವಣೆ, ಏಷ್ಯನ್ ಮತ್ತು ಪ್ಯಾರಾಲಿಂಪಿಕ್ ಕ್ರೀಡಾಕೂಟಗಳಲ್ಲಿ 100ಕ್ಕೂ ಹೆಚ್ಚು ಪದಕಗಳ ಬೇಟೆ, ಸಂಸತ್ತಿನ ಹೊಸ ಕಟ್ಟಡ ಲೋಕಾರ್ಪಣೆ, ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರ, ಜಿ 20 ಶೃಂಗ ಯಶಸ್ವಿ ಆಯೋಜನೆ ಹಾಗೂ ಜಿಡಿಪಿಯಲ್ಲಿ ವಿಶ್ವದ ಐದನೇ ಅತಿ ದೊಡ್ಡ ರಾಷ್ಟ್ರವಾಗಿ ಭಾರತವು ಬೆಳೆದಿರುವ ಸಾಧನೆಯನ್ನು ಮೋದಿ ಪಟ್ಟಿ ಮಾಡಿದರು.

# ದೀಪಾವಳಿ ಆಚರಿಸಲ್ಲ: ಜರಾಂಗೆ

ಪ್ರಜಾವಾಣಿ ವಾರ್ತೆ

ಮುಂಬೈ: ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಪಾಟೀಲ್ ಅವರು ಛತ್ರಪತಿ ಸಂಭಾಜಿನಗರದ ಗ್ಯಾಲಕ್ಸಿ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯಿಂದ ಸ್ವಗ್ರಾಮ, ಜಲ್ನಾ ಜಿಲ್ಲೆಯ ಅಂತರವಾಡಿ ಸಾರಥಿಗೆ ಭಾನುವಾರ ತೆರಳಿದರು.

ಇದಕ್ಕೂ ಮುನ್ನ ಮಾತನಾಡಿದ ಅವರು, 'ಮನೆಗೂ ಹೋಗುವುದಿಲ್ಲ, ದೀಪಾವಳಿಯನ್ನೂ ಆಚರಿಸುವುದಿಲ್ಲ. ಮರಾಠ ಮೀಸಲಿಗೆ ಆಗ್ರಹಿಸಿ ಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ದೀಪಾವಳಿ ಆಚರಿಸಲಾರೆ' ಎಂದು ಹೇಳಿದರು.

'ಕೆಲವೇ ದಿನಗಳಲ್ಲಿ, ಸಂಬಂಧಪಟ್ಟವರೊಂದಿಗೆ ಚರ್ಚಿಸಿ, ಮುಂದಿನ ಹೋರಾಟದ ಕುರಿತು ನಿರ್ಧರಿಸಲಾಗುವುದು. ನ.15ರಿಂದ 23ರ ವರೆಗೆ ಪ್ರವಾಸ ಕೈಗೊಳ್ಳುವೆ. ಈ ಸಂದರ್ಭದಲ್ಲಿ ಮುಂಬೈ ನಗರವಲ್ಲದೇ ಕೊಂಕಣ, ಮರಾಠವಾಡ ಹಾಗೂ ಪಶ್ಚಿಮ ಮಹಾರಾಷ್ಟ್ರಕ್ಕೂ ಭೇಟಿ ನೀಡುವೆ' ಎಂದರು.

ಜರಾಂಗೆ ಪಾಟೀಲ್ ಆಗಸ್ಟ್ 29ರಿಂದ ಸೆಪ್ಟೆಂಬರ್ 14ರವರೆಗೆ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು.

# ಉಗ್ರನ ಬಂಧನ

ತಿನ್‌ಸುಕಿಯಾ (ಅಸ್ಸಾಂ) (ಪಿಟಿಐ): ನಿಷೇಧಿತ ಭಯೋತ್ಪಾದಕ ಸಂಘಟನೆ ಎನ್‌ಎಸ್‌ಸಿಎನ್–ಕೆವೈಎಗೆ ಸೇರಿದ ಉಗ್ರನೊಬ್ಬನನ್ನು ಭದ್ರತಾ ಪಡೆ ಇಲ್ಲಿ ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

# ಕುಸಿದ ಸುರಂಗ: ಸಿಲುಕಿದ 40 ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಉತ್ತರಕಾಶಿ: ಉತ್ತರಾಖಂಡದ ಬ್ರಹ್ಮಖಾಲ್–ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಿಲಕ್ಯಾರ ಮತ್ತು ದಂಡಲ್‌ಗಾಂವ್ ಮಧ್ಯೆ ನಿರ್ಮಿಸಲಾಗುತ್ತಿದ್ದ ಸುರಂಗ ಮಾರ್ಗದಲ್ಲಿ ಭಾನುವಾರ ಕೆಲ ಭಾಗ ಕುಸಿದು, 40 ಕಾರ್ಮಿಕರು ಒಳ ಸಿಲುಕಿಕೊಂಡಿದ್ದಾರೆ. ರಕ್ಷಣಾ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಭಾನುವಾರ ಬೆಳಿಗ್ಗೆ 6– 7 ಗಂಟೆ ನಡುವೆ ಈ ಘಟನೆ ನಡೆದಿದೆ. ಈ ವೇಳೆ, ಒಳಗೆ ಹಲವು ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದು ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ (ಎನ್‌ಎಚ್‌ಐಡಿಸಿಎಲ್) ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು' ಎಂದು ಉತ್ತರಕಾಶಿಯ ಪೊಲೀಸ್ ವರಿಷ್ಠಾಧಿಕಾರಿ ಅರ್ಪಣ್ ಯದುವಂಶಿ ತಿಳಿಸಿದ್ದಾರೆ.

ಸುರಂಗದ ಪ್ರವೇಶ ದ್ವಾರದಿಂದ 200 ಮೀಟರ್‌ಗಳಷ್ಟು ದೂರದಲ್ಲಿ ಕುಸಿತವಾಗಿದೆ.



ಕುಸಿದ ಸುರಂಗದಲ್ಲಿ ಸಿಲುಕಿದ ಕಾರ್ಮಿಕರ ರಕ್ಷಣೆಗೆ ಕಾರ್ಯಾಚರಣೆ ನಡೆಯಿತು —ಪಿಟಿಐ ಚಿತ್ರ

ಒಳಗೆ ಸಿಲುಕಿರುವ ಕಾರ್ಮಿಕರಿಗೆ ಉಸಿರಾಟ ಮತ್ತು ಆಹಾರಕ್ಕೆ ಯಾವುದೇ ಸಮಸ್ಯೆಯಾಗದಂತೆ ಆಮ್ಲಜನಕ ಮತ್ತು ಆಹಾರ ಪದಾರ್ಥಗಳನ್ನು ಪೈಪ್‌ಲೈನ್ ಮೂಲಕ ಕಳುಹಿಸಿಕೊಡಲಾಗುತ್ತಿದೆ. ಅವರನ್ನು ಆದಷ್ಟು ಬೇಗ ಸುರಕ್ಷಿತವಾಗಿ ಹೊರ ಕರೆತರುವುದು ನಮ್ಮ ಆದ್ಯತೆಯಾಗಿದೆ ಎಂದು ಹೇಳಿದ್ದಾರೆ.

ಏತನ್ಮಧ್ಯೆ, ಎಲ್ಲಾ ಅಧಿಕಾರಿಗಳ ರಜೆಗಳನ್ನು ರದ್ದುಗೊಳಿಸಿರುವ ಜಿಲ್ಲಾಧಿಕಾರಿ ಅವರು, ಅಗತ್ಯವಿದ್ದರೆ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವಂತೆ ಸೂಚನೆ ನೀಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು, ಸುರಂಗ ಮಾರ್ಗದ ಒಳಗೆ ಸಿಲುಕಿಕೊಂಡವರ ರಕ್ಷಣೆಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ಚಾರ್‌ಧಾಮ್ ರಸ್ತೆ ಅಭಿವೃದ್ಧಿ ಯೋಜನೆಯಡಿ ಯಮುನೋತ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿನ ಸಿಲಕ್ಯಾರದಿಂದ ದಂಡಲ್‌ಗಾಂವ್‌ವರೆಗಿನ 4.5 ಕಿ. ಮೀ ಉದ್ದದ ಸುರಂಗ ಮಾರ್ಗ ನಿರ್ಮಿಸಲಾಗುತ್ತಿದೆ. ಈ ಕಾಮಗಾರಿ ಪೂರ್ಣಗೊಂಡ ಬಳಿಕ ಉತ್ತರಕಾಶಿಯಿಂದ ಯಮನೋತ್ರಿ ನಡುವಿನ ಅಂತರವು 26 ಕಿ.ಮೀ ನಷ್ಟು ಕಡಿಮೆಯಾಗಲಿದೆ.

# ಕೇರಳ ಸ್ಫೋಟ: ಮೃತರ ಸಂಖ್ಯೆ 5ಕ್ಕೆ ಏರಿಕೆ

ಕೊಚ್ಚಿ (ಪಿಟಿಐ): ಕೇರಳದ ಎರ್ನಾಕುಳ ಜಿಲ್ಲೆಯಲ್ಲಿ ಕ್ರೈಸ್ತ ಸಮುದಾಯದವರು ಪ್ರಾರ್ಥನಾ ಸಭೆ ನಡೆಸುತ್ತಿದ್ದ ಸಂದರ್ಭದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 5ಕ್ಕೆ ಏರಿಕೆಯಾಗಿದೆ ಎಂದು ಸರ್ಕಾರ ಭಾನುವಾರ ತಿಳಿಸಿದೆ.

ಗಾಯಗೊಂಡಿದ್ದ ಸಲ್ಲಿ ಪ್ರದೀಪನ್ ಎಂಬವರು ಶನಿವಾರ ರಾತ್ರಿ ಮೃತಪಟ್ಟರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಫೋಟದ ಪರಿಣಾಮ ಗಾಯಗೊಂಡಿದ್ದ 17 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ ಎಂಟು ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಒಬ್ಬರ ಸ್ಥಿತಿ ಗಂಭೀರವಾಗಿದೆ. ಒಂಬತ್ತು ಮಂದಿ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿದೆ. ಅ.29ರಂದು ಕಲಮಶ್ಶೇರಿಯ 'ಯಹೋವನ ಸಾಕ್ಷಿಗಳು' ಪಂಥದ ಕಾರ್ಯಕ್ರಮ ನಡೆಯುತ್ತಿದ್ದ ಸಭಾ ಭವನದಲ್ಲಿ ಸ್ಫೋಟ ಸಂಭವಿಸಿತ್ತು.

ಹಬ್ಬದ ಸಂಭ್ರಮ ಇಮ್ಮಡಿಸಿದ ಶ್ರೇಯಸ್, ರಾಹುಲ್ • ಅಜೇಯವಾಗುಳಿದ ಭಾರತ • ನೆದರ್ಲೆಂಡ್ಸ್ ದಿಟ್ಟ ಆಟ

# ದೀಪಾವಳಿಗೆ ಜೋಡಿ ಶತಕ ಮೆರುಗು



ಶತಕ ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಶ್ರೇಯಸ್ ಅಯ್ಯರ್ –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್

ಭಾರತ ತಂಡದ ಕೆ.ಎಲ್ ರಾಹುಲ್ ಅವರ ಬ್ಯಾಟಿಂಗ್ ಸೊಬಗು –ಪ್ರಜಾವಾಣಿ ಚಿತ್ರ

• ಗಿರೀಶ ದೊಡ್ಡಮನಿ

**ಬೆಂಗಳೂರು:** ನರಕ ಚತುರ್ದಶಿಯ ದಿನವಾದ ಭಾನುವಾರ ವಿರಾಟ್ ಕೊಹ್ಲಿ 'ಶತಕಗಳ ಅರ್ಧಶತಕ' ದಾಖಲೆ ಮಾಡಲಿಲ್ಲ. ಆದರೆ ಭಾರತದ ಮೂವರು ಬ್ಯಾಟರ್‌ಗಳ ಅರ್ಧಶತಕ ಮತ್ತು ಎರಡು ಶತಕ ಗಳನ್ನು ಕಣ್ತುಂಬಿ ಕೊಳ್ಳುವ ಅವಕಾಶ ಅಭಿಮಾನಿಗಳಿಗೆ ದೊರೆಯಿತು.

ಅದರಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಅವರ ಮಿಂಚಿನ ಶತಕವೂ ಒಂದಾಗಿತ್ತು. ಇದಲ್ಲದೇ ಆತಿಥೇಯ ಬಳಗದ ಒಂಬತ್ತು ಆಟಗಾರರ ಬೌಲಿಂಗ್ ನೋಡುವ ಅವಕಾಶವೂ ದೊರೆಯಿತು!

ಒಟ್ಟಾರೆ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ದೀಪಾವಳಿ ಸಂಭ್ರಮಕ್ಕೆ ರಂಗೇರಿತು. ಪಂದ್ಯದಲ್ಲಿ ಒಟ್ಟು 19 ಸಿಕ್ಸರ್, 56 ಬೌಂಡರಿಗಳು ಪಟಾಕಿಗಳಂತೆ ಸಿಡಿದವು. ಮೊದಲೇ ನಿರೀಕ್ಷಿಸಿದಂತೆ ಭಾರತ ತಂಡವು 160 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಆತಿಥೇಯ ಭಾರತವು ಅಜೇಯವಾಗುಳಿಯಿತು. ಇನ್ನೆರಡು ದಿನಗಳ ನಂತರ ಮುಂಬೈನಲ್ಲಿ ನಡೆಯಲಿರುವ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ರೋಹಿತ್ ಶರ್ಮಾ ಬಳಗವು ಎದುರಿಸಲಿದೆ.

ಇಲ್ಲಿ ಟಾಸ್ ಗೆದ್ದ ಭಾರತ ತಂಡದ ನಾಯಕ ರೋಹಿತ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟರ್‌ಗಳ ಸ್ವರ್ಗ ವಾಗಿರುವ ಪಿಚ್‌ನಲ್ಲಿ ತಂಡವು 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 410 ರನ್ ಗಳಿಸಿತು. ಕ್ರೀಸ್‌ಗೆ ಬಂದ ಆರು ಬ್ಯಾಟರ್‌ಗಳಲ್ಲಿ ಐವರು ತಲಾ 50ಕ್ಕಿಂತ ಹೆಚ್ಚು ರನ್‌ಗಳನ್ನು ಹೊಡೆದರು. ಅದರಲ್ಲಿ ಸ್ಥಳೀಯ ಹೀರೊ ರಾಹುಲ್ 62 ಎಸೆತಗಳಲ್ಲಿ ಶತಕ ಹೊಡೆದರು. ಶ್ರೇಯಸ್ ಅಯ್ಯರ್ ಅಜೇಯ ಶತಕ (120; 94ಎ) ದಾಖಲಿಸಿದರು.

ಗುರಿ ಬೆನ್ನಟ್ಟಿದ ನೆದರ್ಲೆಂಡ್ಸ್ ತಂಡದ ಬ್ಯಾಟರ್‌ಗಳು ಅಲ್ಪಮೊತ್ತಕ್ಕೆ ಕುಸಿಯಲಿಲ್ಲ 47.5 ಓವರ್‌ಗಳಲ್ಲಿ 250 ರನ್ ಗಳಿಸಿ ಆಲೌಟ್ ಆಯಿತು. ಲೀಗ್ ಹಂತದಲ್ಲಿ ಅನುಭವಿ ತಂಡಗಳಾದ ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ತಂಡಗಳು ಭಾರತದ ಎದುರು ನೂರರ ಗಡಿಯನ್ನೂ ಮುಟ್ಟಿ ರಲಿಲ್ಲ. ಅವರಿಗಿಂತ ಡಚ್ ಪಡೆಯ ಬ್ಯಾಟರ್‌ಗಳು ಭಾರತದ ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಅದರಲ್ಲಿ ತೇಜಾ ನಿಡಮಾನೂರು ಅರ್ಧಶತಕ ಕೂಡ ದಾಖಲಿಸಿದರು.

**ತವರಿನಲ್ಲಿ ರಾಹುಲ್ ಸಂಭ್ರಮ:** ಟೂರ್ನಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ರಾಹುಲ್ ಅಜೇಯ 97 ರನ್ ಗಳಿಸಿದ್ದರು. ಭಾನುವಾರ ಬೆಂಗಳೂರಿನಲ್ಲಿ ಶತಕ ದಾಖಲಿಸುವ ಅವಕಾಶ ಬಿಡಲಿಲ್ಲ. ತಾವು 89 ರನ್ ಗಳಿಸಿದ್ದ ಸಂದರ್ಭದಲ್ಲಿ ಸತತ ಎರಡು ಸಿಕ್ಸರ್ ಬಾರಿಸಿ ಶತಕದ ಗಡಿ ದಾಟಿದರು. ಅಲ್ಲದೇ ಶ್ರೇಯಸ್ ಜೊತೆಗೆ 208 ರನ್‌ಗಳ ಜೊತೆಯಾಟವಾಡಿದರು.

ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ರಾಹುಲ್ ವಿಶ್ವಕಪ್ ಪಂದ್ಯಗಳಲ್ಲಿ ಅತಿ ಹೆಚ್ಚು ವೈಯಕ್ತಿಕ ಮೊತ್ತ ದಾಖಲಿಸಿದ ಎರಡನೇ ವಿಕೆಟ್ ಕೀಪರ್ ಬ್ಯಾಟರ್ ಎನಿಸಿಕೊಂಡರು. ಈ ಪಟ್ಟಿಯಲ್ಲಿ ರಾಹುಲ್ ದ್ರಾವಿಡ್ (ಈಗ ತಂಡದ ಮುಖ್ಯ ಕೋಚ್) ಅಗ್ರಸ್ಥಾನದಲ್ಲಿದ್ದಾರೆ. ರಾಹುಲ್‌ಗಿಂತ ಮುನ್ನ ಶತಕ ಪೂರೈಸಿದ ಶ್ರೇಯಸ್ ಅಯ್ಯರ್ ತಂಡದ ಮೊತ್ತವು 400 ರನ್‌ಗಳ ಗಡಿ ದಾಟುವಂತೆ ನೋಡಿಕೊಂಡರು. ವಿಶ್ವಕಪ್ ಟೂರ್ನಿಯಲ್ಲಿ ಇದು ಅವರ ಪ್ರಥಮ ಶತಕವಾಗಿದೆ. ಇನಿಂಗ್ಸ್‌ನಲ್ಲಿ ಇನ್ನೊಂದು ಎಸೆತ ಬಾಕಿ ಇದ್ದಾಗ ರಾಹುಲ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

**ಕೊಹ್ಲಿ–ಶ್ರೇಯಸ್ ಜೊತೆಯಾಟ:** ಏಕದಿನ ಕ್ರಿಕೆಟ್‌ನಲ್ಲಿ 49 ಶತಕ ಗಳಿಸಿರುವ ವಿರಾಟ್ ಇಲ್ಲಿ 50ನೇಯದ್ದನ್ನು ಗಳಿಸುವ ನಿರೀಕ್ಷೆ ಮೂಡಿಸಿದ್ದರು. ಅವರು 55 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದಾಗ ನಿರೀಕ್ಷೆ ಮತ್ತಷ್ಟು ಬಲವಾಯಿತು. ಆದರೆ 29ನೇ ಓವರ್‌ನಲ್ಲಿ ವ್ಯಾನ್ ಡೆರ್ ಮರ್ವ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಆದರೆ ಅವರು ಶ್ರೇಯಸ್ ಜೊತೆಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು.

**ಅಮೋಘ ಆರಂಭ:** ರೋಹಿತ್ ಶರ್ಮಾ ಅವರು ಶುಭಮನ್ ಗಿಲ್ ಜೊತೆಗೆ ಅಮೋಘ ಆರಂಭವನ್ನೂ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 100 ರನ್‌ಗಳನ್ನು ಸೇರಿಸಿದರು. ಆದರೆ ಇಬ್ಬರಿಗೂ ಶತಕ ಗಳಿಸುವ ಅವಕಾಶ ಇಲ್ಲಿತ್ತು. ಆದರೆ ಗಿಲ್ ದೊಡ್ಡ ಹೊಡೆತಕ್ಕೆ ಪ್ರಯತ್ನಿಸಿ ಬೌಂಡರಿಲೈನ್‌ನಲ್ಲಿದ್ದ ತೇಜಾ ನಿಡಮಾನುರಗೆ ಕ್ಯಾಚಿತ್ತರು. ಗಿಲ್ 30 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಇದರ ನಂತರ ರೋಹಿತ್ ಕೂಡ ಅರ್ಧಶತಕ ಗಳಿಸಿ ಔಟಾದರು.

## ಸಿಕ್ಸರ್: ರೋಹಿತ್ ದಾಖಲೆ

**ಬೆಂಗಳೂರು:** ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ನೆದರ್ಲೆಂಡ್ಸ್ ಎದುರಿನ ಪಂದ್ಯದಲ್ಲಿ ಕೆಲವೊಂದು ದಾಖಲೆಗಳನ್ನು ನಿರ್ಮಿಸಿದರು.

ಈ ಪಂದ್ಯದಲ್ಲಿ ಎರಡು ಸಿಕ್ಸರ್ ಹೊಡೆದ ಅವರು ಏಕದಿನ ಮಾದರಿಯಲ್ಲಿ ಒಂದು ಋತುವಿನಲ್ಲಿ ಅತ್ಯಧಿಕ ಸಿಕ್ಸರ್ (60) ಹೊಡೆದ ಬ್ಯಾಟರ್ ಎನಿಸಿಕೊಂಡರು. ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಅವರು 2015 ರಲ್ಲಿ 58 ಸಿಕ್ಸರ್ ಹೊಡೆದದ್ದು ಇದುವರೆಗಿನ ದಾಖಲೆಯಾಗಿತ್ತು.

ಏಕದಿನ ವಿಶ್ವಕಪ್ ಟೂರ್ನಿಯೊಂದರಲ್ಲಿ ಹೆಚ್ಚು ಸಿಕ್ಸರ್ (24) ಹೊಡೆದ ನಾಯಕ ಎಂಬ ಗೌರವ ಅವರಿಗೆ ಒಲಿಯಿತು. ಇಂಗ್ಲೆಂಡ್‌ನ ಎಯೊನ್ ಮಾರ್ಗನ್ (22) ಹೆಸರಿನಲ್ಲಿದ್ದ ದಾಖಲೆ ಮುರಿದರು.

## ಗಂಟಲಿಗೆ ಬಡಿದ ಚೆಂಡು

ಕುಲದೀಪ್ ಬೌಲಿಂಗ್ ವೇಳೆ ಮ್ಯಾಕ್ಸ್ ಒಡೌಡ್ ಹೊಡೆದ ಚೆಂಡನ್ನು ಬೌಂಡರಿ ಗೆರೆಯ ಬಳಿ ಕ್ಯಾಚ್ ಪಡೆಯಲು ಮೊಹಮ್ಮದ್ ಸಿರಾಜ್ ಪ್ರಯತ್ನಿಸಿದರು. ಆದರೆ, ಚೆಂಡು ಕೈತಪ್ಪಿ ಅವರ ಗಂಟಲಿಗೆ ಬಡಿಯಿತು. ನೋವು ಅನುಭವಿಸಿದ ಅವರಿಗೆ ತಂಡದ ವೈದ್ಯಕೀಯ ಸಿಬ್ಬಂದಿ ಪ್ರಥಮ ಚಿಕಿತ್ಸೆ ನೀಡಿದರು. ಕೆಲ ಹೊತ್ತು ವಿಶ್ರಾಂತಿ ಪಡೆದು ಅವರು ಮತ್ತೆ ಆಡಿದರು.

### ವಿಶ್ವಕಪ್: ಭಾರತ ಆಟಗಾರರ 50+ ಸ್ಕೋರು

| ಅರ್ಧಶತಕ | ವರ್ಷ |
|---|---|
| 20 | 2023 |
| 19 | 2019 |
| 18 | 2011 |
| 17 | 2003 |

### ವಿಶ್ವಕಪ್: ವಿಕೆಟ್‌ಕೀಪರ್ ಗಳಿಸಿದ ಶ್ರೇಷ್ಠ ಸ್ಕೋರ್ (ಭಾರತ)

| ಮೊತ್ತ | ಆಟಗಾರ | ವಿರುದ್ಧ | ವರ್ಷ |
|---|---|---|---|
| 145 | ರಾಹುಲ್ ದ್ರಾವಿಡ್ | ಶ್ರೀಲಂಕಾ | 1999 |
| 102 | ಕೆ.ಎಲ್. ರಾಹುಲ್ | ನೆದರ್ಲೆಂಡ್ಸ್ | 2023 |
| 97* | ಕೆ.ಎಲ್. ರಾಹುಲ್ | ಆಸ್ಟ್ರೇಲಿಯಾ | 2023 |
| 91* | ಮಹೇಂದ್ರಸಿಂಗ್ ಧೋನಿ | ಶ್ರೀಲಂಕಾ | 2011 |
| 85* | ಮಹೇಂದ್ರಸಿಂಗ್ ಧೋನಿ | ಜಿಂಬಾಬ್ವೆ | 2015 |

### ವಿಶ್ವಕಪ್ ಟೂರ್ನಿಯೊಂದರಲ್ಲಿ ಹೆಚ್ಚು ಸಲ 50+ ರನ್ ಗಳಿಸಿದವರು

| ಅರ್ಧ ಶತಕ | ಆಟಗಾರ | ವರ್ಷ |
|---|---|---|
| 7 | ಸಚಿನ್ ತೆಂಡೂಲ್ಕರ್ (ಭಾರತ) | 2003 |
| 7 | ಶಕಿಬ್ ಅಲ್ ಹಸನ್ (ಬಾಂಗ್ಲಾ) | 2019 |
| 7 | ವಿರಾಟ್ ಕೊಹ್ಲಿ (ಭಾರತ) | 2023 |

### ಲೀಗ್‌ನಲ್ಲಿ ಭಾರತದ ಜಯದ ಅಭಿಯಾನ

| ಎದುರಾಳಿ | ಗೆಲುವಿನ ಅಂತರ |
|---|---|
| ಆಸ್ಟ್ರೇಲಿಯಾ | 6 ವಿಕೆಟ್ |
| ಅಫ್ಗಾನಿಸ್ತಾನ | 8 ವಿಕೆಟ್ |
| ಪಾಕಿಸ್ತಾನ | 7 ವಿಕೆಟ್ |
| ಬಾಂಗ್ಲಾದೇಶ | 7 ವಿಕೆಟ್ |
| ನ್ಯೂಜಿಲೆಂಡ್ | 4 ವಿಕೆಟ್ |
| ಇಂಗ್ಲೆಂಡ್ | 100 ರನ್ |
| ಶ್ರೀಲಂಕಾ | 302 ರನ್ |
| ದಕ್ಷಿಣ ಆಫ್ರಿಕಾ | 243 ರನ್ |
| ನೆದರ್ಲೆಂಡ್ಸ್ | 160 ರನ್ |

### ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

| ದೇಶ | ಪಂದ್ಯ | ಗೆಲುವು | ಸೋಲು | ಟೈ | ಪಾಯಿಂಟ್ | ಎನ್‌ಆರ್‌ಆರ್ |
|---|---|---|---|---|---|---|
| ಭಾರತ | 9 | 9 | 0 | 0 | 18 | 2.570 |
| ದಕ್ಷಿಣ ಆಫ್ರಿಕಾ | 9 | 7 | 2 | 0 | 14 | 1.261 |
| ಆಸ್ಟ್ರೇಲಿಯಾ | 9 | 7 | 2 | 0 | 14 | 0.841 |
| ನ್ಯೂಜಿಲೆಂಡ್ | 9 | 5 | 4 | 0 | 10 | 0.743 |
| ಪಾಕಿಸ್ತಾನ | 9 | 4 | 5 | 0 | 8 | -0.199 |
| ಅಫ್ಗಾನಿಸ್ತಾನ | 9 | 4 | 5 | 0 | 8 | -0.336 |
| ಇಂಗ್ಲೆಂಡ್ | 9 | 3 | 6 | 0 | 6 | -0.572 |
| ಬಾಂಗ್ಲಾದೇಶ | 9 | 2 | 7 | 0 | 4 | -1.087 |
| ಶ್ರೀಲಂಕಾ | 9 | 2 | 7 | 0 | 4 | -1.419 |
| ನೆದರ್ಲೆಂಡ್ಸ್ | 9 | 2 | 7 | 0 | 4 | -1.825 |

### ಸ್ಕೋರ್ ಕಾರ್ಡ್

**ಭಾರತ 4ಕ್ಕೆ410 (50 ಓವರ್‌ಗಳಲ್ಲಿ)**

ರೋಹಿತ್ ಸಿ ಬರೇಸಿ ಬಿ ಲೀಡ್ 61 (54ಎ, 8X4, 6X2)
ಗಿಲ್ ಸಿ ತೇಜಾ ಬಿ ವ್ಯಾನ್ 51 (32ಎ, 4X3, 6X4)
ವಿರಾಟ್ ಬಿ ಮರ್ವ 51 (56ಎ, 4X5, 6X1)
ಶ್ರೇಯಸ್ ಔಟಾಗದೆ 128 (94ಎ, 4X10, 6X5)
ರಾಹುಲ್ ಸಿ ಸೈಬ್ರ್ಯಾಂಡ್ ಬಿ ಲೀಡ್ 102 (64ಎ, 4X11, 6X4)
ಸೂರ್ಯಕುಮಾರ್ ಔಟಾಗದೆ 2 (1ಎ)

ಇತರೆ: 15 (ಲೆಗ್‌ಬೈ 1, ವೈಡ್ 13, ನೋಬಾಲ್ 1)

ವಿಕೆಟ್ ಪತನ: 1–100 (ಶುಭಮನ್ ಗಿಲ್;11.5), 2–129 (ರೋಹಿತ್ ಶರ್ಮಾ;17.4), 3–200 (ವಿರಾಟ್ ಕೊಹ್ಲಿ; 28.4), 4–408 (ಕೆ.ಎಲ್. ರಾಹುಲ್; 49.5)

ಬೌಲಿಂಗ್: ಆರ್ಯನ್ ದತ್ 7–0–52–0, ಲೊಗಾನ್ ವ್ಯಾನ್ ಬೀಕ್ 10–0–107–0, ಕಾಲಿನ ಎಕರ್ಮನ್ 3–0–25–0, ಪಾಲ್ ವ್ಯಾನ್ ಮೀಕೆರನ್ 10–0–90–1, ರೋಲ್ಫ್ ವ್ಯಾನ ಡರ್ ಮರ್ವ 10–0–53–1, ಬಾಸ್ ಡಿ ಲೀಡ್ 10–0–82–2

**ನೆದರ್ಲೆಂಡ್ಸ್ 250 (47.5 ಓವರ್‌ಗಳಲ್ಲಿ)**

ವೆಸ್ಲಿ ಸಿ ರಾಹುಲ್ ಬಿ ಸಿರಾಜ್ 4 (5ಎ)
ಮ್ಯಾಕ್ಸ್ ಬಿ ಜಡೇಜ 30 (42ಎ, 4X3, 6X1)
ಕಾಲಿನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 35 (32ಎ, 4X6)
ಸೈಬ್ರ್ಯಾಂಡ್ ಬಿ ಸಿರಾಜ್ 45 (80ಎ, 4X4)
ಸ್ಕಾಟ್ ಸಿ ರಾಹುಲ್ ಬಿ ಕೊಹ್ಲಿ 17 (30ಎ, 4X1)
ಬಾಸ್ ಡಿ ಲೀಡ್ ಬಿ ಬೂಮ್ರಾ 12 (21ಎ)
ತೇಜಾ ಸಿ ಶಮಿ ಬಿ ರೋಹಿತ್ 54 (39 ಎ, 4X1, 6X6)
ಲೊಗಾನ್ ಬಿ ಕುಲದೀಪ್ 16 (15ಎ, 4X2)
ಮರ್ವ ಸಿ ಶಮಿ ಬಿ ಜಡೇಜ 16 (8ಎ, 4X1, 6X2)
ಆರ್ಯನ್ ಬಿ ಬೂಮ್ರಾ 5 (11ಎ)
ಪಲ್ ಔಟಾಗದೆ 3 (4ಎ)

ಇತರೆ: 13 (ಲೆಗ್‌ಬೈ 9, ವೈಡ್ 4)

ವಿಕೆಟ್ ಪತನ: 1–5 (ವೆಸ್ಲಿ ಬರೆಸಿ; 1.3), 2–66(ಎಕರ್ಮನ್; 12.1), 3–72 (ಮ್ಯಾಕ್ ಒಡೌಡ್; 15.1), 4–111 (ಸ್ಕಾಟ್ ಎಡ್ವರ್ಡ್ಸ್; 24.3), 5–144 (ಬಾಸ್ ಡಿ ಲೀಡ್; 31.6), 6–172 (ಸೈಬ್ರ್ಯಾಂಡ್; 37.3), 7–208 (ಲೊಗಾನ್ ವ್ಯಾನ್ ಬೀಕ್; 42.1), 8–225 (ವ್ಯಾನ್ ಡೆರ್ ಮರ್ವ; 43.4), 9–236 (ಆರ್ಯನ್ ದತ್; 46.1), 10–250 (ನಿಡಮಾನೂರು; 47.5)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 9–1–33–2, ಮೊಹಮ್ಮದ್ ಸಿರಾಜ್ 6–1–29–2, ಮೊಹಮ್ಮದ್ ಶಮಿ 6–0–41–0, ಕುಲದೀಪ್ ಯಾದವ್ 10–1–51–2, ರವೀಂದ್ರ ಜಡೇಜ 9–0–49–2, ವಿರಾಟ್ ಕೊಹ್ಲಿ 3–0–13–1, ಶುಭಮನ್ ಗಿಲ್ 2–0–11–0, ಸೂರ್ಯಕುಮಾರ್ ಯಾದವ್ 2–0–17–0, ರೋಹಿತ್ ಶರ್ಮಾ 0.5–0–7–1

**ಪಂದ್ಯಶ್ರೇಷ್ಠ:** ಶ್ರೇಯಸ್ ಅಯ್ಯರ್

**ಫಲಿತಾಂಶ: ಭಾರತಕ್ಕೆ 160 ರನ್ ಜಯ, ಎರಡು ಅಂಕ**

### ಅಗ್ರ ಐವರು

| ಬ್ಯಾಟಿಂಗ್ | |
|---|---|
| ವಿರಾಟ್ ಕೊಹ್ಲಿ (ಭಾರತ) | 594 |
| ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ) | 591 |
| ರಚಿನ್ ರವೀಂದ್ರ (ನ್ಯೂಜಿಲೆಂಡ್) | 565 |
| ರೋಹಿತ್ ಶರ್ಮಾ (ಭಾರತ) | 503 |
| ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ) | 499 |

| ಬೌಲಿಂಗ್ | |
|---|---|
| ಆ್ಯಡಮ್ ಜಂಪಾ (ಆಸ್ಟ್ರೇಲಿಯಾ) | 22 |
| ದಿಲ್ಶಾನ್ ಮಧುಶಂಕ (ಶ್ರೀಲಂಕಾ) | 21 |
| ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ) | 18 |
| ಶಹೀನ್ ಆಫ್ರಿದಿ (ಪಾಕಿಸ್ತಾನ) | 18 |
| ಜಸ್‌ಪ್ರೀತ್ ಬೂಮ್ರಾ (ಭಾರತ) | 17 |



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ನೆದರ್ಲೆಂಡ್ಸ್ ಹಾಗೂ ಭಾರತ ನಡುವಿನ ಪಂದ್ಯದಲ್ಲಿ ಅಭಿಮಾನಿಗಳು ಸಂಭ್ರಮಿಸಿದ ಪರಿ –ಪ್ರಜಾವಾಣಿ ಚಿತ್ರ

## ಒಂಬತ್ತು ಮಂದಿ ಬೌಲಿಂಗ್: ಕೊಹ್ಲಿ, ರೋಹಿತ್‌ಗೆ ವಿಕೆಟ್!

ಕಳೆದೆರಡು ದಿನಗಳ ಅಭ್ಯಾಸದ ಸಂದರ್ಭದಲ್ಲಿ ಭಾರತದ ಬ್ಯಾಟರ್‌ಗಳೆಲ್ಲರೂ ಬೌಲಿಂಗ್ ಅಭ್ಯಾಸ ಮಾಡಿದ್ದರು. ಈ ಪಂದ್ಯದಲ್ಲಿ 23ನೇ ಓವರ್ ಬೌಲಿಂಗ್ ಮಾಡಲು ವಿರಾಟ್ ಕೊಹ್ಲಿ ಬಂದಾಗ ಪ್ರೇಕ್ಷಕರ ಗ್ಯಾಲರಿಯಿಂದ ಆರ್‌ಸಿಬಿ..ಆರ್‌ಸಿಬಿ.. ಘೋಷಣೆಯ ಜೊತೆಗೆ ಹರ್ಷೋದ್ಗಾರಗಳೂ ಪ್ರತಿಧ್ವನಿಸಿದವು. ಮೈದಾನದಲ್ಲಿ 33 ಸಾವಿರ ಪ್ರೇಕ್ಷಕರಿದ್ದರು.

ಅವರು ತಮ್ಮ ಎರಡನೇ ಓವರ್‌ನಲ್ಲಿ ನೆದರ್ಲೆಂಡ್ಸ್ ನಾಯಕ ಸ್ಕಾಟ್ ಎಡ್ವರ್ಡ್ ವಿಕೆಟ್ ಗಳಿಸದಾಗಲಂತೂ ಸಂಭ್ರಮ ಹೊಳೆ ಹರಿಯಿತು. ಗಣ್ಯರ ಗ್ಯಾಲರಿಯಲ್ಲಿದ್ದ ವಿರಾಟ್ ಪತ್ನಿ ಅನುಷ್ಕಾ ಶರ್ಮಾ ಕೂಡ ಸಂಭ್ರಮಿಸಿದರು. ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ ಕೂಡ ಬೌಲಿಂಗ್ ಮಾಡಿದರು. 48ನೇ ಓವರ್ ಬೌಲಿಂಗ್ ಮಾಡಿದ ರೋಹಿತ್ ಶರ್ಮಾ ಅವರೂ ಕೊನೆಯ ವಿಕೆಟ್ ಗಳಿಸಿದರು.

'ಮುಂದಿನ ಪಂದ್ಯ ಬಹು ಮುಖ್ಯವಾಗಿದೆ. ಆದ್ದರಿಂದ ಯಾವಾಗ ಹೆಚ್ಚುವರಿ ಬೌಲರ್‌ಗಳ ಅಗತ್ಯ ಬೀಳುವುದೋ ಗೊತ್ತಿಲ್ಲ. ಆದ್ದರಿಂದ ಇಲ್ಲಿ ನಿರಾಳ ಪರಿಸ್ಥಿತಿ ಇದ್ದ ಕಾರಣ, ಎಲ್ಲರೂ ಬೌಲಿಂಗ್ ಮಾಡುವ ಪ್ರಯೋಗ ನಡೆಯಿತು' ಎಂದು ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಭಾರತ ಕ್ರಿಕೆಟ್ ತಂಡದ ಆಟಗಾರರು ಶನಿವಾರ ಬೆಂಗಳೂರಿನಲ್ಲಿ ದೀಪಾವಳಿ ಆಚರಿಸಿದರು. ವಿರಾಟ್ ಕೊಹ್ಲಿ, ಅವರ ಪತ್ನಿ ಅನುಷ್ಕಾ ಶರ್ಮಾ ಅವರೊಂದಿಗೆ ತಂಡದ ಥ್ರೋಡೌನ್ ಪರಿಣತ ಡಿ. ರಾಘವೇಂದ್ರ ಇದ್ದಾರೆ

**ದಾಖಲೆಯ 215 ಸಿಕ್ಸರ್:** 2023 ವರ್ಷದಲ್ಲಿ ಭಾರತ ತಂಡವು ಏಕದಿನ ಕ್ರಿಕೆಟ್‌ನಲ್ಲಿ 215 ಸಿಕ್ಸರ್ ಸಿಡಿಸುವ ಮೂಲಕ ವರ್ಷದಲ್ಲಿ ಗರಿಷ್ಠ ಸಿಕ್ಸರ್ ಗಳಿಸಿದ ದಾಖಲೆಗೆ ಪಾತ್ರವಾಯಿತು. 2019ರಲ್ಲಿ ವೆಸ್ಟ್‌ಇಂಡೀಸ್ (209 ಸಿಕ್ಸರ್) ನಿರ್ಮಿಸಿದ್ದ ದಾಖಲೆಯನ್ನು ಮುರಿಯಿತು.

### ವಿಶ್ವಕಪ್ ಇನಿಂಗ್ಸ್: 4ನೇ ಅಥವಾ ಅದಕ್ಕಿಂತ ಕೆಳಗಿನ ವಿಕೆಟ್ ಜೊತೆಯಾಟ (ಭಾರತ)

| ರನ್ | ಬ್ಯಾಟರ್ | ಎದುರಾಳಿ | ಸ್ಥಳ | ವರ್ಷ |
|---|---|---|---|---|
| 208 | ಶ್ರೇಯಸ್ ಅಯ್ಯರ್–ಕೆ.ಎಲ್. ರಾಹುಲ್ | ನೆದರ್ಲೆಂಡ್ಸ್ | ಬೆಂಗಳೂರು | 2023 |
| 196* | ಮಹೇಂದ್ರಸಿಂಗ್ ಧೋನಿ–ಸುರೇಶ್ ರೈನಾ | ಜಿಂಬಾಬ್ವೆ | ಆಕ್ಲೆಂಡ್ | 2015 |
| 165 | ವಿರಾಟ್ ಕೊಹ್ಲಿ–ಕೆ.ಎಲ್.ರಾಹುಲ್ | ಆಸ್ಟ್ರೇಲಿಯಾ | ಚೆನ್ನೈ | 2023 |
| 142 | ವಿನೋದ್ ಕಾಂಬ್ಳಿ–ನವಜ್ಯೋತ್‌ಸಿಂಗ್ ಸಿಧು | ಜಿಂಬಾಬ್ವೆ | ಕಾನ್ಪುರ | 1996 |
| 141 | ಅಜಯ್ ಜಡೇಜ–ರಾಬಿನ್ ಸಿಂಗ್ | ಆಸ್ಟ್ರೇಲಿಯಾ | ದ ಒವಲ್ | 1999 |

## ನೇಮಕಾತಿಗೆ ಅಡ್ಡಿಯಾದ ಸಂಘರ್ಷ

ಒಂದನೇ ಪುಟದಿಂದ...

ಆ ಟಿಪ್ಪಣಿಯ ಆಧಾರದಲ್ಲಿ ಅದೇ ದಿನ ಸಂಜೆ ಕಾರ್ಯದರ್ಶಿಗೆ ಟಿಪ್ಪಣಿ ನೀಡಿದ್ದ ಅಧ್ಯಕ್ಷರು, 'ಸಭೆಗೆ ಹಾಜರಾಗುವಂತೆ ನಿಮಗೆ ತಿಳಿಸಿದ್ದರೂ ಮಧ್ಯಾಹ್ನ 3.30 ಗಂಟೆಯಾದರೂ ಹಾಜರಾಗಿಲ್ಲ. ಹಾಜರಾಗಲು ಸಾಧ್ಯವಿದೆಯೋ, ಇಲ್ಲವೊ ಎಂಬುವುದನ್ನೂ ತಿಳಿಸಿಲ್ಲ. ಹೀಗಾಗಿ ಸಭೆ ರದ್ದುಪಡಿಸಲಾಗಿದೆ' ಎಂದು ತಿಳಿಸಿದ್ದರು.

ಅಧ್ಯಕ್ಷರಿಗೆ ಪತ್ರದ ಮೂಲಕವೇ ಉತ್ತರಿಸಿರುವ ಕಾರ್ಯದರ್ಶಿ, 'ಈ ಹಿಂದಿನ (ನ. 2ರ) ಸಭೆಯ ನಡಾವಳಿಗಳನ್ನು ಅನೇಕ ಬಾರಿ ತಿದ್ದುಪಡಿ ಮಾಡುವಂತೆ ಆಯೋಗದ ಸಭೆಯ ದಿನದಂದು (ನ.7) ಸೂಚಿಸಿದ್ದು, ಆ ನಡಾವಳಿಗಳಿಗೆ ಇದುವರೆಗೂ ಸಹಿ ಆಗಿಲ್ಲ. ಈ ಮಧ್ಯೆ, ಪ್ರತಿ ಬಾರಿ ಆಪ್ತ ಸಹಾಯಕರಿಗೆ ಸಭೆಗೆ ಹಾಜರಾಗುವ ಬಗ್ಗೆ ಮಾಹಿತಿ ನೀಡುವಂತೆ ಕೋರಲಾಗಿ, ಯಾವುದೇ ಆದೇಶ ಸ್ವೀಕೃತ ಆಗಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಸಂವಹನ ಕೊರತೆಯನ್ನು ನೇರವಾಗಿ ಮಾತನಾಡುವುದರಿಂದ ಬಗೆಹರಿಸಬಹುದಾಗಿದೆ. ಕಾರ್ಯದರ್ಶಿಗೆ ತಾವು ನೇರವಾಗಿ ಆದೇಶ ನೀಡಬಹುದಾಗಿದೆ. ವಾಟ್ಸ್‌ಆ್ಯಪ್, ಇ–ಮೇಲ್ ಮತ್ತು ದೂರವಾಣಿ ಮೂಲಕವೂ ಮಾಹಿತಿ ನೀಡಬಹುದಾಗಿದೆ. ಮಧ್ಯವರ್ತಿಗಳ ಮೂಲಕ ಸಂದೇಶ ರವಾನಿಸದಿರುವುದು ಆದಷ್ಟು ಸೂಕ್ತವಾಗಿರುತ್ತದೆ. ಆಡಳಿತಾತ್ಮಕ ಅನೇಕ ವಿಷಯಗಳು, ನ್ಯಾಯಾಲಯದ ಪ್ರಕರಣಗಳು, ನಿತ್ಯದ ಕೆಲಸ– ಕಾರ್ಯಗಳ ಒತ್ತಡ, ಸಿಬ್ಬಂದಿ ಕೊರತೆ ಆಯೋಗದಲ್ಲಿ ಸಮರ್ಪಕವಾದ ಐ.ಟಿ ಕೇಂದ್ರ ಇಲ್ಲದಿರುವುದು, ತಾಂತ್ರಿಕ ನೈಪುಣ್ಯತೆಯ ಸಿಬ್ಬಂದಿ ಕೊರತೆ ತೀವ್ರವಾಗಿದೆ. ಈ ಕೊರತೆ ನಿವಾರಿಸಿ ಕೇಂದ್ರ ಲೋಕಸೇವಾ ಆಯೋಗದ ಮಾದರಿಯಲ್ಲಿ ಪ್ರಬಲ ಸಂಸ್ಥೆಯಾಗಿ ಬೆಳೆಯಲು ಆಯೋಗದ ಸಹಕಾರ ಅತ್ಯಂತ ಅವಶ್ಯವಾಗಿದೆ' ಎಂದೂ ಉಲ್ಲೇಖಿಸಿದ್ದಾರೆ.

'ಕಡತಗಳಲ್ಲಿ ವಿಷಯಗಳನ್ನು ಚರ್ಚಿಸುವ ಬದಲು ನೇರವಾಗಿ ಚರ್ಚಿಸಿ ಬಗೆಹರಿಸಿಕೊಳ್ಳುವುದು ಸೂಕ್ತವಾಗಿದೆ. ಅಧಿಸೂಚನೆ ಹೊರಡಿಸುವುದು, ಈಗಾಗಲೇ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಪರೀಕ್ಷೆ ನಡೆಸುವುದು, ಮೌಲ್ಯಮಾಪನ ಕೈಗೊಂಡು ಫಲಿತಾಂಶ ನೀಡುವ ಕೆಲಸವನ್ನು 3 ರಿಂದ 6 ತಿಂಗಳ ಒಳಗೆ ನಡೆಸುವ ಅವಶ್ಯಕತೆಯಿದೆ. ಇದಕ್ಕೆ ಅಧ್ಯಕ್ಷರು ಮತ್ತು ಸದಸ್ಯರು ಸಹಕಾರ ನೀಡಬೇಕು' ಎಂದೂ ಕೋರಿದ್ದಾರೆ.

ನ. 7ರ ಸಭೆ ರದ್ದುಪಡಿಸಿದ ವಿಚಾರ ಉಲ್ಲೇಖಿಸಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅಧ್ಯಕ್ಷರು, 'ಆಯೋಗದ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಕಾರ್ಯದರ್ಶಿಯ ಸ್ಥಾನವೇನು ಎಂಬುವುದನ್ನು ಆಯೋಗದ ಕಾರ್ಯದರ್ಶಿಗೆ ತಿಳಿಸಬೇಕು. ಮತ್ತು ಆಯೋಗದ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರ ಜಾರಿ ಮಾಡಿರುವ ನಿಯಮಗಳನ್ನು ಸರಿಯಾಗಿ ಅರ್ಥೈಸಿಕೊಂಡು ಕಾರ್ಯನಿರ್ವಹಿಸುವಂತೆ ಮತ್ತು ಅವರ ವರ್ತನೆಯನ್ನು ಸರಿಪಡಿಸುವಂತೆ ಸೂಚಿಸಬೇಕು' ಎಂದು ಮನವಿ ಮಾಡಿದ್ದಾರೆ.

ಆಯೋಗ ಜೊತೆ ಸಮನ್ವಯದ ಕೊರತೆ, ಮುಸುಕಿನ ಗುದ್ದಾಟ ನಡೆಯುತ್ತಿರುವುದು ಬಹಿರಂಗಗೊಂಡ ಕಾರಣ ಈ ಹಿಂದಿನ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ಅವರನ್ನು ಒಂದೂವರೆ ತಿಂಗಳ ಹಿಂದೆ ವರ್ಗಾವಣೆ ಮಾಡಲಾಗಿತ್ತು. ಆ ಜಾಗಕ್ಕೆ ಲತಾ ಕುಮಾರಿ ಅವರನ್ನು ನೇಮಿಸಲಾಗಿತ್ತು.

## ನಿಜ್ಜರ್ ಹತ್ಯೆ: ಭಾರತದ ವಿರುದ್ಧ ಆರೋಪ ಪುನರುಚ್ಚರಿಸಿದ ಟ್ರೂಡೊ



**ಒಟ್ಟಾವಾ (ಪಿಟಿಐ):** ಭಾರತದ ಮೇಲೆ ಹೊರಿಸಿರುವ ಆರೋಪವನ್ನು ಪುನರುಚ್ಚರಿಸಿರುವ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ, 'ಈ ಹೋರಾಟವು ನಾವಾಗೇ ಬಯಸಿದ್ದಲ್ಲ. ಇದು ಗಂಭೀರ ವಿಷಯ. ಈ ವಿಚಾರವಾಗಿ ಭಾರತದೊಂದಿಗೆ ನಾವು ರಚನಾತ್ಮಕವಾಗಿ ಕೆಲಸ ಮಾಡಲು ಬಯಸುತ್ತೇವೆ' ಎಂದು ಒತ್ತಿ ಹೇಳಿದ್ದಾರೆ.

ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕೆನಡಾದ ರಾಜತಾಂತ್ರಿಕರಿಗೆ ನೀಡಲಾಗಿದ್ದ ರಕ್ಷಣೆಯನ್ನು ಹಿಂಪಡೆಯುವುದಾಗಿ ಭಾರತ ಬೆದರಿಕೆ ಹಾಕಿತ್ತು. ಹೀಗಾಗಿ, 40ಕ್ಕೂ ಹೆಚ್ಚು ರಾಜತಾಂತ್ರಿಕರನ್ನು ವಾಪಸು ಕರೆಸಿಕೊಳ್ಳಲಾಯಿತು. ಈ ವಿಚಾರದಲ್ಲಿ ಭಾರತವು ವಿಯೆನ್ನಾ ಒಪ್ಪಂದವನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದರು.

'ಕೆನಡಾದ ನೆಲದಲ್ಲಿ ಕೆನಡಾ ಪ್ರಜೆಯೊಬ್ಬನ ಹತ್ಯೆಯಲ್ಲಿ ಭಾರತ ಸರ್ಕಾರದ ಏಜೆಂಟ್ ಭಾಗಿಯಾಗಿರುವ ಬಗ್ಗೆ ನಂಬಲರ್ಹ ಆರೋಪಗಳು ನಮ್ಮ ಗಮನಕ್ಕೆ ಬಂದ ಆರಂಭದಿಂದಲೂ ನಾವು ಈ ವಿಚಾರದಲ್ಲಿ ಆಮೂಲಾಗ್ರ ತನಿಖೆಗೆ ಸಹಕರಿಸುವಂತೆ ಭಾರತ ಸರ್ಕಾರವನ್ನು ಕೇಳಿಕೊಂಡಿದ್ದೇವೆ' ಎಂದು ಟ್ರೂಡೊ ಹೇಳಿದರು.

'ಅಂತರರಾಷ್ಟ್ರೀಯ ಕಾನೂನು ಮತ್ತು ಪ್ರಜಾಪ್ರಭುತ್ವ ರಾಷ್ಟ್ರದ ಸಾರ್ವಭೌಮತೆಯನ್ನು ಇದು ನಿಜವಾಗಿಯೂ ಗಂಭೀರವಾಗಿ ಉಲ್ಲಂಘಿಸಿದಂತೆ. ಈ ವಿಚಾರವನ್ನು ಕೆನಡಾ ಗಂಭೀರವಾಗಿ ಪರಿಗಣಿಸಿದ್ದು, ಇದನ್ನು ಅಮೆರಿಕ ಸೇರಿದಂತೆ ತನ್ನೆಲ್ಲ ಮಿತ್ರರಾಷ್ಟ್ರಗಳ ಗಮನಕ್ಕೂ ತಂದಿದೆ. ಯಾವುದೇ ಪರಿಣಾಮಗಳನ್ನು ಲೆಕ್ಕಿಸದೇ ದೊಡ್ಡ ರಾಷ್ಟ್ರಗಳು ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿದರೆ, ಅದು ಇಡೀ ವಿಶ್ವಕ್ಕೆ ದೊಡ್ಡ ಅಪಾಯ ತಂದೊಡ್ಡಲಿದೆ' ಎಂದು ಟ್ರೊಡೊ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜೂನ್ 18 ರಂದು ಬ್ರಿಟಿಷ್ ಕೊಲಂಬಿಯಾದಲ್ಲಿ ನಡೆದ ಖಾಲಿಸ್ತಾನಿ ಸಿಖ್ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತೀಯ ಏಜೆಂಟರ 'ಸಂಭಾವ್ಯ' ಕೈವಾಡ ಇರುವ ಬಗ್ಗೆ ಜಸ್ಟಿನ್ ಟ್ರೂಡೊ ಅವರು ಸೆಪ್ಟೆಂಬರ್‌ನಲ್ಲಿ ಆರೋಪಿಸಿದ್ದರು. ಇದರಿಂದ ಉಭಯ ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ತೀವ್ರ ಬಿರುಕು ಮೂಡಿದೆ.

ಟ್ರೂಡೊ ಅವರ ಆರೋಪಗಳನ್ನು ಭಾರತ ಬಲವಾಗಿ ತಳ್ಳಿಹಾಕಿದೆ. ಹರ್ದೀಪ್ ಸಿಂಗ್ ನಿಜ್ಜರ್‌ನನ್ನು ಭಾರತವು 2020ರಲ್ಲಿ ಭಯೋತ್ಪಾದಕನೆಂದು ಘೋಷಿಸಿತ್ತು.

## ಸೇನಾ ನೆಲೆಗಳ ಮೇಲೆ ದಾಳಿ: 100ಕ್ಕೂ ಹೆಚ್ಚು ಪಿಟಿಐ ಕಾರ್ಯಕರ್ತರ ಬಂಧನ

**ಲಾಹೋರ್ (ಪಿಟಿಐ):** ಕಳೆದ ಮೇನಲ್ಲಿ ಸೇನಾ ನೆಲೆಗಳ ಮೇಲೆ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಪಕ್ಷದ ನೂರಕ್ಕೂ ಹೆಚ್ಚು ಕಾರ್ಯಕರ್ತರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

'ಸೇನಾ ಕಮಾಂಡರ್ ನಿವಾಸ ಮತ್ತು ಅಕ್ಸಾರಿ ಟವರ್ ಮೇಲಿನ ದಾಳಿಗೆ ಸಂಬಂಧಿಸಿದಂತೆ ಪಿಟಿಐ ಪಕ್ಷದ 105 ಕಾರ್ಯಕರ್ತರನ್ನು ಶನಿವಾರ ಬಂಧಿಸಲಾಗಿದೆ' ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪರಾರಿಯಾಗಿರುವ ಸುಮಾರು 1000 ಕಾರ್ಯಕರ್ತರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದೂ ತಿಳಿಸಿದರು.

ಮೇ 9ರಂದು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನದ ಬಳಿಕ ಪಕ್ಷದ ಕಾರ್ಯಕರ್ತರು ಹಲವರು ಸೇನಾ ನೆಲೆಗಳ ಮೇಲೆ ದಾಳಿ ನಡೆಸಿ, ಧ್ವಂಸಗೊಳಿಸಿದ್ದರು.

# ಬೆಂಗಳೂರು ಚಾಂಪಿಯನ್; ದ.ಕ ರನ್ನರ್ ಅಪ್

## ರಾಜ್ಯ ರೋಲರ್ ಸ್ಕೇಟಿಂಗ್: ಧನುಷ್, ಡಾಷೆಲ್‌ಗೆ ವೈಯಕ್ತಿಕ ಪ್ರಶಸ್ತಿ; ಶಾಮಿಲ್‌ಗೆ 4 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ




ಸಮಗ್ರ ಪ್ರಶಸ್ತಿ ಗೆದ್ದ ಬೆಂಗಳೂರು ತಂಡದವರ ಸಂಭ್ರಮ (ಎಡಚಿತ್ರ). ಬಾಲಕರ ವಿಭಾಗದಲ್ಲಿ 4 ಚಿನ್ನ ಗೆದ್ದ ದಕ್ಷಿಣ ಕನ್ನಡದ ಮೊಹಮ್ಮದ್ ಶಾಮಿಲ್ ಅರ್ಷದ್

**ಮಂಗಳೂರು:** ಮೊದಲ ದಿನದಿಂದಲೇ ಎಲ್ಲ ವಿಭಾಗಗಳಲ್ಲೂ ಪಾರಮ್ಯ ಮೆರೆದ ಬೆಂಗಳೂರು ಸ್ಕೇಟರ್‌ಗಳು ಇಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನ ಸಮಗ್ರ ಪ್ರಶಸ್ತಿಯನ್ನು ಗೆದ್ದುಕೊಂಡರು. ದಕ್ಷಿಣ ಕನ್ನಡ ಜಿಲ್ಲೆ ರನ್ನರ್ ಅಪ್ ಆಯಿತು.

ರಾಜ್ಯ ರೋಲರ್ ಸ್ಕೇಟಿಂಗ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ ರೋಲರ್ ಸ್ಪೋರ್ಟ್ಸ್ ಸಂಸ್ಥೆಗಳು ನಗರದ ಫ್ರಾನ್ಸಿಸ್ ಡೋರಿಸ್ ಸ್ಕೇಟ್ ಸಿಟಿ ಹಾಗೂ ಮುಂಚೂರಿನ ನಾರ್ದರ್ನ್ ಸ್ಕೈ ಲೇಔಟ್‌ನಲ್ಲಿ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ಒಟ್ಟು 657 ಪಾಯಿಂಟ್ಸ್ ಕಲೆ ಹಾಕಿದರೆ ದಕ್ಷಿಣ ಕನ್ನಡ 158 ಪಾಯಿಂಟ್ಸ್ ಗಳಿಸಿತು. 90 ಪಾಯಿಂಟ್‌ಗಳೊಂದಿಗೆ ಮೈಸೂರು ಮೂರನೇ ಸ್ಥಾನ ಪಡೆಯಿತು.

ಕ್ವಾಡ್ ವಿಭಾಗದ ಮಹಿಳೆಯರು, 14ರಿಂದ 17 ವರ್ಷದೊಳಗಿನ ಬಾಲಕಿಯರು ಮತ್ತು 9ರಿಂದ 11 ವರ್ಷದ ಬಾಲಕರ ವಿಭಾಗದಲ್ಲಿ ತಲಾ 15 ಚಿನ್ನ ಗೆದ್ದ ಬೆಂಗಳೂರು, ಇನ್‌ಲೈನ್‌ನ ಮಹಿಳೆಯರ ವಿಭಾಗದಲ್ಲಿ 20, 14ರಿಂದ 17 ವರ್ಷದ ಬಾಲಕಿಯರ ವಿಭಗದಲ್ಲಿ 18, ಬಾಲಕರ ವಿಭಾಗದಲ್ಲಿ 16 ಮತ್ತು ಇತರ 6 ವಿಭಾಗದಲ್ಲಿ 15 ಚಿನ್ನ ಗೆದ್ದುಕೊಂಡಿತು.

ದಕ್ಷಿಣ ಕನ್ನಡ ಜಿಲ್ಲೆ ಇನ್‌ಲೈನ್‌ನ 14ರಿಂದ 17 ವರ್ಷದ ಬಾಲಕರ ವಿಭಾಗದಲ್ಲಿ 20 ಮತ್ತು ಪುರುಷರ ವಿಭಾಗದಲ್ಲಿ 16 ಚಿನ್ನ ತನ್ನದಾಗಿಸಿಕೊಂಡಿತು. ಪುರುಷರ ವಿಭಾಗದಲ್ಲಿ 20 ಪಾಯಿಂಟ್ಸ್ ಗಳಿಸಿದ ಬೆಂಗಳೂರಿನ ಧನುಷ್ ವೈಯಕ್ತಿಕ ಚಾಂಪಿಯನ್ ಆದರೆ, 3 ಚಿನ್ನ ಮತ್ತು 1 ಬೆಳ್ಳಿ ಗೆದ್ದ ದಕ್ಷಿಣ ಕನ್ನಡದ ಡಾಷೆಲ್ ಅಮಾಂಡ ಮಹಿಳಾ ವಿಭಾಗದ ವೈಯಕ್ತಿಕ ಚಾಂಪಿಯನ್ ಎನಿಸಿಕೊಂಡರು. 4 ಚಿನ್ನ ಗೆದ್ದ ದಕ್ಷಿಣ ಕನ್ನಡದ ಮೊಹಮ್ಮದ್ ಶಾಮಿಲ್ 14ರಿಂದ 17 ವರ್ಷದ ಬಾಲಕರ ವಿಭಾಗದ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.



ಮಹಿಳಾ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್ ಆದ ಡಾಷೆಲ್ ಅಮಾಂಡ

**ಕೊನೆಯ ದಿನದ ಫಲಿತಾಂಶಗಳು:** ಕ್ವಾಡ್: ರೋಡ್-1, ಲ್ಯಾಪ್1: ಪುರುಷರು: ದುಷ್ಯಂತ್ (ಬೆಂಗಳೂರು)-1, ಕಿರಣ್ ರೆಡ್ಡಿ (ಚಿಕ್ಕಬಳ್ಳಾಪುರ)-2, ರೇವತ್ ಜಿ.ವಿ (ಬೆಂಗಳೂರು)-3. ಕಾಲ: 44.97 ಸೆ; ಮಹಿಳೆಯರು: ಡಿಂಪಲ್ ಗೌಡ: (ಬೆಂಗಳೂರು)-1, ಹರ್ಷಿತಾ (ಬೆಂಗಳೂರು)-2, ವಿಶಾಖ ಪೂಲ್‌ವಾಲೆ (ಬೆಳಗಾವಿ)-3. ಕಾಲ: 50.93 ಸೆ;

14ರಿಂದ 17 ವರ್ಷದ ಬಾಲಕರು: ವಿಜಯ್ ಜಿ (ಮೈಸೂರು)-1, ಮೌರ್ಯ ರೆಡ್ಡಿ (ಬೆಂಗಳೂರು)-2, ವಿ.ಶ್ರೇಯಸ್ ಗೌಡ (ಬೆಂಗಳೂರು)-3. ಕಾಲ:45.1 ಸೆ; ಬಾಲಕಿಯರು: ನಿಹಾರಿಕಾ (ಬೆಂಗಳೂರು)-1, ಸಮಾಖ್ಯ ಅಡಿಗ (ಬೆಂಗಳೂರು)-2, ಶುಭ್ರ ಜ್ಯೋತ್ಸ್ನಾ ಅಡ್ಡೂರು (ದಕ್ಷಿಣ ಕನ್ನಡ)-3. ಕಾಲ: 51.1 ಸೆ;

11ರಿಂದ 14 ವರ್ಷದ ಬಾಲಕರು: ಋಥವ್ ಪ್ರದೀಪ್ (ಬೆಂಗಳೂರು)-1, ಸೌರಭ್ ಸಲೋಖೆ (ಬೆಳಗಾವಿ)-2, ಶಾಲೋಮ್ ಕ್ರಿಸ್ಟನ್ (ದಕ್ಷಿಣ ಕನ್ನಡ)-3. ಕಾಲ: 48.31 ಸೆ; ಬಾಲಕಿಯರು: ಜೆಸ್ನಿಯಾ ಕೊರಿಯಾ (ದಕ್ಷಿಣ ಕನ್ನಡ)-1, ಪಾವನಿ ಶೆಟ್ಟಿ (ಮೈಸೂರು)-2, ಧಾತ್ರಿ ಎಂ (ಬೆಂಗಳೂರು)-3. ಕಾಲ: 49.5 ಸೆ;


9ರಿಂದ 11 ವರ್ಷದ ಬಾಲಕರು: ಲಿಖಿತ್ ಶರ್ಮಾ (ಬೆಂಗಳೂರು)-1, ಅರ್ಜುನ್ ಕುಮಾರ್ (ಬೆಂಗಳೂರು)-2, ಕುಲದೀಪ್ ಬಿರ್ಜೆ (ಬೆಳಗಾವಿ)-3. ಕಾಲ: 50.81 ಸೆ; ಬಾಲಕಿಯರು: ಡಿಂಪಾನ (ಬೆಂಗಳೂರು)-1, ಅದಿತಿ ಪಾಲ್ (ಬೆಂಗಳೂರು)-2, ನಿಳಾ ಸಂಪತ್ (ಶಿವಮೊಗ್ಗ)-3. ಕಾಲ: 54.94 ಸೆ;

7ರಿಂದ 9 ವರ್ಷದ ಬಾಲಕರು: ಅವಧೂತ್ ಮೋರೆ (ಬೆಳಗಾವಿ)-1, ರೋಹನ್ ಎಸ್.ಆರ್ (ತುಮಕೂರು)-2, ಶಿವಂ ವೈ.ಎನ್ (ದಕ್ಷಿಣ ಕನ್ನಡ)-3. ಕಾಲ: 54.67 ಸೆ; ಬಾಲಕಿಯರು: ಕೀರ್ತಿ (ದಕ್ಷಿಣ ಕನ್ನಡ)-1, ನಿಶ್ಚಿತಾ ದರ್ಶನ್ (ಬೆಂಗಳೂರು)-2, ಧ್ರುವ ಪಾಟೀಲ (ಬೆಳಗಾವಿ)-3. ಕಾಲ: 58.69 ಸೆ.

## ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಅಭಿಪ್ರಾಯ

# ಕಪ್ ಗೆಲ್ಲಲು ಇದು ಉತ್ತಮ ಅವಕಾಶ





ರವಿಶಾಸ್ತ್ರಿ

**ನವದೆಹಲಿ (ಪಿಟಿಐ):** 'ಭಾರತ ತಂಡ ಆಡುತ್ತಿರುವ ರೀತಿಯನ್ನು ನೋಡಿದರೆ, ವಿಶ್ವಕಪ್ ಗೆಲ್ಲಲು ಇದು ಅತ್ಯುತ್ತಮ ಅವಕಾಶ' ಎಂದು ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ.

'ಭಾರತ ತಂಡ ಏಕದಿನ ವಿಶ್ವಕಪ್‌ಅನ್ನು 12 ವರ್ಷಗಳ ಹಿಂದೆ ಕೊನೆಯದಾಗಿ ಜಯಿಸಿತ್ತು. ಅಂತಹದೇ ಸಾಧನೆ ಪುನರಾವರ್ತಿಸುವ ಅವಕಾಶ ಈ ಬಾರಿ ಒದಗಿ ಬಂದಿದೆ' ಎಂದು ಕಾರ್ಯಕ್ರಮವೊಂದರಲ್ಲಿ ತಿಳಿಸಿದರು.

'ಈ ಬಾರಿ ಟ್ರೋಫಿ ಜಯಿಸಲು ವಿಫಲವಾದರೆ, ಚಾಂಪಿಯನ್ ಆಗಲು ಮತ್ತೆ ಕೆಲವು ವಿಶ್ವಕಪ್‌ಗಳವರೆಗೆ ಕಾಯಬೇಕಾಗಬಹುದು. ಆದ್ದರಿಂದ ತವರು ನೆಲದಲ್ಲಿ ಈಗ ಕಪ್ ಗೆಲ್ಲಲು ಲಭಿಸಿರುವ ಅವಕಾಶವನ್ನು ಬಳಸಿಕೊಳ್ಳಬೇಕು' ಎಂದರು.

ತಂಡದ ಬೌಲರ್‌ಗಳ ಪ್ರದರ್ಶನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಅವರು, 'ಬೌಲರ್‌ಗಳು ಅಸಾಧಾರಣ ಪ್ರದರ್ಶನ ನೀಡಿದ್ದಾರೆ. ಇಂತಹ ಬೌಲಿಂಗ್ ವಿಭಾಗ ತಂಡಕ್ಕೆ ರಾತ್ರೋರಾತ್ರಿ ಲಭಿಸಿಲ್ಲ. ಅವರು (ಬೌಲರ್‌ಗಳು) ಕಳೆದ 4-5 ವರ್ಷಗಳಿಂದ ಜತೆಯಾಗಿ ಆಡುವ ಮೂಲಕ ಅವರು ಈ ಹಂತ ತಲುಪಿದ್ದಾರೆ. ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದಾರೆ' ಎಂದರು.

ವೇಗಿಗಳಾದ ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಹಾಗೂ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ ಅವರು ಈ ಟೂರ್ನಿಯಲ್ಲಿ ಎದುರಾಳಿ ತಂಡಗಳ ಬ್ಯಾಟರ್‌ಗಳನ್ನು ಕಾಡಿದ್ದಾರೆ.

# ಸೆಮಿಯಲ್ಲಿ ಸ್ಥಿರ ಪ್ರದರ್ಶನ: ರಚಿನ್ ವಿಶ್ವಾಸ



ರಚಿನ್ ರವೀಂದ್ರ

**ನವದೆಹಲಿ (ಪಿಟಿಐ):** ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆಯುವ ಭಾರತ ವಿರುದ್ಧದ ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್‌ನ ತಂಡವು ಒತ್ತಡದ ನಡುವೆಯೂ ಸ್ಥಿರ ಪ್ರದರ್ಶನ ನೀಡಲಿದೆ ಎಂದು ಆ ತಂಡದ ಪ್ರಮುಖ ಬ್ಯಾಟರ್ ರಚಿನ್ ರವೀಂದ್ರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚೊಚ್ಚಲ ವಿಶ್ವಕಪ್ ಟೂರ್ನಿ ಆಡುತ್ತಿರುವ ಬೆಂಗಳೂರು ಮೂಲದ ರಚಿನ್ ಅವರು 9 ಪಂದ್ಯಗಳಲ್ಲಿ ಮೂರು ಶತಕ ಸೇರಿದಂತೆ 565 ರನ್ ಕಲೆಹಾಕಿ, ಟೂರ್ನಿಯಲ್ಲಿ ಮೂರನೇ ಗರಿಷ್ಠ ಸ್ಕೋರರ್ ಆಗಿದ್ದಾರೆ. ಭಾರತದ ವಿರಾಟ್ ಕೊಹ್ಲಿ (594), ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ (591) ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿದ್ದಾರೆ.

'ನಾವು ಪ್ರತಿಯೊಂದು ಪಂದ್ಯವನ್ನು ಗೆಲ್ಲಲು ಸಾಧ್ಯವಿಲ್ಲ ಎಂಬ ಅರಿವಿದೆ. ಪಂದ್ಯವನ್ನು ಸೋಲಬಹುದು ಅಥವಾ ಗೆಲ್ಲಬಹುದು. ಆದರೆ, ನಾವು ಹೇಗೆ ಆಡುತ್ತೇವೆ ಎಂಬುದು ಮುಖ್ಯವಾಗುತ್ತದೆ' ಎಂದು 23 ವರ್ಷದ ರಚಿನ್ ಹೇಳಿದ್ದಾರೆ.

2015ರ ವಿಶ್ವಕಪ್ ಫೈನಲ್‌ನಲ್ಲಿ ಕಿವೀಸ್ ತಂಡವು ಆಸ್ಟ್ರೇಲಿಯಾ ವಿರುದ್ಧ ಸೋತಿತ್ತು. 2019ರ ಟೂರ್ನಿಯ ಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಪರಾಭವಗೊಂಡಿತ್ತು.

'ಕಳೆದ ನಾಲ್ಕೈದು ಟೂರ್ನಿಗಳಲ್ಲಿ ತಮ್ಮ ತಂಡವು ಉತ್ತಮ ಪ್ರದರ್ಶನ ನೀಡಿದೆ. ಈ ಟೂರ್ನಿಯಲ್ಲೂ ತಂಡ ಸ್ಥಿರ ಪ್ರದರ್ಶನ ನೀಡುತ್ತಿದೆ. ಭಾರತ ವಿರುದ್ಧದ ನಾಕೌಟ್ ಪಂದ್ಯಕ್ಕಾಗಿ ನಾನು ನಿಜವಾಗಿಯೂ ಉತ್ಸುಕನಾಗಿದ್ದೇನೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಟೂರ್ನಿಯ ವೇಳೆ ಬೆಂಗಳೂರಿನಲ್ಲಿ ಪಂದ್ಯ ಆಡಿರುವುದು ವಿಶೇಷ ಅನುಭವ. ನಾನು ಬಾಲ್ಯದಲ್ಲಿ ಭೇಟಿ ನೀಡಿ, ಸಾಕಷ್ಟು ಸಮಯ ಅಲ್ಲಿ ಕಳೆದಿದ್ದೇನೆ' ಎಂದು ನೆನಪಿಸಿಕೊಂಡಿದ್ದಾರೆ.

# ಟೆನಿಸ್: ಜೈನ್ ವಿಶ್ವವಿದ್ಯಾಲಯ ತಂಡಕ್ಕೆ ಪ್ರಶಸ್ತಿ



ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದ ಜೈನ್ ವಿಶ್ವವಿದ್ಯಾಲಯದ ಟೆನಿಸ್ ತಂಡ

**ಬೆಂಗಳೂರು:** ಇಲ್ಲಿನ ಜೈನ್ ವಿಶ್ವವಿದ್ಯಾಲಯ ತಂಡವು ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಕನಕಪುರದ ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಈಚೆಗೆ ನಡೆದ ಫೈನಲ್ ಪಂದ್ಯದಲ್ಲಿ ಜೈನ್ ತಂಡವು 2-1ರಿಂದ ತಮಿಳುನಾಡಿನ ಯುನಿವರ್ಸಿಟಿ ಆಫ್ ಮದ್ರಾಸ್ ತಂಡವನ್ನು ಮಣಿಸಿ ಪ್ರಶಸ್ತಿ ಗೆದ್ದಿತು. ಮದ್ರಾಸ್ ತಂಡ ರನ್ನರ್ ಅಪ್ ಆಯಿತು.

ಸೆಮಿಫೈನಲ್‌ನಲ್ಲಿ ಜೈನ್ ತಂಡವು 2-1ರಿಂದ ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಟೆಕ್ನಾಲಜಿ ವಿರುದ್ಧ; ಮದ್ರಾಸ್ ತಂಡವು 2-1ರಿಂದ ಅದೇ ರಾಜ್ಯದ ಉಸ್ಮಾನಿಯಾ ವಿಶ್ವವಿದ್ಯಾಲಯ ವಿರುದ್ಧ ಗೆಲುವು ಸಾಧಿಸಿತ್ತು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಎಸ್‌ಆರ್‌ಎಂ ತಂಡವು 2-0ಯಿಂದ ಉಸ್ಮಾನಿಯಾ ತಂಡವನ್ನು ಸೋಲಿಸಿತು.

# ವಿಂಡೀಸ್ ಪ್ರವಾಸ: ಬಟ್ಲರ್ ನಾಯಕ



**ಲಂಡನ್ (ಪಿಟಿಐ):** ವೆಸ್ಟ್‌ಇಂಡೀಸ್ ವಿರುದ್ಧ ಮುಂದಿನ ತಿಂಗಳು ನಡೆಯಲಿರುವ ಏಕದಿನ ಮತ್ತು ಟಿ20 ಕ್ರಿಕೆಟ್ ಸರಣಿಗೆ ಇಂಗ್ಲೆಂಡ್ ತಂಡವನ್ನು ಪ್ರಕಟಿಸಲಾಗಿದ್ದು, ಜೋಸ್ ಬಟ್ಲರ್ ಅವರನ್ನೇ ನಾಯಕನಾಗಿ ಮುಂದುವರಿಸಲಾಗಿದೆ.

ಬಟ್ಲರ್ ಸೇರಿದಂತೆ ಏಕದಿನ ವಿಶ್ವಕಪ್‌ನಲ್ಲಿ ಆಡಿದ ಆರು ಆಟಗಾರರನ್ನು ಏಕದಿನ ಸರಣಿಗೆ ತಂಡದಲ್ಲಿ ಉಳಿಸಿಕೊಳ್ಳಲಾಗಿದೆ. ಇತರ ಐವರೆಂದರೆ ಗಸ್ ಅಟ್ಕಿನ್ಸನ್, ಹ್ಯಾರಿ ಬ್ರೂಕ್, ಬ್ರೈಡನ್ ಕಾರ್ಸ್, ಸ್ಯಾಮ್ ಕರನ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್.

ವೇಗಿಗಳಾದ ಜೋಶ್ ಟಂಗ್ ಮತ್ತು ಜಾನ್ ಟರ್ನರ್ಸ್ ಅವರಿಗೆ ಇದೇ ಮೊದಲ ಬಾರಿ ಏಕದಿನ ಮತ್ತು ಟಿ20 ತಂಡದಲ್ಲಿ ಅವಕಾಶ ಲಭಿಸಿದೆ.

ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ ಈ ವಿಶ್ವಕಪ್‌ನಲ್ಲಿ ಹೀನಾಯ ಪ್ರದರ್ಶನ ನೀಡಿತ್ತು. ಆಡಿದ ಒಂಬತ್ತು ಪಂದ್ಯಗಳಲ್ಲಿ ಮೂರರಲ್ಲಿ ಮಾತ್ರ ಜಯಿಸಿತ್ತು.

'ಇಂಗ್ಲೆಂಡ್ ತಂಡದಲ್ಲಿ ಭಾರೀ ಬದಲಾವಣೆಯ ಅಗತ್ಯವಿಲ್ಲ' ಎಂದು ಶನಿವಾರ ಪಾಕಿಸ್ತಾನ ವಿರುದ್ಧದ ಪಂದ್ಯದ ಬಳಿಕ ಬಟ್ಲರ್ ಹೇಳಿದ್ದರು.

ವಿಂಡೀಸ್ ಪ್ರವಾಸ ಡಿ.3 ರಂದು ಆರಂಭವಾಗಲಿದ್ದು, ಇಂಗ್ಲೆಂಡ್ ತಂಡ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನಾಡಲಿದೆ.

**ಶಸ್ತ್ರಚಿಕಿತ್ಸೆಗೆ ಒಳಗಾಗಲಿರುವ ಸ್ಟೋಕ್ಸ್:** ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು ಈ ತಿಂಗಳ ಕೊನೆಯಲ್ಲಿ ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದಾರೆ. ಏಕದಿನ ಮಾದರಿಗೆ ನಿವೃತ್ತಿ ಪ್ರಕಟಿಸಿದ್ದ ಸ್ಟೋಕ್ಸ್, ವಿಶ್ವಕಪ್‌ನಲ್ಲಿ ಆಡಲು ತಮ್ಮ ನಿರ್ಧಾರ ಹಿಂಪಡೆದಿದ್ದರು. ಏಕದಿನ ಮಾದರಿಯಲ್ಲಿ ಆಟ ಮುಂದುವರಿಸಬೇಕೇ ಎಂಬುದನ್ನು ಶಸ್ತ್ರಕ್ರಿಯೆ ಬಳಿಕ ತೀರ್ಮಾನಿಸಲಾಗುವುದು ಎಂದು ಅವರು ಹೇಳಿದರು.

# ಅಮಾನತು ಹಿಂಪಡೆಯಲು ಮೆಂಡಿಸ್ ಮನವಿ



ಕುಸಾಲ್ ಮೆಂಡಿಸ್

**ಕೊಲಂಬೊ (ಎಎಫ್‌ಪಿ):** ಶ್ರೀಲಂಕಾ ಕ್ರಿಕೆಟ್ ಮಂಡಳಿಯನ್ನು ಅಮಾನತುಗೊಳಿಸಿರುವ ಕ್ರಮವನ್ನು ಹಿಂಪಡೆಯುವಂತೆ ಲಂಕಾ ತಂಡದ ನಾಯಕ ಕುಸಾಲ್ ಮೆಂಡಿಸ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ (ಐಸಿಸಿ) ಮನವಿ ಮಾಡಿದ್ದಾರೆ.

'ಕ್ರಿಕೆಟ್ ನಮ್ಮ ವೃತ್ತಿಯಾಗಿದ್ದು, ಏನೂ ಮಾಡದೆ ಮನೆಯಲ್ಲಿ ಕುಳಿತಿರಲು ಸಾಧ್ಯವಿಲ್ಲ' ಎಂದು ಅವರು ಭಾನುವಾರ ಇಲ್ಲಿ ತಿಳಿಸಿದ್ದಾರೆ.

'ಮುಂದಿನ ವರ್ಷ ಹಲವು ಸರಣಿಗಳನ್ನು ಆಡಬೇಕಿದ್ದು, ಅದಕ್ಕಾಗಿ ಅಭ್ಯಾಸ ನಡೆಸಬೇಕಿದೆ. ಇಂತಹ ಬೆಳವಣಿಗೆಗಳು ಆಟಗಾರರ ನಿಯಂತ್ರಣದಲ್ಲಿರುವುದಿಲ್ಲ. ಅಮಾನತು ವಾಪಸ್ ಪಡೆಯಬೇಕು ಎಂದು ಒಬ್ಬ ನಾಯಕನಾಗಿ ನಾನು ಆಶಿಸುತ್ತೇನೆ. ಹಾಗಾದಲ್ಲಿ ನಮಗೆ ಆಟ ಮುಂದುವರಿಸಲು ಸಾಧ್ಯ' ಎಂದರು.

19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿ ಶ್ರೀಲಂಕಾ ಆತಿಥ್ಯದಲ್ಲಿ ಮುಂದಿನ ಜನವರಿ ತಿಂಗಳಲ್ಲಿ ನಡೆಯಲಿದೆ. ಅಮಾನತು ಕ್ರಮವು ಈ ಟೂರ್ನಿಯ ಆತಿಥ್ಯದ ಮೇಲೆ ಪರಿಣಾಮ ಬೀರಲಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಕರ್ತವ್ಯ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಯಲು ಲಂಕಾ ಕ್ರಿಕೆಟ್ ಮಂಡಳಿ ವಿಫಲವಾಗಿದೆ ಎಂದು ಹೇಳಿದ್ದ ಐಸಿಸಿ, ಮಂಡಳಿಯನ್ನು ಪೂರ್ಣಾವಧಿ ಸದಸ್ಯ ಸ್ಥಾನದಿಂದ ಶುಕ್ರವಾರ ಅಮಾನತುಗೊಳಿಸಿತ್ತು. ಆಡಳಿತದಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಯುವಲ್ಲಿಯೂ ಮಂಡಳಿ ಗಂಭೀರ ಲೋಪ ಎಸಗಿದೆ ಎಂದು ಆರೋಪಿಸಿತ್ತು